ಸೋಮವಾರ, ಏಪ್ರಿಲ್ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 93 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಎಸ್ಸೆಸ್ಸೆಲ್ಸಿ ಪಾಸಾದ ಗ್ರಾಮೀಣ ಮಕ್ಕಳಿಗಾಗಿ ರಾಜ್ಯದ ಐದು ಪಾಲಿಟೆಕ್ನಿಕ್‌ಗಳಲ್ಲಿ ಪಶುಸಂಗೋಪನಾ ಡಿಪ್ಲೊಮಾ ಕೋರ್ಸ್‌ಗಳಿದ್ದು, ಕನ್ನಡದಲ್ಲೇ ಕಲಿಸಲಾಗುತ್ತಿದೆ.

ಸಂಖ್ಯೆ-ಸುದ್ದಿ
ರಫ್ತಿಗಿಂತ ಆಮದು ಭಾರಿ ಏರಿಕೆ ವ್ಯಾಪಾರ ಕೊರತೆ ಹೊರೆ

ಗುಜರಾತ್‌ನಲ್ಲಿ ಎಎಪಿ ರೋಡ್ ಷೋ 6

ರೈತರ ರಕ್ತ ಕುಡಿಯುತ್ತಿರುವ ಸರ್ಕಾರ: ಸಿದ್ದರಾಮಯ್ಯ ವಾಗ್ದಾಳಿ 5

ಉಕ್ರೇನ್ ಮೇಲೆ ಬಾಂಬ್, ಕ್ಷಿಪಣಿ ಸುರಿಮಳೆ 10

'ಬೆಲೆ ಏರಿಕೆ ಮರೆಮಾಚಲು ಕೋಮುವಾದ' 5

ಅವಿಶ್ವಾಸ ನಿರ್ಣಯ ಸ್ವೀಕರಿಸಲು ನಕಾರ • ಮೂರು ತಿಂಗಳೊಳಗೆ ಚುನಾವಣೆ ಸಾಧ್ಯತೆ

ಪಾಕಿಸ್ತಾನ ಸಂಸತ್ ವಿಸರ್ಜನೆ

ಇಸ್ಲಾಮಾಬಾದ್ (ಎಎಫ್‌ಪಿ): ಪಾಕಿಸ್ತಾನ ಪ್ರಧಾನಿ ಹುದ್ದೆಯಿಂದ ತಮ್ಮನ್ನು ಪದಚ್ಯುತಗೊಳಿಸುವ ಪ್ರಯತ್ನವನ್ನು ಇಮ್ರಾನ್ ಖಾನ್ ಭಾನುವಾರ ವಿಫಲಗೊಳಿಸಿದ್ದಾರೆ. ಸಂಸತ್ತು ವಿಸರ್ಜನೆಗೆ ಅಧ್ಯಕ್ಷ ಆರಿಫ್ ಅಲ್ವಿ ಅವರ ಅನುಮೋದನೆಯನ್ನು ಇಮ್ರಾನ್ ಪಡೆದುಕೊಂಡಿದ್ದಾರೆ. ಹೀಗಾಗಿ, ಮೂರು ತಿಂಗಳಲ್ಲಿ ಪಾಕಿಸ್ತಾನ ಸಂಸತ್ತಿಗೆ ಚುನಾವಣೆ ನಡೆಯಲಿದೆ.

ಇಮ್ರಾನ್ ಖಾನ್

ಪಾಕಿಸ್ತಾನದ ಸಂಸತ್ತು 'ನ್ಯಾಷನಲ್ ಅಸೆಂಬ್ಲಿ'ಯು ಭಾನುವಾರ ಭಾರಿ ಪ್ರಹಸನಕ್ಕೆ ಸಾಕ್ಷಿಯಾಯಿತು. ಇಮ್ರಾನ್ ಅವರ ವಿರುದ್ಧ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ಸ್ವೀಕರಿಸಲು ಉಪ ಸ್ಪೀಕರ್ ನಿರಾಕರಿಸಿದರು. ಅವಿಶ್ವಾಸ ನಿರ್ಣಯವು ಅಸಾಂವಿಧಾನಿಕ ಎಂದು ಅವರು ಹೇಳಿದರು. ಇದೇ ಹೊತ್ತಿಗೆ, ಸುದ್ದಿವಾಹಿನಿಯಲ್ಲಿ ಕಾಣಿಸಿಕೊಂಡ ಇಮ್ರಾನ್ ಖಾನ್, ಪಾಕಿಸ್ತಾನದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವಿದೇಶಿ ಶಕ್ತಿಗಳು ಹಸ್ತಕ್ಷೇಪ ನಡೆಸುತ್ತಿವೆ ಎಂದು ದೂರಿದರು.

'ಸಂಸತ್ತನ್ನು ವಿಸರ್ಜಿಸುವಂತೆ ಅಧ್ಯಕ್ಷರಿಗೆ ಶಿಫಾರಸು ಮಾಡಿದ್ದೇನೆ. ಚುನಾವಣೆ ನಡೆಯಲಿ. ಏನು ಬೇಕು ಎಂಬುದನ್ನು ದೇಶವು ತೀರ್ಮಾನಿಸಲಿ' ಎಂದು ಇಮ್ರಾನ್ ಹೇಳಿದರು. ಪಾಕಿಸ್ತಾನದ ಯಾವ ಪ್ರಧಾನಿಯೂ ಅವಧಿ ಪೂರ್ಣಗೊಳಿಸಿದ ಇತಿಹಾಸ ಇಲ್ಲ. 2018ರಲ್ಲಿ ಅಧಿಕಾರಕ್ಕೆ ಬಂದ ಇಮ್ರಾನ್ ಅವರು ತಮ್ಮ ಆಳ್ವಿಕೆಯ ಅತ್ಯಂತ ದೊಡ್ಡ ಸವಾಲು ಎದುರಿಸುತ್ತಿದ್ದಾರೆ.

ಅವಿಶ್ವಾಸ ನಿರ್ಣಯವನ್ನು ಸಂಸತ್ತು ಭಾನುವಾರ ಚರ್ಚೆಗೆ ಎತ್ತಿಕೊಳ್ಳಬೇಕಿತ್ತು. ಅವಿಶ್ವಾಸ ನಿರ್ಣಯ ಅಂಗೀಕಾರವಾಗುವ ಸಾಧ್ಯತೆಯೇ ದಟ್ಟವಾಗಿತ್ತು. ಆದರೆ, ಇಮ್ರಾನ್ ನಿಷ್ಠರಾಗಿರುವ ಉಪ ಸ್ಪೀಕರ್ ಅವರು ನಿರ್ಣಯವನ್ನು ಸ್ವೀಕರಿಸಲು ನಿರಾಕರಿಸಿದರು. ಇದು ಸಂಸತ್ತಿನಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

1992ರಲ್ಲಿ ಪಾಕಿಸ್ತಾನವು ಕ್ರಿಕೆಟ್ ವಿಶ್ವಕಪ್ ಗೆದ್ದ ತಂಡದ ನಾಯಕರಾಗಿದ್ದ ಇಮ್ರಾನ್ ಅವರು ತಮ್ಮ ಕೈಯಲ್ಲಿ ಇನ್ನೂ ಅಸ್ತ್ರಗಳಿವೆ ಎಂದು ಶನಿವಾರ ಹೇಳಿದ್ದರು. ಅದರಂತೆ, ಸಂಸತ್ತು ವಿಸರ್ಜನೆಯ ಶಿಫಾರಸಿನ ಮೂಲಕ ವಿರೋಧ ಪಕ್ಷಗಳನ್ನು ತಬ್ಬಿಬ್ಬುಗೊಳಿಸಿದ್ದಾರೆ.

'ಪಾಕಿಸ್ತಾನದ ಸಾಂವಿಧಾನಿಕ ಇತಿಹಾಸದಲ್ಲಿ ಈ ದಿನವು ಕರಾಳ ದಿನವಾಗಿ ದಾಖಲಾಗಲಿದೆ' ಎಂದು ವಿರೋಧ ಪಕ್ಷದ ನಾಯಕ ಶಾಬಾಝ್ ಶರೀಫ್ ಹೇಳಿದ್ದಾರೆ. ಅವಿಶ್ವಾಸ ನಿರ್ಣಯಕ್ಕೆ ಗೆಲುವಾದರೆ, ಶರೀಫ್ ಅವರು ಪ್ರಧಾನಿ ಹುದ್ದೆಗೆ ಏರುವುದು ಖಚಿತವಾಗಿತ್ತು.



ಇಸ್ಲಾಮಾಬಾದ್‌ನ ಸಂಸತ್ ಭವನದ ಮುಂಭಾಗದಲ್ಲಿ ಭಾನುವಾರ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು – ಎಪಿ/ಪಿಟಿಐ ಚಿತ್ರ

ಕೋರ್ಟ್ ಮಧ್ಯಪ್ರವೇಶ

ಪ್ರಧಾನಿ ಇಮ್ರಾನ್ ಮತ್ತು ಅಧ್ಯಕ್ಷ ಅಲ್ವಿ ಅವರು ಸಂಸತ್ತು ವಿಸರ್ಜನೆಗೆ ಸಂಬಂಧಿಸಿ ನಡೆಸುವ ಎಲ್ಲ ಚಟುವಟಿಕೆಗಳು ಮತ್ತು ನೀಡುವ ಆದೇಶಗಳು ನ್ಯಾಯಾಲಯದ ಪರಿಶೀಲನೆಗೆ ಒಳಪಡಲಿವೆ ಎಂದು ಪಾಕಿಸ್ತಾನದ ಮುಖ್ಯ ನ್ಯಾಯಮೂರ್ತಿ ಉಮರ್ ಅತಾ ಬಂದ್ಯಾಲ್ ಹೇಳಿದ್ದಾರೆ.

ಉಮರ್ ಅವರು ರಾಜಕೀಯ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಮೂವರು ನ್ಯಾಯಮೂರ್ತಿಗಳ ಪೀಠವು ಆರಂಭಿಕ ವಿಚಾರಣೆ ನಡೆಸಿದೆ. ಅಧ್ಯಕ್ಷ ಅಲ್ವಿ ಮತ್ತು ಸಂಸತ್ತಿನ ಉಪ ಸ್ಪೀಕರ್‌ಗೆ ನೋಟಿಸ್ ನೀಡಲಾಗಿದೆ. ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

ವಿದೇಶಿ ಸಂಚಿನ ಆರೋಪ

ತಮ್ಮನ್ನು ಪ್ರಧಾನಿ ಹುದ್ದೆಯಿಂದ ಕೆಳಕ್ಕೆ ಇಳಿಸುವುದಕ್ಕಾಗಿ ವಿದೇಶಿ ಶಕ್ತಿಗಳು ಯತ್ನಿಸುತ್ತಿವೆ ಎಂದು ಇಮ್ರಾನ್ ಅವರು ಕೆಲ ದಿನಗಳಿಂದ ಹೇಳುತ್ತಲೇ ಇದ್ದಾರೆ. ರಷ್ಯಾ ಮತ್ತು ಚೀನಾಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಆ ದೇಶಗಳ ಪರವಾಗಿ ಮತ್ತು ಪಶ್ಚಿಮದ ದೇಶಗಳ ವಿರುದ್ಧ ನಿಲುವು ತಳೆದಿರುವುದೇ ಇದಕ್ಕೆ ಕಾರಣ ಎಂದಿದ್ದಾರೆ. ಪಾಕಿಸ್ತಾನದ ವ್ಯವಹಾರಗಳಲ್ಲಿ ಅಮೆರಿಕವು ಕೈಯಾಡಿಸುತ್ತಿದೆ ಎಂದು ಅವರು ಗುರುವಾರ ಆರೋಪಿಸಿದ್ದರು.

ಇಮ್ರಾನ್ ಅವರು ಅಧಿಕಾರದಿಂದ ಕೆಳಕ್ಕೆ ಇಳಿದರೆ, ಅಮೆರಿಕ–ಪಾಕಿಸ್ತಾನ ಸಂಬಂಧ ಉತ್ತಮಗೊಳ್ಳಲಿದೆ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ ಎಂಬ ಮಾಹಿತಿ ಇರುವ ಪತ್ರವನ್ನು ಪಾಕಿಸ್ತಾನದಲ್ಲಿರುವ ಅಮೆರಿಕದ ರಾಯಭಾರಿಯು ಇಮ್ರಾನ್ ಅವರಿಗೆ ನೀಡಿದ್ದಾರೆ ಎಂದು ಪಾಕಿಸ್ತಾನದ ಮಾಧ್ಯಮಗಳು ವರದಿ ಮಾಡಿವೆ.

ಈ ಆರೋಪದಲ್ಲಿ ಯಾವುದೇ ಹುರುಳು ಇಲ್ಲ ಎಂದು ಅಮೆರಿಕದ ವಿದೇಶಾಂಗ ವಕ್ತಾರ ನೆಡ್ ಪ್ರೈಸ್ ಅವರು ಕಳೆದ ವಾರವೇ ಹೇಳಿದ್ದರು.

ಬಹುಮತ ಇಲ್ಲ?

ಪಾಕಿಸ್ತಾನ ಸಂಸತ್ತಿನ ಒಟ್ಟು ಸದಸ್ಯ ಬಲ 342. ಇಮ್ರಾನ್ ನೇತೃತ್ವದ ಹಲವು ಪಕ್ಷಗಳ ಮೈತ್ರಿಕೂಟವು ಅಧಿಕಾರದಲ್ಲಿದೆ. ಆದರೆ, ಮಿತ್ರಪಕ್ಷಗಳ ಏಳು ಸಂಸದರು ಸರ್ಕಾರದ ವಿರುದ್ಧ ಮತ ಹಾಕುವುದಾಗಿ ಘೋಷಿಸಿದ್ದರು. ಇಮ್ರಾನ್ ಅವರ ಪಕ್ಷ ಪಾಕಿಸ್ತಾನ್ ತೆಹ್ರಿಕ್ ಎ ಇನ್ಸಾಫ್‌ನ ಹತ್ತಕ್ಕೂ ಹೆಚ್ಚು ಸಂಸದರು ಅವಿಶ್ವಾಸ ನಿರ್ಣಯವನ್ನು ಬೆಂಬಲಿಸುವುದಾಗಿ ಹೇಳಿದ್ದರು.

ಇನ್ನೊಂದು ಸುದ್ದಿ 11

ಪರಿಷತ್ ಚುನಾವಣೆ ಗರಿಗೆದರಿದ ರಾಜಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಶಿಕ್ಷಕರ ಹಾಗೂ ಪದವೀಧರರ ತಲಾ ಎರಡು ಕ್ಷೇತ್ರಗಳು ಜೂನ್‌ಗೆ ತೆರವಾಗಲಿವೆ. ಪಶ್ಚಿಮ ಶಿಕ್ಷಕರ ಕ್ಷೇತ್ರದ ಹಾಲಿ ಸದಸ್ಯರಾಗಿರುವ ಸಭಾಪತಿ ಬಸವರಾಜ ಹೊರಟ್ಟಿ ಜೆಡಿಎಸ್ ತೊರೆದು ಬಿಜೆಪಿಯಿಂದ ಸ್ಪರ್ಧಿಸುವುದಾಗಿ ಪ್ರಕಟಿಸಿರುವುದರಿಂದ ಚುನಾವಣಾ ರಾಜಕಾರಣ ಮತ್ತಷ್ಟು ಗರಿಗೆದರಿದೆ.

ವಾಯವ್ಯ ಮತ್ತು ದಕ್ಷಿಣ ಪದವೀಧರ ಕ್ಷೇತ್ರಗಳು, ವಾಯವ್ಯ ಮತ್ತು ಪಶ್ಚಿಮ ಶಿಕ್ಷಕರ ಕ್ಷೇತ್ರಗಳು ಜುಲೈ 4 ಕ್ಕೆ ತೆರವಾಗಲಿವೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಹಾಲಿ ಸದಸ್ಯ ಅರುಣ ಶಹಾಪುರ, ವಾಯುವ್ಯ ಪದವೀಧರ ಕ್ಷೇತ್ರದಲ್ಲಿ ಹಾಲಿ ಸದಸ್ಯ ಹಣಮಂತ ಆರ್. ನಿರಾಣಿ ಮತ್ತು ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಎಂ.ವಿ. ಶಿವಶಂಕರ್ ಅವರನ್ನು ಕಣಕ್ಕಿಳಿಸುವುದಾಗಿ ಬಿಜೆಪಿ ಘೋಷಿಸಿತ್ತು.

ಬಸವರಾಜ ಹೊರಟ್ಟಿ ಬಿಜೆಪಿ ಸೇರಿ, ಮುಂದಿನ ಚುನಾವಣೆ ಎದುರಿಸಲು ಬಯಸಿದ್ದರು. ಈ ಕಾರಣಕ್ಕಾಗಿಯೇ ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯನ್ನು ಪ್ರಕಟಿಸಿರಲಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ನಡೆದ ಬಿಜೆಪಿ ರಾಜ್ಯ ಪ್ರಮುಖರ ಸಮಿತಿ ಸಭೆಯಲ್ಲಿ ಹೊರಟ್ಟಿ ಸೇರ್ಪಡೆ ಕುರಿತು ಚರ್ಚೆ ನಡೆದಿದೆ.

5ನೇ ಪುಟ ನೋಡಿ

ಬಿಜೆಪಿಯಿಂದಲೇ ಸ್ಪರ್ಧೆ: ಹೊರಟ್ಟಿ

ಹುಬ್ಬಳ್ಳಿ: 'ಮುಂಬರುವ ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭಾನುವಾರ ತಿಳಿಸಿದರು.



ಮಾಧ್ಯಮಗಳ ಜೊತೆ ಮಾತನಾಡಿದ ಅವರು, 'ಈ ಬಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಬಿ.ಎಸ್. ಯಡಿಯೂರಪ್ಪ ನನ್ನೊಂದಿಗೆ ಮಾತನಾಡಿದ್ದಾರೆ. ಚುನಾವಣೆ ಘೋಷಣೆಯಾದ ಬಳಿಕ ಬಿಜೆಪಿ ಸೇರ್ಪಡೆ ದಿನಾಂಕ ನಿಗದಿಪಡಿಸಲಾಗುವುದು' ಎಂದರು.

'ನನಗೆ ಟಿಕೆಟ್ ನೀಡಲೆಂದೇ ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಘೋಷಿಸಿಲ್ಲ. ನನ್ನ ನಿರ್ಧಾರಕ್ಕೆ ಎಚ್.ಡಿ.ಕುಮಾರಸ್ವಾಮಿ ಕೂಡಾ ಸಹಮತ ವ್ಯಕ್ತಪಡಿಸಿದ್ದಾರೆ. ಬಿಜೆಪಿಯ ಎಲ್ಲ ನಾಯಕರು ಒಪ್ಪಿದ್ದರಿಂದ ಆ ಪಕ್ಷ ಸೇರುವುದು ಅನಿವಾರ್ಯವಾಗಿತ್ತು' ಎಂದರು. ನಿಮ್ಮ ಸ್ಪರ್ಧೆಗೆ ಬಿಜೆಪಿಯ ಕೆಲವರಿಂದ ವಿರೋಧವಿದೆಯಲ್ಲ ಎಂಬ ಪ್ರಶ್ನೆಗೆ 'ಯಾರು ವಿರೋಧ ಮಾಡುತ್ತಿದ್ದಾರೆ? ಅದು ನನಗೆ ಬೇಕಾಗಿಲ್ಲ' ಎಂದರು.

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ತಯಾರಕರು
SDM Ayurveda Pharmacy
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
Ph: 0820-2520852, 8970977513

ಶ್ರೀಲಂಕಾ: ಸಚಿವರ ಸಾಮೂಹಿಕ ರಾಜೀನಾಮೆ

ಕೊಲಂಬೊ (ಪಿಟಿಐ): ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾದಲ್ಲಿ ಭಾನುವಾರ ತಡರಾತ್ರಿ ನಡೆದ ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಸಂಪುಟದ ಸಚಿವರು ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿದ್ದಾರೆ.

ಮಹಿಂದಾ ರಾಜಪಕ್ಸ ಅವರು ಪ್ರಧಾನಿ ಹುದ್ದೆಯಲ್ಲಿಯೇ ಮುಂದುವರಿಯಲಿದ್ದಾರೆ ಎಂದು ಮೂಲಗಳು ಹೇಳಿವೆ.

ಇನ್ನೊಂದು ಸುದ್ದಿ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹಲಾಲ್ – ಜಟ್ಕಾ ವಿಚಾರದಲ್ಲಿ ರಾಜಕಾರಣ ಬೇಡ

ಸಮಾಜ ಒಡೆಯಲು ಕುತಂತ್ರ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಉಡುಪಿ: 'ಹಲಾಲ್, ಜಟ್ಕಾ ಹೆಸರಿನಲ್ಲಿ ಸಮಾಜ ಒಡೆಯುವ ಕುತಂತ್ರ ಮಾಡಲಾಗುತ್ತಿದೆ. ಯಾರು ಯಾವ ಪದ್ಧತಿ ಪಾಲಿಸುತ್ತಿದ್ದಾರೋ ಅದನ್ನೇ ಮುಂದುವರಿಸಿಕೊಂಡು ಹೋಗಲಿ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಭಾನುವಾರ ಕಾರ್ಕಳ ತಾಲ್ಲೂಕಿನ ನಿಟ್ಟೆಯಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣಾ ಘಟಕ ಉದ್ಘಾಟಿಸಿ ಮಾತನಾಡಿದ ಅವರು, 'ಹಲಾಲ್ ಹಾಗೂ ಜಟ್ಕಾ ವಿವಾದ ಸೃಷ್ಟಿಸಿರುವುದು ಕೆಲವು ವ್ಯಕ್ತಿಗಳು ಹಾಗೂ ಪಕ್ಷಗಳು' ಎಂದರು.

'ಹಲಾಲ್ ಹಾಗೂ ಜಟ್ಕಾ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ. ಚುನಾವಣೆಯಲ್ಲಿ ತೊಡೆ ತಟ್ಟೋಣ, ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಜನರ ಬಳಿ ಹೋಗೋಣ' ಎಂದು ಅವರು ಸವಾಲು ಹಾಕಿದರು.

'ದೇಶದಲ್ಲಿ ನಿರ್ನಾಮವಾಗಿರುವ ಕಾಂಗ್ರೆಸ್ ಪಕ್ಷವು ಈಗ ಹಿಜಾಬ್, ರಾಷ್ಟ್ರಧ್ವಜ, ಹಲಾಲ್ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದೆ. ಮುಸ್ಲಿಮರನ್ನು ಓಲೈಸುವ ಪ್ರಯತ್ನ ಒಳ್ಳೆಯದಲ್ಲ. ಬಿಜೆಪಿ ಹಿಂದುತ್ವದ ಪರವಾಗಿದ್ದರೂ ಮುಸ್ಲಿಮರ ವಿರೋಧಿಯಲ್ಲ. ರಾಷ್ಟ್ರಭಕ್ತ ಮುಸ್ಲಿಮರಿಗೆ ಗೌರವ ಕೊಡುತ್ತೇವೆ. ಆದರೆ, ಪಾಕಿಸ್ತಾನ ಜಿಂದಾಬಾದ್ ಎನ್ನುವವರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಎಚ್ಚರಿಸಿದರು.

'ಉಡುಪಿಯಲ್ಲಿ ಆರು ವಿದ್ಯಾರ್ಥಿನಿಯರು ಹಿಜಾಬ್ ಗೊಂದಲ ಹುಟ್ಟುಹಾಕಿದಾಗಲೇ ಸಮವಸ್ತ್ರ ಧರಿಸಿ ಕಾಲೇಜಿಗೆ ಹೋಗುವಂತೆ ಬುದ್ಧಿ ಹೇಳಿದ್ದರೆ ಇಡೀ ರಾಜ್ಯ ಹಾಗೂ ದೇಶ ತಣ್ಣಗೆ ಇರುತ್ತಿತ್ತು' ಎಂದು ಅವರು ಪ್ರತಿಪಾದಿಸಿದರು.

ಇನ್ನಷ್ಟು ಸುದ್ದಿಗಳು 6

ನರಬಲಿ ಕೇಳುತ್ತಿರುವ ಸರ್ಕಾರ: ದೇವನೂರ ಕಿಡಿ

ಮೈಸೂರು: 'ಬಜರಂಗದಳ, ಶ್ರೀರಾಮಸೇನೆಗೆ ಸರ್ಕಾರವೇ ಕಣ್ಸನ್ನೆ ಮಾಡಿ ಕಾನೂನು ಸ್ಥಿತಿ ಹದಗೆಡಿಸಲು ಛೂ ಬಿಟ್ಟಿದೆ. ಮಾಂಸಾಹಾರಿಗಳು ಪ್ರಾಣಿವಧೆ ಮಾಡುತ್ತಿದ್ದರೆ, ಸರ್ಕಾರ ತನ್ನ ಗೆಲುವಿಗೆ ನರಬಲಿ ಕೇಳುತ್ತಿದೆ' ಎಂದು ದೇವನೂರ ಮಹಾದೇವ ಕಿಡಿ ಕಾರಿದ್ದಾರೆ.

ಇಲ್ಲಿನ ಶಾಂತಿನಗರದ ಮುಸ್ಲಿಮರ ಮಳಿಗೆಯಲ್ಲಿ 'ಶಾಂತಿ ಸೌಹಾರ್ದ, ಸಹಬಾಳ್ವೆಯ ಸಂದೇಶ ಸಾರುವ ಕಾರಣಕ್ಕಾಗಿ' ಮಾಂಸ ಖರೀದಿಸಿ ಮಾತನಾಡಿದರು. 'ಆ ಸಂಘಟನೆಗಳ ಕಾರ್ಯಕರ್ತರಿಗೆ ಉದ್ಯೋಗ ನೀಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಇಲ್ಲ. ದ್ವೇಷ ಹೆಚ್ಚಿಸಿ ಜನ ಸಮುದಾಯವನ್ನು ಒಡೆಯಲು ಸರ್ಕಾರವೇ ಕುಮ್ಮಕ್ಕು ಕೊಡುತ್ತಿದೆ' ಎಂದು ತರಾಟೆಗೆ ತೆಗೆದುಕೊಂಡರು.

6ನೇ ಪುಟ ನೋಡಿ

ಬುಕಾ: 410 ನಾಗರಿಕರ ಹತ್ಯೆ

ರಷ್ಯಾದಿಂದ ನರಮೇಧ: ಸಾಕ್ಷಿಯಾದ ಸಾಮೂಹಿಕ ಸಮಾಧಿ

ಕೀವ್ (ಎಎಫ್‌ಪಿ): ರಷ್ಯಾ ಪಡೆಗಳು ಉಕ್ರೇನಿನಲ್ಲಿ ಆಕ್ರಮಿಸಿಕೊಂಡಿದ್ದ ಕೆಲವು ಸ್ಥಳಗಳನ್ನು ತೊರೆಯುವಾಗ ಕೀವ್ ಹೊರ ವಲಯದ ಉಪನಗರಗಳಲ್ಲಿ ಸಿಕ್ಕಸಿಕ್ಕವರ ಮೇಲೆ ಗುಂಡು ಹಾರಿಸಿದ್ದು, ಸುಮಾರು 410 ನಾಗರಿಕರನ್ನು ಹತ್ಯೆ ಮಾಡಿದೆ. ಕೆಲವೆಡೆ ಸಾಮೂಹಿಕವಾಗಿ ಸಮಾಧಿ ಮಾಡಿರುವ ಕೃತ್ಯ ಬೆಳಕಿಗೆ ಬಂದಿದೆ.

ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ ರಷ್ಯಾದ ಆಕ್ರಮಣಕ್ಕೆ ಸಿಲುಕಿದ್ದ ಕೀವ್ ಹೊರವಲಯದ ಉಪನಗರ ಬುಕಾದ ಬೀದಿ ಬೀದಿಗಳಲ್ಲಿ ನೂರಾರು ಸಂಖ್ಯೆಯಲ್ಲಿ ಮೃತದೇಹಗಳು ಪತ್ತೆಯಾಗಿವೆ. ಅನೇಕ ಕಡೆ ಜನರ ಕೈಗಳನ್ನು ಹಿಂದಕ್ಕೆ ಕಟ್ಟಿ, ತಲೆಯ ಹಿಂಭಾಗಕ್ಕೆ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ ಎಂದು ಬುಕಾ ಮೇಯರ್ ಅನಟೊಲಿ ಫೆಡೊರುಕ್ ಭಾನುವಾರ ತಿಳಿಸಿದ್ದಾರೆ.

ಬುಕಾ ಪಟ್ಟಣ ತೊರೆಯುವ ಮೊದಲು ರಷ್ಯಾ ಸೈನಿಕರು ರಸ್ತೆಗಳಲ್ಲಿ ನಾಗರಿಕರ ಕೈಗಳನ್ನು ಹಿಂದಕ್ಕೆ ಕಟ್ಟಿ ತಲೆಯ ಹಿಂಬದಿಗೆ ಗುಂಡು ಹಾರಿಸಿ ಸಾಮೂಹಿಕ ನರಮೇಧ ನಡೆಸಿರುವ ಕೃತ್ಯದ ಚಿತ್ರವನ್ನು ಉಕ್ರೇನ್ ಉಪಪ್ರಧಾನಿ ಮಿಖಾಯಿಲೊ ಪೆಡರೊವ್ ಭಾನುವಾರ ಟ್ವಿಟರ್‌ನಲ್ಲಿ ಪ್ರಕಟಿಸಿದ್ದಾರೆ

10ನೇ ಪುಟ ನೋಡಿ

Estd : 2006 Regd. No. : MSCS/CR1130/2014
TMCC
ISO 9001-2015 Certified
ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ-ಆಪರೇಟೀವ್
TUMKUR MERCHANTS CREDIT CO-OPERATIVE
(Multi State Co-Operative Society)
H.O. : J.C. Road, TUMKUR - 572 101, Karnataka. Ph.: 0816-2260146
Email : ho@tmccltd.com AI based website : https://mytmcc.in

Thanks to all our Shareholders and Customers for their support to achieve this Landmark

FINANCIAL POSITION as on 31-03-2022

(Rupees in Crores)

DEPOSITS	1239
ADVANCES	1148
NET PROFIT	35.37
NET NPA	0.56%

Subject to Audit

"Join & Grow with Us"

Dr. N.S.JAYAKUMAR
President

T.A. SRIKARA
Vice President

ಭಾಸ್ಕರ್ ರಾವ್ ಇಂದು ಎಎಪಿಗೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಬಿ. ಭಾಸ್ಕರ್ ರಾವ್ ಸೋಮವಾರ ಆಮ್ ಆದ್ಮಿ ಪಕ್ಷ (ಎಎಪಿ) ಸೇರಲಿದ್ದಾರೆ. 1990ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಅವರು, ಸೇವೆಯಿಂದ ಈಚೆಗೆ ಸ್ವಯಂ ನಿವೃತ್ತಿ ಪಡೆದಿದ್ದಾರೆ.

ಭಾಸ್ಕರ್ ರಾವ್

ಭಾಸ್ಕರ್ ರಾವ್ ರಾಜಕೀಯ ಪ್ರವೇಶಿಸುತ್ತಾರೆ ಎಂಬ ಸುದ್ದಿ ಅವರು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ ದಿನದಿಂದಲೂ ಪ್ರಚಾರದಲ್ಲಿತ್ತು. ಎಎಪಿ, ಕಾಂಗ್ರೆಸ್ ಸೇರಿದಂತೆ ವಿವಿಧ ಪಕ್ಷಗಳ ಸೇರ್ಪಡೆ ಸಾಧ್ಯತೆ ಕುರಿತು ಚರ್ಚೆ ನಡೆಯುತ್ತಿತ್ತು. ಸೋಮವಾರ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಉಪಸ್ಥಿತಿಯಲ್ಲಿ ದೆಹಲಿಯಲ್ಲಿ ಆಪ್ ಸೇರುತ್ತಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಕರ್ನಾಟಕದಲ್ಲಿ ಆಮ್ ಆದ್ಮಿ ಪಕ್ಷವನ್ನು ಸದೃಢಗೊಳಿಸುವ ಗುರಿ ನಮ್ಮ ಮುಂದಿದೆ. ನನ್ನ ಮುಂದಿನ ಯೋಜನೆಗಳನ್ನು ಶೀಘ್ರದಲ್ಲಿ ಪ್ರಕಟಿಸುತ್ತೇನೆ' ಎಂದರು.

ಅಲೀಸಾ ದಾಖಲೆ ಆಸ್ಟ್ರೇಲಿಯಾಕ್ಕೆ 7ನೇ ವಿಶ್ವಕಪ್

ಕ್ರೈಸ್ಟ್‌ಚರ್ಚ್ (ಪಿಟಿಐ): ಅಲೀಸಾ ಹೀಲಿ ದಾಖಲಿಸಿದ ಅಮೋಘ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ವಿಜಯ ಸಾಧಿಸಿತು.

ಹೆಗ್ಲಿ ಓವಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವು 71 ರನ್‌ಗಳಿಂದ ಇಂಗ್ಲೆಂಡ್ ವಿರುದ್ಧ ಜಯಿಸಿತು. ಇದರೊಂದಿಗೆ ಏಳನೇ ಬಾರಿ ವಿಶ್ವಕಪ್ ಗೆದ್ದ ದಾಖಲೆಯನ್ನು ತಂಡವು ಮಾಡಿತು.

ಕಳೆದ ವರ್ಷದ ಚಾಂಪಿಯನ್ ಇಂಗ್ಲೆಂಡ್ ತಂಡವು ಇಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಲೀಸಾ ಹೀಲಿ (170; 138ಎಸೆತ, 4X26) ಅಮೋಘ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 356 ರನ್ ಗಳಿಸಿತು. ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ (ಪುರುಷ ಮತ್ತು ಮಹಿಳಾ ಕ್ರಿಕೆಟ್ ಸೇರಿ) ಅತಿ ಹೆಚ್ಚು ವೈಯಕ್ತಿಕ ಮೊತ್ತ ಗಳಿಸಿದ ದಾಖಲೆಯನ್ನು ಅಲೀಸಾ ಬರೆದರು.

ಆಸ್ಟ್ರೇಲಿಯಾದ ಅಲೀಸಾ ಹೀಲಿ

ಬೃಹತ್ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು 43.4 ಓವರ್‌ಗಳಲ್ಲಿ 285 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಬ್ಯಾಟರ್ ನಥಾಲಿ ಶಿವರ್ (148; 121ಎಸೆತ, 4X15, 6X1) ಶತಕ ದಾಖಲಿಸಿದರು.

12

ಮಾಲ್ಟ್ ಆಧಾರಿತ ಆಹಾರಗಳು
BOOST ಎನ್ನುವುದು ಪೌಷ್ಟಿಕವಾದ ಆರೋಗ್ಯಕರ ಪಾನೀಯವಾಗಿದೆ. ಇದನ್ನು ನಿಮ್ಮ ಪ್ರತಿ ದಿನದ ಸಂತುಲಿತ ಆಹಾರ ಸೇವನೆ ಮತ್ತು ವ್ಯಾಯಾಮ ಕ್ರಮದ ಅಂಗವಾಗಿ ಸೇವಿಸಬಹುದಾಗಿದೆ. +2009ರಲ್ಲಿ ನಡೆಸಿದ ಸ್ವತಂತ್ರ ಅಧ್ಯಯನವೊಂದನ್ನು ಆಧಾರಿಸಿದೆ. ಸಂಪೂರ್ಣ ಬಾಡಿ ಎಂಡ್ಯೂರೆನ್ಸ್ ಮಾಪನ ಮಾಡುತ್ತಾ ನಡೆಸಲಾದ 20 ನಿಮಿಷಗಳ ಶಟಲ್ ಟೆಸ್ಟ್ BOOST ಸೇವಿಸಿದ ಮಕ್ಕಳಲ್ಲಿ ನಾನ್-ಫೋರ್ಟಿಫೈಡ್ ಚಾಕೋಲೇಟ್ ಪಾನೀಯಗಳನ್ನು ಕುಡಿದಿರುವ ಮಕ್ಕಳಲ್ಲಿ (ವಯಸ್ಸು 7-10.5 ವರ್ಷಗಳು) 8% ಹೆಚ್ಚಿರುವುದಕ್ಕೆ ಹೋಲಿಸಿದಂತೆ BOOST ಸೇವಿಸಿದ ಮಕ್ಕಳಲ್ಲಿ ಪೂರ್ತಿಗೊಳಿಸಿದ ಶಟಲ್ 25% ಹೆಚ್ಚಿದ್ದವು J.Nutr. 141:2017-2023, 2011. #**BOOST 500 g ಜಾರ್‌ನ MRPಗೆ ಹೋಲಿಸಲಾಗಿದೆ. +^ವಿವರಗಳಿಗಾಗಿ ಪ್ಯಾಕ್ ನೋಡಿರಿ.

1. ಬ್ಯಾಟರಾಯನಪುರದ ಪಾಪಣ್ಣ ಮಾಂಸದಂಗಡಿ ಎದುರು ಭಾನುವಾರ ಸಾಲುಗಟ್ಟಿ ನಿಂತಿದ್ದ ಜನ, 2. ಉಲ್ಲಾಳದ 'ಹಿಂದವೀ ಮೀಟ್ ಮಾರ್ಟ್ ಜಟ್ಕಾ' ಮಳಿಗೆ ಎದುರು ಸರದಿಯಲ್ಲಿ ನಿಂತಿದ್ದ ಜನ, 3.ಗಾರ್ವೆಬಾವಿಪಾಳ್ಯದ ಲಕ್ಷ್ಮಿ ಬಡಾವಣೆಯಲ್ಲಿ ಮುಸ್ಲಿಮರೊಬ್ಬರಿಗೆ ಬೇವುಬೆಲ್ಲ ತಿನ್ನಿಸಿ ಭಾವೈಕ್ಯದ ಸಂದೇಶ ಸಾರಿದ ನಾಗರಿಕರು –ಪ್ರಜಾವಾಣಿ ಚಿತ್ರಗಳು

'ಹೊಸ ತೊಡಕು' ಹಬ್ಬ: ಮಾಂಸದಂಗಡಿಗಳ ಎದುರು ಮತ್ತೆ ಮಾರುದ್ದ ಸಾಲು

ಹಳೆ ವೈಭವಕ್ಕೆ ಮರಳಿದ 'ಹೊಸ ತೊಡಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ನಗರದಲ್ಲಿ ಕಳೆದೆರಡು ವರ್ಷ ಕ್ಷೀಣಿಸಿದ್ದ ಯುಗಾದಿಯ 'ಹೊಸ ತೊಡಕು' ಹಬ್ಬದ ಸಂಭ್ರಮ ಪುನಃ ಗರಿಗೆದರಿದೆ. ನಗರದ ಜನರು ಭಾನುವಾರ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸಿದರು. ಮಾಂಸ ಖರೀದಿಗಾಗಿ ಅಂಗಡಿಗಳ ಎದುರು ಮುಂಜಾನೆಯಿಂದಲೇ ಗ್ರಾಹಕರು ಮುಗಿಬಿದ್ದರು.

ನಗರದ ಬಹುತೇಕ ಮಾಂಸದಂಗಡಿಗಳಲ್ಲಿ ಭಾನುವಾರ ನಸುಕಿನ 2 ಗಂಟೆಯಿಂದಲೇ ವ್ಯಾಪಾರ ಶುರುವಾಗಿತ್ತು. ಅಂಗಡಿ ಎದುರು ಸಾಲುಗಟ್ಟಿ ನಿಂತಿದ್ದ ಗ್ರಾಹಕರು ತಮ್ಮ ಸರದಿ ಬರುವವರೆಗೂ ಕಾದು ಮಾಂಸ ಖರೀದಿಸಿದರು.

ಕುರಿ, ಕೋಳಿ ಹಾಗೂ ಮೀನು ಮಾರಾಟ ಮಳಿಗೆಗಳ ಎದುರು ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದ ದೃಶ್ಯಗಳು ಕಂಡುಬಂದವು. ಬ್ಯಾಟರಾಯನಪುರ ಬಳಿಯ ಪಾಪಣ್ಣ ಮಾಂಸದಂಗಡಿ ಎದುರು ಉದ್ದನೆಯ ಸರದಿ ಸಾಲು ಕಂಡುಬಂತು.

ಹೊಸ ತೊಡಕು ಪ್ರಯುಕ್ತ ಅಂಗಡಿ ಮಾಲೀಕರು, ಹೆಚ್ಚಿನ ಕುರಿ ಹಾಗೂ ಕೋಳಿಗಳನ್ನು ತರಿಸಿಕೊಂಡಿದ್ದರು. ಶನಿವಾರ ತಡರಾತ್ರಿಯಿಂದಲೇ ಕೆಲಸಗಾರರು, ಮಾಂಸ ಸಿದ್ಧಪಡಿಸಿಕೊಡುವ ಕಾರ್ಯದಲ್ಲಿ ನಿರತರಾಗಿದ್ದರು. ಭಾನುವಾರ ಮುಂಜಾನೆಯಿಂದಲೇ ಸರದಿಯಲ್ಲಿ ನಿಂತ ಗ್ರಾಹಕರಿಗೆ ಮಾಂಸವನ್ನು ತಲುಪಿಸಿದರು.

'ಮಧ್ಯಾಹ್ನವಾದರೂ ಜನರ ಸರದಿ ಕಡಿಮೆ ಆಗಿರಲಿಲ್ಲ. ಕೆಲ ವ್ಯಾಪಾರಿಗಳು, ಕಳೆದ ವರ್ಷದ ಲೆಕ್ಕದಲ್ಲಿ ಕುರಿಗಳನ್ನು ತರಿಸಿದ್ದರು. ಆದರೆ, ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಬಂದಿದ್ದರಿಂದ ಮಧ್ಯಾಹ್ನವೂ ಕುರಿಗಳ ಮಾಂಸವನ್ನು ಸಿದ್ಧಪಡಿಸಿಕೊಡಬೇಕಾಯಿತು' ಎಂದು ಅಂಗಡಿಯೊಂದರ ಮಾಲೀಕರು ಹೇಳಿದರು.

ಕೆಲದಿನಗಳಿಂದ ಹಲಾಲ್–ಜಟ್ಕಾ ಬಗ್ಗೆ ಗೊಂದಲ ಏರ್ಪಟ್ಟಿತ್ತು. ಆದರೆ, ಬಹುತೇಕರು ಅದರ ಬಗ್ಗೆ ಅಂಗಡಿಗಳಲ್ಲಿ ವಿಚಾರಿಸಲಿಲ್ಲ. ಗುಣಮಟ್ಟದ ಮಾಂಸ ಖರೀದಿಸಿ ಮನೆಯತ್ತ ಹೆಜ್ಜೆ ಹಾಕಿದ್ದು ಕಂಡುಬಂತು. ಅಂಗಡಿ ಎದುರು ಸರದಿ ಹೆಚ್ಚಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಶಿವಾಜಿನಗರದಲ್ಲೂ ವ್ಯಾಪಾರ ಜೋರು: ಶಿವಾಜಿನಗರದ ಮಾಂಸದಂಗಡಿಗಳಲ್ಲೂ ವ್ಯಾಪಾರ ಜೋರಾಗಿತ್ತು. ಕುರಿ ಹಾಗೂ ಕೋಳಿ ಮಾಂಸದಂಗಡಿಗಳಿಗೆ ಬಂದಿದ್ದ ಜನ, ಮಾಂಸ ಖರೀದಿಸಿಕೊಂಡು ಹೋದರು.

'15 ವರ್ಷಗಳಿಂದ ಅಂಗಡಿ ನಡೆಸುತ್ತಿದ್ದು, ಗುಣಮಟ್ಟದ ಮಾಂಸ ಮಾರುತ್ತಿದ್ದೇವೆ. ಸಹೋದರರಂತಿರುವ ಹಿಂದೂಗಳೇ ನಮಗೆ ಕಾಯಂ ಗ್ರಾಹಕರು. ಭಾನುವಾರವೂ ಹೆಚ್ಚಿನ ವ್ಯಾಪಾರ ಆಯಿತು' ಎಂದು ಶಿವಾಜಿನಗರದ ಇಮ್ರಾನ್ ಹೇಳಿದರು.

ಹಿಂದವೀ ಮೀಟ್ ಮಾರ್ಟ್ ಜಟ್ಕಾ

'ಹಲಾಲ್ ಮಾಂಸ ಧಿಕ್ಕರಿಸಿ, ಜಟ್ಕಾ ಮಾಂಸ ಖರೀದಿಸಿ' ಎಂದು ಬಜರಂಗದಳದ ಕಾರ್ಯಕರ್ತರು ಅಭಿಯಾನ ಶುರು ಮಾಡಿದ್ದರು. ಇದನ್ನು ಬೆಂಬಲಿಸಿ ಉಲ್ಲಾಳದಲ್ಲಿ 'ಹಿಂದವೀ ಮೀಟ್ ಮಾರ್ಟ್ ಜಟ್ಕಾ' ಮಳಿಗೆಯಲ್ಲಿ ಭಾನುವಾರ ಮಾಂಸ ಮಾರಾಟ ಮಾಡಲಾಯಿತು.

ಮಳಿಗೆಗೆ ಬೆಳಿಗ್ಗೆ ಬಂದಿದ್ದ ಕೆಲವರು, ಸರದಿಯಲ್ಲಿ ನಿಂತು ಮಾಂಸ ಖರೀದಿಸಿದ್ದರು. ಕೆಲವರು, ಕೇಸರಿ ಶಾಲು ಧರಿಸಿ ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಭಾವೈಕ್ಯದ ಯುಗಾದಿ: ವಿಶಿಷ್ಟ ಆಚರಣೆ

ಬೊಮ್ಮನಹಳ್ಳಿ: 'ಬೇವು-ಬೆಲ್ಲ ತಿಂದು ಭಾವೈಕ್ಯ ಬೆಸೆಯೋಣ, ಸಹಬಾಳ್ವೆಯನ್ನು ಸಂಭ್ರಮಿಸೋಣ' ಎಂಬ ಘೋಷಣೆಯಡಿ ಮುಸ್ಲಿಂ ಹಾಗೂ ಕ್ರೈಸ್ತ ಬಾಂಧವರ ಜೊತೆ ಆಚರಿಸಿದ ಸೌಹಾರ್ದ ಯುಗಾದಿ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಎಂ) ಸ್ಥಳೀಯ ಘಟಕ ಶನಿವಾರ ಗಾರ್ವೆಬಾವಿಪಾಳ್ಯದ ಲಕ್ಷ್ಮಿ ಬಡಾವಣೆಯಲ್ಲಿ ಸೌಹಾರ್ದ ಯುಗಾದಿ ಕಾರ್ಯಕ್ರಮ ಆಯೋಜಿಸಿತ್ತು.

ಮುಸ್ಲಿಂ ಮತ್ತು ಕ್ರಿಶ್ಚಿಯನ್ನರು ಸ್ವತಃ ಬೇವು-ಬೆಲ್ಲ ಹಂಚಿ ಪರಸ್ಪರ ಶುಭಾಶಯ ಹಂಚಿಕೊಂಡರು. ರಸ್ತೆಯಲ್ಲಿನ ಅಂಗಡಿಗಳ ಬಳಿ ತೆರಳಿ ಒಬ್ಬಟ್ಟು ಕೊಟ್ಟು 'ಪ್ರೀತಿ ವಿಶ್ವಾಸದಿಂದ ಬಾಳೋಣ' ಎಂಬ ಸಂದೇಶ ಸಾರಿದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಾ.ಕೆ.ಪ್ರಕಾಶ್, 'ನಮ್ಮದು ಶ್ರಮ ಸಂಸ್ಕೃತಿ. ದುಡಿಮೆ ನಂಬಿ ಬದುಕು ಸಾಗಬೇಕು. ದುಡಿಮೆಗೆ ಯಾವ ಭೇದ-ಭಾವವೂ ಇಲ್ಲ. ಆದರೆ, ದುಡಿಮೆಯ ಪಾಲು ದುಡಿಮೆಗಾರನಿಗೆ ಸಿಗದಂತೆ ಮಾಡಿ, ಸಂಪತ್ತನ್ನು ಲೂಟಿ ಮಾಡುವ ಸಲುವಾಗಿ ಶ್ರಮಜೀವಿಗಳ ನಡುವೆ ಕೋಮು ವಿಭಜನೆ ತರುವ ಪ್ರಯತ್ನ ನಡೆದಿದೆ' ಎಂದು ಕಳವಳ ವ್ಯಕ್ತಪಡಿಸಿದರು. 'ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬಿಸಿಯಲ್ಲಿ ಜನ ತತ್ತರಿಸುತ್ತಿರುವಾಗ ಜನರ ಮನಸ್ಸನ್ನು ಬೇರೆಡೆ ಸೆಳೆಯಲು ಕ್ಷುಲ್ಲಕ ವಿಚಾರಗಳನ್ನು ಮುಂದುಮಾಡಿ, ವಿಷ ಬೀಜಗಳನ್ನು ಬಿತ್ತಿ, ಸೌಹಾರ್ದ ಮನಸುಗಳನ್ನು ಒಡೆಯುವ ಷಡ್ಯಂತ್ರ ನಡೆದಿದೆ. ಆಳವಾಗಿ ಬೇರೂರಿರುವ ಸಹಬಾಳ್ವೆ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಿದೆ' ಎಂದರು. ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವೀಂದ್ರ, 'ವಿವಿಧತೆಯಲ್ಲಿ ಏಕತೆ ಎಂಬುದೇ ನಿಜವಾದ ಭಾರತೀಯ ಸಂಸ್ಕೃತಿ. ಬೇಗೂರು ನಾಗನಾಥಸ್ವಾಮಿ ತೇರು ಬಾಬಯ್ಯನ ಗುಡಿ ಬಳಿ ಹೋಗಿ ಬರುವುದು ಈಗಲೂ ರೂಢಿಯಲ್ಲಿದೆ. ಇದು ಸೌಹಾರ್ದ ಸಂಸ್ಕೃತಿಯ ಪ್ರತೀಕ. ಇದಕ್ಕೆ ಧಕ್ಕೆ ತರುವ ಮತೀಯವಾದವನ್ನು ನಿಗ್ರಹಿಸಬೇಕಿದೆ' ಎಂದರು.

ಪಾಲಿಕೆ ಮಾಜಿ ಸದಸ್ಯ ಎಂ.ಆಂಜನಪ್ಪ, ಕಾಂಗ್ರೆಸ್ ಸ್ಥಳೀಯ ಮುಖಂಡ ಸಯ್ಯದ್ ಸರ್ದಾರ್, ಪಾದ್ರಿ ನಟರಾಜನ್, ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಕ್ರಂ ಪಾಷಾ, ಸಿಪಿಎಂ ಮುಖಂಡರಾದ ಎನ್.ದಯಾನಂದ, ಸಿ.ಜಗದೀಶ್ ಇದ್ದರು.

ಶ್ರೀರಾಮ ಸೇವಾ ಮಂಡಳಿಯ ಸಂಗೀತೋತ್ಸವಕ್ಕೆ ಮುಖ್ಯಮಂತ್ರಿ ಚಾಲನೆ

'ಅಂಜನಾದ್ರಿ ಬೆಟ್ಟ ಅಭಿವೃದ್ಧಿಗೆ ₹100 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹನುಮನ ಜನ್ಮಸ್ಥಳವಾದ ಹಂಪಿ ಬಳಿಯ ಅಂಜನಾದ್ರಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ₹100 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಇದೇ ವರ್ಷ ಯೋಜನೆ ಸಿದ್ಧಪಡಿಸಿ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶ್ರೀರಾಮ ಸೇವಾ ಮಂಡಳಿ ಆಯೋಜಿಸಿರುವ ಸಂಗೀತೋತ್ಸವ ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, 'ಅಂಜನಾದ್ರಿ ಬೆಟ್ಟವನ್ನು ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು' ಎಂದರು.

'ಶ್ರೀರಾಮ ಸೇವಾ ಮಂಡಳಿ ಸ್ಥಾಪಿಸಲು ಉದ್ದೇಶಿಸಿರುವ ಕಲಾ ಸಾಕೇತ್ ಯೋಜನೆಗೆ ಸರ್ಕಾರ ನೆರವು ಒದಗಿಸಲಿದೆ' ಎಂದು ಭರವಸೆ ನೀಡಿದರು.

ಸಂಗೀತ ಅವಿಭಾಜ್ಯ ಅಂಗ: 'ಪ್ರತಿ ಶಬ್ದವೂ ತನ್ನದೇ ರಾಗ- ತಾಳವನ್ನು ಹೊಂದಿರುತ್ತದೆ. ಸಂಗೀತ ಮನುಷ್ಯನ ಉತ್ಸಾಹ, ಆನಂದ, ಸಮಾಧಾನ, ಭಾವನೆಗಳನ್ನು ಅಭಿವ್ಯಕ್ತಪಡಿಸುವ ಮಾಧ್ಯಮವೂ ಹೌದು. ದಣಿದಾಗ ಸಂಗೀತ ಕೇಳಿದರೆ ಆಹ್ಲಾದ ಉಂಟಾಗುತ್ತದೆ' ಎಂದರು.

'ಸಂಗೀತದಿಂದ ಭಕ್ತಿಯ ಅಭಿವ್ಯಕ್ತಿಯಾಗುತ್ತದೆ. ಕೆಲವು ಭಕ್ತಿಗೀತೆಗಳು ಅತ್ಯಂತ ಪ್ರಭಾವಶಾಲಿಯಾಗಿರುತ್ತವೆ. ನಾನು ಶ್ರೀರಾಮ ಹಾಗೂ ಹನುಮನ ಭಕ್ತ. ಅದರೊಂದಿಗೆ ಸಂಗೀತದ ಭಕ್ತನೂ ಹೌದು' ಎಂದರು.

'ಕನ್ನಡ ನಾಡಿನ ಸಂಸ್ಕೃತಿ ಶ್ರೀಮಂತವಾದದ್ದು. ಸಂಗೀತದ ಶ್ರೀಮಂತಿಕೆಯೂ ಕನ್ನಡ ನಾಡಿನಲ್ಲಿದೆ. ವಚನ, ದಾಸರ ಪದಗಳು ಸಂಗೀತದ ಮೂಲಕ ಮನಸ್ಸಿಗೆ ನೇರವಾಗಿ ಮುಟ್ಟುತ್ತವೆ. ಕರ್ನಾಟಕ ಸಂಗೀತ ಭಕ್ತಿ ಪ್ರಧಾನವಾಗಿದೆ. ಭಕ್ತಿ ಎಂದರೆ ಉತ್ಕೃಷ್ಟವಾದ, ಪ್ರತಿಫಲಾಪೇಕ್ಷೆ ಇಲ್ಲದ ಪ್ರೀತಿ. ಇದು ಇದ್ದಲ್ಲಿ ಸಂಗೀತ ಇದ್ದೇ ಇರುತ್ತದೆ. ಶುದ್ಧವಾದುವೆಲ್ಲವೂ ಸಂಗೀತಮಯ' ಎಂದರು.

ಶ್ರೀರಾಮ ಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್ ಆಯೋಜಿಸಿದ 84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ರಂಜನಿ ಮತ್ತು ಗಾಯತ್ರಿ ತಂಡ ಸಂಗೀತ ಕಛೇರಿ ನಡೆಸಿಕೊಟ್ಟರು. –ಪ್ರಜಾವಾಣಿ ಚಿತ್ರ

'ರಾಷ್ಟ್ರೀಯ ತಾಂಡಾ ಅಭಿವೃದ್ಧಿ ನಿಗಮ ಸ್ಥಾಪಿಸಿ'

ಬೆಂಗಳೂರು: 'ಬಂಜಾರ ಸಮುದಾಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ತಾಂಡಾ ಅಭಿವೃದ್ಧಿ ನಿಗಮ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು' ಎಂದು ಅಖಿಲ ಭಾರತ ಬಂಜಾರ ಸೇವಾ ಸಂಘದ ಕಾರ್ಯಾಧ್ಯಕ್ಷ ಡಿ.ರಾಮನಾಯಕ ಅವರಿದ್ದ ನಿಯೋಗವು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಮನವಿ ಸಲ್ಲಿಸಿದೆ.

'ಬಂಜಾರ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸಬೇಕು. ಇತರ ರಾಜ್ಯಗಳಲ್ಲೂ ಹಿಂದುಳಿದ ಜಾತಿ ಹಾಗೂ ಪಂಗಡಗಳಲ್ಲಿರುವ ಬಂಜಾರರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ದೇಶದಲ್ಲಿರುವ ಎಲ್ಲಾ ತಾಂಡಾಗಳನ್ನೂ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು. ನವದೆಹಲಿಯ ಮಾರ್ಗವೊಂದಕ್ಕೆ ಲಕ್ಕಿ ಷಾ ಬಂಜಾರ ಅವರ ಹೆಸರಿಡಬೇಕು. ಜೊತೆಗೆ ಅವರ ಪ್ರತಿಮೆಯನ್ನೂ ಸ್ಥಾಪಿಸಬೇಕು' ಎಂದು ನಿಯೋಗದ ಸದಸ್ಯರು ವಿನಂತಿಸಿದ್ದಾರೆ.

ದೊಡ್ಡಮಠದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ಧಲಿಂಗೇಶ್ವರ ಸ್ವಾಮಿ ದೇವಸ್ಥಾನದ ಪ್ರಾರ್ಥನಾ ಮಂದಿರವನ್ನು ಬಿ.ಎಸ್‌. ಯಡಿಯೂರಪ್ಪ ಉದ್ಘಾಟಿಸಿದರು. (ಎಡದಿಂದ) ಬಿಜೆಪಿ ಮುಖಂಡ ಸಪ್ತಗಿರಿ ಗೌಡ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಎಸ್‌.ಪರಮಶಿವಯ್ಯ, ಸಂಸದ ಪಿ.ಸಿ. ಮೋಹನ್, ಶ್ರೀದೊಡ್ಡಮಠದ ಅಧ್ಯಕ್ಷರಾದ ಶಿವಬಸವ ಸ್ವಾಮೀಜಿ ಮತ್ತು ಸುತ್ತೂರು ಮಠದ ಪೀಠಾಧ್ಯಕ್ಷರಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

'ಧರ್ಮದ ಹಾದಿಯಲ್ಲಿ ನಡೆದರೆ ದೇಶ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲರೂ ಧರ್ಮದ ಹಾದಿಯಲ್ಲಿ ನಡೆದಾಗ ಮಾತ್ರ ದೇಶದ ಅಭಿವೃದ್ಧಿ ಹಾಗೂ ಆಡಳಿತ ವ್ಯವಸ್ಥೆ ಸುಲಲಿತವಾಗುತ್ತದೆ. ವೀರಶೈವ ಲಿಂಗಾಯತ ಧರ್ಮವು ಅಂತರಂಗ–ಬಹಿರಂಗ ಶುದ್ಧಿಗೆ ಪ್ರಾಧಾನ್ಯ ಕೊಟ್ಟು ಸಕಲ ಜೀವರಾಶಿಗೂ ಒಳಿತನ್ನೇ ಬಯಸುತ್ತಿದೆ' ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನಗರದ ದೊಡ್ಡಮಠದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನದ ಪ್ರಾರ್ಥನಾ ಮಂದಿರ ಉದ್ಘಾಟಿಸಿ ಅವರು ಮಾತನಾಡಿದರು. ಮಠದ ಆವರಣದಲ್ಲಿ ನಿರ್ಮಾಣವಾಗಿರುವ ವಿದ್ಯಾರ್ಥಿನಿಲಯವನ್ನೂ ಭಾನುವಾರ ಉದ್ಘಾಟಿಸಲಾಯಿತು.

'ಮಠಗಳು ಸಮಾಜದ ಅಭಿವೃದ್ಧಿಯ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸಬೇಕು. ಈ ಹಾದಿಯಲ್ಲಿ ದೊಡ್ಡಮಠ ಮುನ್ನಡೆಯುತ್ತಿದೆ. ಸರ್ವ ಸಮಾಜಕ್ಕಾಗಿ, ಜಗತ್ತಿನ ಶ್ರೇಯೋಭಿವೃದ್ಧಿಗಾಗಿ, ಶಾಂತಿ–ಸಾಮರಸ್ಯದ ನಿರ್ಮಾಣಕ್ಕಾಗಿ ಮಠಾಧೀಶರು ಶ್ರಮಿಸುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟರು.

'ಈ ಪುಣ್ಯಭೂಮಿಯಲ್ಲಿ ಸಾವಿರಾರು ಸಾಧು–ಸಂತರು ಆದರ್ಶಮಯ ಜೀವನ ನಡೆಸುತ್ತಾ ನಮಗೆಲ್ಲಾ ಮಾದರಿಯಾಗಿದ್ದಾರೆ. ಶ್ರೀ ಸಿದ್ದಗಂಗಾ, ಸುತ್ತೂರು, ಆದಿಚುಂಚನಗಿರಿ ಹಾಗೂ ತರಳಬಾಳು ಮಠಗಳು ಈ ನಾಡಿನಲ್ಲಿ ಪ್ರಸಿದ್ಧಿ ಹೊಂದಿವೆ' ಎಂದರು.

ಸುತ್ತೂರು ಮಠದ ಪೀಠಾಧ್ಯಕ್ಷರಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, '12ನೇ ಶತಮಾನದ ನಂತರ ಧಾರ್ಮಿಕ ಪರಂಪರೆಗೆ ವಿಶಿಷ್ಟ ಮಾನ್ಯತೆ ದೊರಕಿಸಿಕೊಟ್ಟವರು ಸಿದ್ದಲಿಂಗೇಶ್ವರ ಶ್ರೀಗಳು. ಅವರು ಧರ್ಮಕ್ಕೆ ಸಿದ್ಧಾಂತಗಳ ಮೌಲ್ಯ ದೊರಕಿಸಿಕೊಟ್ಟರು. ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ಸಂಚಾರ ಮಾಡಿದ್ದಲ್ಲದೆ, ಹೋದಲೆಲ್ಲಾ ಹಲವು ಪರೀಕ್ಷೆಗಳನ್ನು ಎದುರಿಸಿ ಗೆದ್ದು ಬಂದಿದ್ದರು' ಎಂದು ಅವರು ತಿಳಿಸಿದರು.

ದೊಡ್ಡಮಠದ ಅಧ್ಯಕ್ಷ ಶಿವಬಸವ ಸ್ವಾಮೀಜಿ, 'ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರ ಕೃಪೆಯಿಂದ ಮಠವು ಅಭಿವೃದ್ಧಿ ಕಂಡಿದೆ. ಮಠವು ತನ್ನದೇ ಆದ ಗುರು ಪರಂಪರೆ ಹೊಂದಿದೆ' ಎಂದರು.

ಸಂಸದ ಪಿ.ಸಿ.ಮೋಹನ್, 'ಮಠದಲ್ಲಿ ಎಲ್ಲಾ ಸಮುದಾಯದ ಮಕ್ಕಳಿಗೂ ಶಿಕ್ಷಣ ನೀಡಲಾಗುತ್ತಿದೆ. ವಿದ್ಯಾರ್ಥಿನಿಲಯದಲ್ಲಿ 50 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಮಠಕ್ಕೆ ಅಗತ್ಯವಿರುವ ಎಲ್ಲಾ ನೆರವು ನೀಡಲು ಸಿದ್ಧನಿದ್ದೇನೆ' ಎಂದು ಹೇಳಿದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಶಾಸಕ ದಿನೇಶ್ ಗುಂಡೂರಾವ್, ಹೊನ್ನಮ್ಮನ ಗವಿಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಕಂಬಾಳು ಸಂಸ್ಥಾನ ಮಠದ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಇದ್ದರು.

ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮಾ ಉದ್ಘಾಟಿಸಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್‌.ಷಡಾಕ್ಷರಿ, ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ.ರೂಪಾ ಮೌದ್ಗಿಲ್ ಇದ್ದರು.

'ಮಹಿಳೆಯರಿಗೆ ಸಮಾನ ಅವಕಾಶಗಳು ದೊರೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಸರ್ಕಾರ ರೂಪಿಸಿರುವ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮಾ ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹೊಂಬಾಳೆ ಅರಳಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, 'ಮಹಿಳೆಯರಿಗೆ ಮನೆಯಲ್ಲಿಯೂ ಸಹಕಾರ ನೀಡಬೇಕು. ಮಹಿಳೆಯರನ್ನು ಪೂಜಿಸಿದರೆ ಸಾಲದು, ಅವರಿಗೆ ಗೌರವ–ಸಮಾನತೆ ನೀಡಿದರೆ ಸಾಕು' ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಮಾತನಾಡಿ, 'ಸ್ಫೂರ್ತಿದಾಯಿನಿ-ಪ್ರಗತಿಗಾಮಿನಿ, ನಾ-ಹೆಣ್ಣೆಂಬುದೇ ಹೆಮ್ಮೆ' ಎನ್ನುವ ಶೀರ್ಷಿಕೆಯಡಿ ರಾಜ್ಯದಾದ್ಯಂತ ಮೊಟ್ಟ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ' ಎಂದು ಹೇಳಿದರು.

'ಬೇರೆ ಜಿಲ್ಲೆಯಿಂದ ಬರುವ ಮಹಿಳೆಯರಿಗೆ ಈ ಮೊದಲು ನೌಕರರ ಭವನದಲ್ಲಿ ಮೂಲ ಸೌಲಭ್ಯಗಳಿರಲಿಲ್ಲ. ಈಗ 60 ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಿ ಸೌಲಭ್ಯ ಕಲ್ಪಿಸಲಾಗಿದೆ' ಎಂದರು.

ಕುಸ್ತಿ ಆಡುವ ಸಂದರ್ಭದಲ್ಲಿ ಕೈ ಗಾಯಗೊಂಡಿದ್ದರಿಂದ ರಾಷ್ಟ್ರಮಟ್ಟದ ಮಹಿಳಾ ಕುಸ್ತಿ ಕ್ರೀಡಾಪಟು ರತ್ನಮಾಲ ಅವರು ಸಂಘದ ವತಿಯಿಂದ ₹25 ಸಾವಿರ ಪರಿಹಾರ ವಿತರಿಸಲಾಯಿತು. ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ.ರೂಪಾ ಮೌದ್ಗಿಲ್ ಅವರು ಉಪನ್ಯಾಸ ನೀಡಿದರು.

ನ್ಯಾಯಾಧೀಶರಾದ ಸುನಿತಾ ಶರ್ಮಾ, ಮೋಹನ್ ಕುಮಾರಿ, ರಾಜ್ಯ ಉಪಾಧ್ಯಕ್ಷರಾದ ಎಚ್‌.ಎಸ್‌. ಹೇಮಲತಾ, ರಾಜ್ಯ ಜಂಟಿ ಕಾರ್ಯದರ್ಶಿ ರುಚಿತ, ರಾಜ್ಯ ಸಂಘಟನಾ ಕಾರ್ಯದರ್ಶಿ ಯಶೋಧ, ರಾಜ್ಯ ಪರಿಷತ್ ಸದಸ್ಯೆ ಶ್ರೀಮತಿ ರೋಷಿಣಿ ಇದ್ದರು.

'ಶಿವಕುಮಾರ ಸ್ವಾಮೀಜಿಯವರ ಆದರ್ಶ ಮೈಗೂಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯವರು ಇಡೀ ವಿಶ್ವಕ್ಕೆ ದಾಸೋಹದ ಮಹತ್ವ ಸಾರಿದ ಮಹಾನ್ ಸಂತ. ಅವರ ಆದರ್ಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಎಲ್ಲರ ಪ್ರೀತಿ, ವಿಶ್ವಾಸ ಗಳಿಸಬೇಕು' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮೂಡಲಪಾಳ್ಯ ವಾರ್ಡ್‌ನಲ್ಲಿ ಹಮ್ಮಿಕೊಂಡಿದ್ದ ಶಿವಕುಮಾರ ಸ್ವಾಮೀಜಿಯವರ 115ನೇ ಜನ್ಮ ದಿನಾಚರಣೆ ಮತ್ತು ಶಿವಯೋಗಿ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶಿವಕುಮಾರ ಸ್ವಾಮೀಜಿ ಹಾಗೂ ಬಾಲಗಂಗಾಧರನಾಥ ಸ್ವಾಮೀಜಿಯವರ ಆಶೀರ್ವಾದದಿಂದಾಗಿ ರಾಜಕೀಯದಲ್ಲಿ ನಾನು ದೊಡ್ಡ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಾಯಿತು. ಅವರಿಬ್ಬರು ಮಹಾನ್ ಸಂತರು. ಸಿದ್ದಗಂಗಾ ಮಠದೊಂದಿಗೆ ನಮ್ಮ ಕುಟುಂಬಕ್ಕೆ ಅವಿನಾಭಾವ ಸಂಬಂಧವಿದೆ' ಎಂದರು.

ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, 'ಶಿವಕುಮಾರ ಸ್ವಾಮೀಜಿಯವರು ಭಾರತ ಕಂಡ ಸಾರ್ವಕಾಲಿಕ ಶ್ರೇಷ್ಠ ಸಂತ. ದಾಸೋಹಕ್ಕೆ ಅವರೇ ಸ್ಫೂರ್ತಿ ಹಾಗೂ ಆದರ್ಶ' ಎಂದು ಹೇಳಿದರು.

ಶಿವಕುಮಾರ ಸ್ವಾಮೀಜಿಯವರ ಪುತ್ಥಳಿಗೆ ಸಚಿವ ವಿ.ಸೋಮಣ್ಣ ಪುಷ್ಪಾರ್ಚನೆ ಮಾಡಿದರು. (ಎಡದಿಂದ) ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್‌. ನಾಗಾಭರಣ, ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ.ಸೋಮಣ್ಣ, ಅದಮ್ಯ ಚೇತನ ಸಂಸ್ಥೆಯ ಸಂಸ್ಥಾಪಕಿ ತೇಜಸ್ವಿನಿ ಅನಂತಕುಮಾರ್, ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಮುಖಂಡರಾದ ಅ.ದೇವೇಗೌಡ, ದಾಸೇಗೌಡ, ಫಾಲನೇತ್ರ, ಲೇಖಕ ಡಾ.ಸಂತೋಷ್ ಹಾನಗಲ್ ಇದ್ದರು

ಮೇ 3ರಿಂದ ಗಂಗೋತ್ರಿ ದರ್ಶನ

ಉತ್ತರಕಾಶಿ, ಉತ್ತರಾಖಂಡ (ಪಿಟಿಐ): ಹಿಮಾಲಯದ ತಟದಲ್ಲಿರುವ ಪ್ರಸಿದ್ಧ ಗಂಗೋತ್ರಿ ದೇವಾಲಯವನ್ನು ಅಕ್ಷಯ ತೃತೀಯದಂದು, ಅಂದರೆ ಮೇ 3 ರಂದು ತೆರೆಯಲಾಗುವುದು ಎಂದು ದೇವಾಲಯ ಸಮಿತಿ ಭಾನುವಾರ ತಿಳಿಸಿದೆ.

ಬೆಳಿಗ್ಗೆ 11.15 ಕ್ಕೆ ದೇವಸ್ಥಾನದ ಬಾಗಿಲು ತೆರೆಯಲಾಗುವುದು. ಮುಂದಿನ ಆರು ತಿಂಗಳಗಳವರೆಗೆ ದೇವಾಲಯದಲ್ಲಿ ದರ್ಶನಕ್ಕೆ ಭಕ್ತರಿಗೆ ಅವಕಾಶವಿರಲಿದೆ ಎಂದು ಗಂಗೋತ್ರಿ ದೇವಸ್ಥಾನ ಸಮಿತಿಯ ಕಾರ್ಯದರ್ಶಿ ಸುರೇಶ್ ಸೆಮ್ವಾಲ್ ತಿಳಿಸಿದ್ದಾರೆ.

CRPF Montessori School, GC CRPF, Yelahanka, Bengaluru - 560064.
Ph-080-29567730

WALK IN INTERVIEW

Name of Post	Salary	Number of Vacancies	Date of Walk in Interview	Eligibility Conditions for Teacher
Head Mistress	Rs.14,000/- PM	01	12.04.2022 1000 Hrs	1. First preference. Nursery trained teachers who are matriculate and above having Nursery trained Diploma from a recognized Training Institution.
Teacher	Rs.12,000/- PM	06		2. Second preference. JBT / trained graduates / trained post-graduates.
Nanny	Rs. 7500/- PM	06		--------

ಏ.12ರಿಂದ ಬಿಜೆಪಿ ನಾಯಕರ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ನಿರ್ಮಲ್ ಕುಮಾರ್

ಬೆಂಗಳೂರು: ರಾಜ್ಯದಲ್ಲಿ ಪಕ್ಷದ ಬಲವರ್ಧನೆಗೆ ರಾಜ್ಯ ಮತ್ತು ರಾಷ್ಟ್ರೀಯ ನಾಯಕರನ್ನು ಒಳಗೊಂಡ ತಂಡವು ಏ. 12 ರಿಂದ 24 ರವರೆಗೆ ಮೂರು ತಂಡಗಳಲ್ಲಿ ಪ್ರವಾಸ ನಡೆಸಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ತಿಳಿಸಿದ್ದಾರೆ.

ಈ ತಂಡಗಳು ವಿಭಾಗ ಕೇಂದ್ರದಲ್ಲಿ ಎರಡು ದಿನಗಳ ಕಾರ್ಯಕ್ರಮ ಸಂಘಟಿಸಲಿವೆ. ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕೋರ್ ಕಮಿಟಿ ಸಭೆ ನಡೆಯಲಿದೆ. ನಂತರ ಆಯಾ ಜಿಲ್ಲಾ ಪದಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು. ಅಲ್ಲದೆ, ಜಿಲ್ಲೆಯ ಪ್ರಮುಖರೊಂದಿಗೆ ವೈಯಕ್ತಿಕ ಮಾತುಕತೆ ಏರ್ಪಡಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಈ ತಂಡಗಳು ವಿಭಾಗ ಕೇಂದ್ರದ ಮಂಡಲಗಳ ಬೂತ್ ಅಧ್ಯಕ್ಷರ ಮತ್ತು ಶಕ್ತಿ ಕೇಂದ್ರದ ಪ್ರಮುಖರ ಸಮಾವೇಶ ನಡೆಸುವಂತೆ ಅವರು ತಿಳಿಸಿದ್ದಾರೆ.

ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ
(ಭಾರತ ಸರ್ಕಾರದ ಇಂಧನ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಅಂಗ)
4ನೇ ಮಹಡಿ, ಸೇವಾ ಭವನ, ಆರ್.ಕೆ.ಪುರಂ, ನವದೆಹಲಿ–110066
ವೆಬ್‌ಸೈಟ್: www.beeindia.gov.in, ಫೋನ್: 011–26766700

ತಾಂತ್ರಿಕ ವೃತ್ತಿಪರಿಣಿತರ ನಿಯೋಜನೆ

ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ (ಬಿಇಇ) ರವರು, ತಾಂತ್ರಿಕ ಬೆಂಬಲ ಪಡೆಯಲೆಂದು ಸಂಪೂರ್ಣ ಗುತ್ತಿಗೆ ಆಧಾರದಲ್ಲಿ ಸೆಕ್ಟರ್ ಎಕ್ಸ್‌ಪರ್ಟ್, ಸೀನಿಯರ್ ಸೆಕ್ಟರ್ ಎಕ್ಸ್‌ಪರ್ಟ್ಸ್, ಅರೆಕಾಲಿಕ ಎಕ್ಸ್‌ಪರ್ಟ್ಸ್ ಮತ್ತು ಕನ್ಸಲ್ಟಂಟ್‌ಗಳನ್ನು ನಿಯೋಜಿಸಿಕೊಳ್ಳಲು ಉದ್ದೇಶಿಸಿರುತ್ತಾರೆ.
ಯೋಜನೆಯ ಭವಿಷ್ಯದ ಅವಶ್ಯಕತೆ ಹಾಗೂ ವ್ಯಕ್ತಿಯ ಕುರಿತಾದ ಕೆಪಿಐ'ರವರ ತೃಪ್ತಿದಾರಯ ಸಾಧಾನೆಯ ನಿಬಂಧನೆಗೆ ಒಳಪಟ್ಟಂತೆ, ಬಿಇಇ ಯೋಜನೆಗಳ ಅಡಿಯಲ್ಲಿನ ನಿಯೋಜಿಸಿಕೊಳ್ಳುವ ಅವಧಿಯು ಒಂದು ವರ್ಷ ಆಗಿರುತ್ತದೆ ಮತ್ತು ಇದನ್ನು ಗರಿಷ್ಠ 03 ವರ್ಷ ಅವಧಿಗೆ ವಿಸ್ತರಣೆ ಮಾಡಬಹುದಾಗಿರುತ್ತದೆ.
ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ಮತ್ತು ಆಸಕ್ತಿಯುಳ್ಳ ಅರ್ಜಿದಾರರು, ಸದರಿ ಜಾಹೀರಾತು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ, ತಮ್ಮ ಕರಿಕ್ಯೂಲಂ ವಿಟೇ (ಸಿವಿ) ಅನ್ನು ನಿರ್ದಿಷ್ಟ ನಮೂನೆಯಲ್ಲಿ ಸಲ್ಲಿಸುವುದು.
ಹುದ್ದೆಗಳ, ಶೈಕ್ಷಣಿಕ ವಿದ್ಯಾರ್ಹತೆಯ, ಪ್ರಾಯ ಮತ್ತು ಕ್ಷೇತ್ರಕ್ಕೆ ಸಂಬಂಧಿತ ಅನುಭವ ಇತ್ಯಾದಿಗಳ ಕುರಿತಾದ ವಿವರಗಳನ್ನು ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿಯ www.beeindia.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಈ ಮೊದಲಿಗೆ ಸೆಕ್ಟರ್ ಎಕ್ಸ್‌ಪರ್ಟ್ಸ್ ನಿಯೋಜನೆಗೆ ಸಂಬಂಧಿಸಿದಂತೆ ದಿನಾಂಕ 05.01.2022 ರಂದು ಹೊರಡಿಸಲಾಗಿದ್ದ, ಬಿಇಇ'ರವರ ವೆಕನ್ಸಿ ಸರ್ಕ್ಯೂಲರ್‌ಗೆ ಸ್ಪಂದಿಸುತ್ತ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿಗಳನ್ನು, ಅಂತಹ ಅಭ್ಯರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸದಿದ್ದಲ್ಲಿ ಕೇವಲ ಸೆಕ್ಟರ್ ಎಕ್ಸ್‌ಪರ್ಟ್ ಹುದ್ದೆಗೆ ಮಾತ್ರ ಪರಿಗಣಿಸಲಾಗುತ್ತದೆ.
davp34106/12/0001/2223 ಸೆಕ್ರೆಟರಿ

3 ವರ್ಷದಲ್ಲಿ 4,696 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಪೂರ್ಣ: ಬಿಬಿಎಂಪಿ

₹ 6,768 ಕೋಟಿ ಸುರಿದರೂ ಗುಂಡಿ ಮುಕ್ತವಾಗಿಲ್ಲ ರಸ್ತೆ

ಪ್ರಜಾವಾಣಿ ವಾರ್ತೆ

13,873 ಕಿ.ಮೀ ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಒಟ್ಟು ಉದ್ದ

470 ಬಿಬಿಎಂಪಿ ವ್ಯಾಪ್ತಿಯ ಮುಖ್ಯ ರಸ್ತೆಗಳ ಸಂಖ್ಯೆ

1,344 ಕಿ.ಮೀ ಮುಖ್ಯ ರಸ್ತೆಗಳ ಒಟ್ಟು ಉದ್ದ

85,176 ವಾರ್ಡ್ ರಸ್ತೆಗಳ ಸಂಖ್ಯೆ

12,529 ಕಿ.ಮೀ ವಾರ್ಡ್ ರಸ್ತೆಗಳ ಒಟ್ಟು ಉದ್ದ

ಬೆಂಗಳೂರಿನ ಹನುಮಂತನಗರದ 10ನೇ ಮುಖ್ಯರಸ್ತೆಯ ಸ್ಥಿತಿ —ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ನಗರದ ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿಗಳಿಗೆ 2018–2021ರ ನಡುವೆ ಮೂರು ವರ್ಷಗಳಲ್ಲಿ ಸರ್ಕಾರ ₹ 6,768 ಕೋಟಿ ಅನುದಾನ ಒದಗಿಸಿದೆ. ಇದರಲ್ಲಿ 7,011 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿದ್ದು, 4,696 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಪೂರ್ಣಗೊಂಡಿದೆ ಎನ್ನುತ್ತದೆ ಬಿಬಿಎಂಪಿ.

ಇಷ್ಟಾಗಿಯೂ ಗುಂಡಿಗಳಿಲ್ಲದ ರಸ್ತೆಗಳನ್ನು ದುರ್ಬೀನು ಹಾಕಿ ಹುಡುಕಬೇಕಾದ ಸ್ಥಿತಿ ನಗರದಲ್ಲಿದೆ ಎಂದು ದೂರುತ್ತಾರೆ ಸಾರ್ವಜನಿಕರು.

ವಿಧಾನ ಪರಿಷತ್ತಿನ ಸದಸ್ಯ ಕೆ.ಗೋವಿಂದರಾಜ್ ಅವರ ಪ್ರಶ್ನೆಗೆ ಮುಖ್ಯಮಂತ್ರಿಯವರು ವಿವರವಾದ ಉತ್ತರ ನೀಡಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಯ 4,761 ಕಾಮಗಾರಿಗಳನ್ನು ಮೂರು ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. 3,655 ಕಾಮಗಾರಿಗಳು ಪೂರ್ಣಗೊಂಡಿವೆ. ಈ ತಿಂಗಳ ಅಂತ್ಯಕ್ಕೆ 180 ಕಿ.ಮೀ ಉದ್ದದ ಮುಖ್ಯರಸ್ತೆ ಹಾಗೂ ಉಪಮುಖ್ಯ ರಸ್ತೆಗಳ ಡಾಂಬರೀಕರಣ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಆದರೆ, ವಾಸ್ತವ ಸ್ಥಿತಿ ಇದನ್ನು ಪುಷ್ಟೀಕರಿಸುವಂತಿಲ್ಲ.

ಸಾಕಷ್ಟು ಗಡುವುಗಳ ಬಳಿಕವೂ ಈಗಲೂ ನಗರದ ಅನೇಕ ಮುಖ್ಯ ರಸ್ತೆಗಳಲ್ಲೂ ಗುಂಡಿಗಳು ಹಾಗೆಯೇ ಇವೆ. ಉದಾಹರಣೆಗೆ ಮಹಾಕವಿ ಕುವೆಂಪು ರಸ್ತೆಯಲ್ಲಿ ಗುಂಡಿಗಳಿಗೆ ತೇಪೆ ಹಾಕುವ ಕಾರ್ಯ ಎರಡು ಬಾರಿ ನಡೆದಿದೆ. ಆ ಬಳಿಕವು ಈ ರಸ್ತೆ ಗುಂಡಿ ಮುಕ್ತವಾಗಿಲ್ಲ. ಮಲ್ಲೇಶ್ವರದಲ್ಲಿ, ವಯ್ಯಾಲಿಕಾವಲ್, ಗುಟ್ಟಹಳ್ಳಿ, ಜವರೇಗೌಡನಗರ, ಶ್ರೀನಗರ, ರಾಜರಾಜೇಶ್ವರಿನಗರ, ಕಾಳಿದಾಸ ಬಡಾವಣೆ, ಆರ್.ಆರ್.ನಗರ ಪ್ರದೇಶಗಳಲ್ಲಿ ರಸ್ತೆ ಇನ್ನೂ ಅಧ್ವಾನ ಸ್ಥಿತಿಯಲ್ಲಿವೆ.

ವೈಟ್ ಟಾಪಿಂಗ್‌ಗೆ ಜೂನ್ ಗಡುವು:

ಬಿಬಿಎಂಪಿ ಹೇಳುವ ಪ್ರಕಾರ, ಡಾಂಬರೀಕರಣಗೊಂಡ ರಸ್ತೆಗಳು ಐದು ವರ್ಷ ಹಾಗೂ ವೈಟ್‌ಟಾಪಿಂಗ್ ಮಾಡಲಾದ ರಸ್ತೆಗಳು 30 ವರ್ಷ ಬಾಳಿಕೆ ಬರುತ್ತವೆ. ನಗರದಲ್ಲಿ 144.72 ಕಿ.ಮೀ ಉದ್ದದ 69 ಆಯ್ದ ರಸ್ತೆಗಳನ್ನು ವೈಟ್‌ಟಾಪಿಂಗ್ ಮಾಡಲು ಕ್ರಮಕೈಗೊಳ್ಳಲಾಗಿದೆ. ಇದುವರೆಗೆ 98.97 ಕಿ.ಮೀ ಉದ್ದದ ರಸ್ತೆಗಳ ವೈಟ್‌ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಇನ್ನುಳಿದ ಕಾಮಗಾರಿಗಳನ್ನು ಮುಂಬರುವ ಜೂನ್ ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಉತ್ತರದಲ್ಲಿ ತಿಳಿಸಲಾಗಿದೆ.

ರಸ್ತೆ ಅಭಿವೃದ್ಧಿ- ಅನುದಾನ (₹ ಕೋಟಿ)	
ವರ್ಷ	ಅನುದಾನ
2018-19	₹1,080
2019-20	₹4,495
2020-21	₹1,193

ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ 30.40 ಕಿ.ಮೀ ಉದ್ದದ ರಸ್ತೆಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಆಮೂಲಾಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತಿದ್ದು, 26.87 ಕಿ.ಮೀ ಉದ್ದದ ರಸ್ತೆಗಳ ಕಾಮಗಾರಿ ಪೂರ್ಣಗೊಂಡಿದೆ.

ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ಕೊಳವೆ ಅಳವಡಿಸಲು ಅಗೆದ ರಸ್ತೆಗಳನ್ನು ₹ 1,000 ಕೋಟಿ ವಿನಿಯೋಗಿಸಲಾಗುತ್ತಿದೆ. ಒಟ್ಟು 875 ಕಿ.ಮೀ ಉದ್ದದ ರಸ್ತೆಗಳನ್ನು ಶೀಘ್ರವೇ ಅಭಿವೃದ್ಧಿಪಡಿಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ.

ರಸ್ತೆ ದುಃಸ್ಥಿತಿ: ಪಾಲಿಕೆ ಪಟ್ಟಿ ಮಾಡಿದ ಕಾರಣಗಳು

- ನಗರದಲ್ಲಿ ಹಿಂದೆ ಅಂದಿನ ಜನಸಂಖ್ಯೆ ಹಾಗೂ ವಾಹನ ಸಾಂದ್ರತೆಗೆ ಅನುಗುಣವಾಗಿ ರಸ್ತೆಗಳನ್ನು ನಿರ್ಮಿಸಲಾಗಿದೆ. ನಗರವು ವೇಗವಾಗಿ ಬೆಳವಣಿಗೆ ಹೊಂದಿದ ಬಳಿಕ ಅತಿ ಹೆಚ್ಚು ಜನ ಸಾಂದ್ರತೆ ಮತ್ತು ವಾಹನ ದಟ್ಟಣೆಯ ನಗರವಾಗಿ ಮಾರ್ಪಾಡಾಗಿದೆ.
- ಮುಖ್ಯ ರಸ್ತೆ ಮತ್ತು ಸಂಪರ್ಕ ರಸ್ತೆಗಳ ಅಗಲಕ್ಕೆ ಅನುಗುಣವಾಗಿ ಸಂಚರಿಸಬೇಕಾದ ವಾಹನಗಳ ಸಾಮರ್ಥ್ಯಕಿಂತ 4 ಪಟ್ಟು ಹೆಚ್ಚು ಸಾಂದ್ರತೆಯ ವಾಹನಗಳು ಸಂಚರಿಸುತ್ತಿವೆ.
- ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಿ ಕಾಮಗಾರಿ ಕೈಗೊಳ್ಳಲು ಅವಕಾಶವಿಲ್ಲ. ಕೆಲವೊಮ್ಮೆ ರಸ್ತೆಯ ಒಂದು ಪಾರ್ಶ್ವದಲ್ಲಿ ಮಾತ್ರ ಕಾಮಗಾರಿ ಕೈಗೊಳ್ಳಬೇಕಾಗುತ್ತದೆ.
- ಬಹುತೇಕ ರಸ್ತೆಗಳು ಕಿರಿದಾಗಿವೆ. ರಸ್ತೆಯನ್ನು ವಾಹನ ಸಂಚಾರಕ್ಕೆ ಮಾತ್ರ ಬಳಸದೇ, ಹಲವಾರು ಮೂಲಸೌಕರ್ಯ ಸೇವಾ ಸಂಸ್ಥೆಗಳು ಅನ್ಯ ಉದ್ದೇಶಗಳಿಗೂ ಇವುಗಳನ್ನು ಬಳಸುತ್ತಿವೆ.
- ಪ್ರಮುಖ ರಸ್ತೆಗಳನ್ನು ಕಾಲಕಾಲಕ್ಕೆ ಅವಶ್ಯಕತೆಗೆ ಅನುಗುಣವಾಗಿ ವಿಸ್ತರಿಸಿಲ್ಲ. ವಿವಿಧ ಇಲಾಖೆಗಳು ಅಳವಡಿಸಿದ್ದ ವಿವಿಧ ಸೌಕರ್ಯಗಳು ಶಿಥಿಲಗೊಳ್ಳುವುದರಿಂದಲೂ ರಸ್ತೆಗಳು ಆಗಾಗ ಹಾಳಾಗುತ್ತಿವೆ
- ಬೆಸ್ಕಾಂ, ಕೆಪಿಟಿಸಿಎಲ್ ಸಂಸ್ಥೆಗಳ ವಿದ್ಯುತ್ ಕೇಬಲ್, ವಿದ್ಯುತ್ ಕಂಬ, ವಿದ್ಯುತ್ ಪರಿವರ್ತಕಗಳನ್ನು ಹೊಸದಾಗಿ ಅಳವಡಿಸುವಾಗ ಮತ್ತು ಸ್ಥಳಾಂತರ ಮಾಡುವಾಗ ರಸ್ತೆ ಹದಗೆಡುತ್ತಿದೆ.
- ಬೆಂಗಳೂರು ಜಲಮಂಡಳಿಯ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸುವಾಗ ಮತ್ತು ಸ್ಥಳಾಂತರ ಮಾಡುವಾಗ ರಸ್ತೆ ಹಾಳಾಗುತ್ತಿದೆ.
- ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಹಾಗೂ ಇತರೆ ಕೇಬಲ್ ಅಥವಾ ಕೊಳವೆಗಳ ಳವಡಿಕೆ ಮತ್ತು ಸ್ಥಳಾಂತರದಿಂದ ರಸ್ತೆ ಹಾಳಾಗುತ್ತಿದೆ.
- 2021ರಲ್ಲಿ ಸತತವಾಗಿ ಸುರಿದ ಮಳೆಯಿಂದ ಮತ್ತು ಅಕಾಲಿಕ ಮಳೆಯಿಂದ ರಸ್ತೆ
- ಜಲಮಂಡಳಿಯು 110 ಹಳ್ಳಿಗಳ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಅಳವಡಿಸುತ್ತಿದ್ದು, ಇದಕ್ಕಾಗಿ ಹೊರ ವಲಯಗಳ ಬಹುತೇಕ ರಸ್ತೆಗಳನ್ನು ಕತ್ತರಿಸಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

JOB OPPORTUNITIES

Engg/ Production Technical

WANTED B.E Mechanical Engineer Fresher's Trainees for an Aircraft Component Manufacturing Industry. Training period 1 YEAR, Stipend 0-6 Months-Rs.12000, 7-12 Months Rs.14000. Mail Your resume to mail@ayyappa-cnc.com

Manager

SKY SCOPE housing ltd Vp with min 2 yrs exp req Branch manager ,Sales manager Interested candidates share resume at -mrchandrasshp@gmail.com Contact-7411124596

Teachers/ Professors

ELITE PUBLIC SCHOOL, Kempegowda layout, Laggere, Bangalore requires teachers, ENGLISH LITERATURE MA/ BA with B.Ed, MATHEMATICS: M.Sc in mathematics 9980200444/ 9972223344 Mail: elitepublicschool@yahoo.co.in

PERSONAL

Change of Name

I, VINUTHA LAKSHMANA GOWDA R/a Shivaganga Dwarkamai, Sai-3, 3rd Floor, Flat No.T4, Hemmigepura, R.R.Nagar, Bangalore-98 have changed my name to VINUTHA BOREGOWDA LAKSHMANEGOWDA affidavit dated 01.04.2022 notary D.S Chandrakanth.

RENTAL PROPERTIES

Accommodation Available

House

R.M.V. SECOND Three BHK Bungalow Site 3800Feet Corner for rent- 9986033339, mundhralightings@gmail.com

BUILDERS ESSENTIAL

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS.9448572697

LEAKAGE... LEAKAGE... Old/New Building,Sump, Bathroom, Wallcrack, Skylight, Terrace Waterproofing done by NewTechnology- 9880916988

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

REAL ESTATE SELLING

Flat

Vijayanagar

2-BHK FLAT FOR SALE- 1051 sqft=Rs.44 lakhs Fixed, 919 saft=Rs.38.50 lakhs Fixed at Pipeline Road, Vijayanagar, Bangalore. Contact: 9880034233, 9110432149

Sites

Banashankari

BANASHANKARI 6TH Stage, Anjanapura, Available/Wanted, BDA Sites 20x30,30x40,40x60, 50x80, Contact: 9900097239, 9742148555

Hosur Road

APPROX ONE Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

Classifieds
Book Your Classifieds Ads
Online Log in to dhclassifieds.com
For More Details Call 9880856233 • 9886213331
Email: Santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

'ಏಕಾಂಗಿತನಕ್ಕೆ ಪುಸ್ತಕ ಮದ್ದು'

ಪ್ರಜಾವಾಣಿ ವಾರ್ತೆ

ವಿಕ್ರಂ ಪ್ರಕಾಶನ ಪ್ರಕಟಿಸಿದ ನಾಲ್ಕು ಕೃತಿಗಳನ್ನು ಶಾಸಕ ಎಸ್. ಸುರೇಶ್‌ಕುಮಾರ್ ನಗರದಲ್ಲಿ ಭಾನುವಾರ ಲೋಕಾರ್ಪಣೆ ಮಾಡಿದರು. ಹೈಕೋರ್ಟ್ ನ್ಯಾಯಮೂರ್ತಿ ವಿ. ಶ್ರೀಶಾನಂದ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಸಾಹಿತಿ ಸಂತೋಷ್ ಕುಮಾರ್ ಮೆಹೆಂದಳೆ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗಿಲ್ಲ. ಏಕಾಂಗಿತನದಿಂದ ಹೊರಬರಲು ಜನರು ಈಗಲೂ ಪುಸ್ತಕಗಳ ಮೊರೆ ಹೋಗುತ್ತಿದ್ದಾರೆ' ಎಂದು ಶಾಸಕ ಸುರೇಶ್ ಕುಮಾರ್ ಹೇಳಿದರು.

ವಿಕ್ರಂ ಪ್ರಕಾಶನ ಪ್ರಕಟಿಸಿರುವ ನಿವೃತ್ತ ಡಿಜಿಪಿ ಡಿ.ವಿ. ಗುರುಪ್ರಸಾದ್ ಅವರ 'ಅಪರಾಧಗಳ ಬೆನ್ನತ್ತಿ, ಡಾ. ನಾ. ಸೋಮೇಶ್ವರ ಅವರ 'ನಮ್ಮ ಹೊಟ್ಟೆಯೊಳಗೊಂದು ಮಿದುಳು', ಡಾ. ವಿನೋದ ಜಿ. ಕುಲಕರ್ಣಿ ಅವರ 'ತಲ್ಲಣಿಸದಿರು ಮನವೇ' ಮತ್ತು ಅಂಕಣಕಾರ ಟಿಎನ್ನೆಸ್ ಅವರ 'ಯೋಧರಿಗೊಂದು ನಮನ' ಕೃತಿಗಳು ಮತ್ತು ವೆಬ್‌ಸೈಟ್ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಭಾನುವಾರ ಮಾತನಾಡಿದರು.

'ಸಾಮಾಜಿಕ ಜಾಲತಾಣಗಳಿಂದಾಗಿ ಓದುಗರ ಸಂಖ್ಯೆ ಕಡಿಮೆಯಾಗಿದೆ ಎನ್ನುವುದು ಕೆಲವರ ಅಭಿಪ್ರಾಯ. ಆದರೆ, ಓದುಗರ ಸಂಖ್ಯೆ ಹೆಚ್ಚಾಗುತ್ತಿದೆ. ಜನರು ಪುಸ್ತಕಗಳನ್ನು ಓದಲು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಏಕಾಂಗಿತನ ಹೆಚ್ಚಾಗುತ್ತಿದೆ. ಈ ಸಮಸ್ಯೆಯಿಂದ ಹೊರಬರಲು ಪುಸ್ತಕಗಳ ಮೊರೆ ಹೋಗುತ್ತಿದ್ದಾರೆ. ಪುಸ್ತಕ ಮಳಿಗೆ ಮತ್ತು ಆನ್‌ಲೈನ್ ವೇದಿಕೆಗಳಲ್ಲಿ ಮಾರಾಟವಾಗುತ್ತಿರುವ ಪುಸ್ತಕಗಳ ಸಂಖ್ಯೆಯೇ ಇದಕ್ಕೆ ಸಾಕ್ಷಿ' ಎಂದು ವಿವರಿಸಿದರು.

ಹೈಕೋರ್ಟ್‌ನ ನ್ಯಾಯಮೂರ್ತಿ ವಿ.ಶ್ರೀಶಾನಂದ, 'ಸಮಾಜದಲ್ಲಿ ಅಪರಾಧಗಳು ಕಡಿಮೆಯಾದಾಗ ಜನರು ನೆಮ್ಮದಿಯಿಂದ ಬದುಕಬಹುದು. ಉತ್ತಮ ಪುಸ್ತಕಗಳ ಮೂಲಕ ಅಜ್ಞಾನದ ಕತ್ತಲು ಮರೆಯಾಗಿ ಸತ್ಯ ಸಂಗತಿಗಳು ತಿಳಿಯುತ್ತವೆ' ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, 'ರಾಜ್ಯದಲ್ಲಿ ಪ್ರತಿವರ್ಷ ಸುಮಾರು ಐದು ಸಾವಿರ ಕನ್ನಡ ಪುಸ್ತಕಗಳು ಬಿಡುಗಡೆಯಾಗುತ್ತವೆ. ಆದರೆ, ಇವುಗಳಲ್ಲಿ ಕೆಲವೇ ಕೆಲವು ಮರು ಮುದ್ರಣವಾಗುತ್ತವೆ. ಅಂದರೆ, ಪುಸ್ತಕಗಳ ಮಾರಾಟ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲವೇ ಅಥವಾ ಓದುಗರ ಸಂಖ್ಯೆ ಕಡಿಮೆಯಾಗಿದೆಯೇ ಎನ್ನುವ ಬಗ್ಗೆ ವಿಶ್ಲೇಷಿಸಬೇಕಾಗಿದೆ. ಜತೆಗೆ, ಕಾಲಕ್ಕೆ ತಕ್ಕಂತೆ ಇ-ಪುಸ್ತಕಗಳತ್ತ ಓದುಗರು ಹೊರಳುತ್ತಿದ್ದಾರೆ. ಪ್ರಕಾಶಕರು ಈ ನಿಟ್ಟಿನಲ್ಲಿಯೂ ಆಲೋಚಿಸಬೇಕಾಗಿದೆ' ಎಂದರು.

ಕಾರ್ಯಕ್ರಮದಲ್ಲಿ ರಾಜ್ಯದ 18 ವೀರ ಯೋಧರನ್ನು ಸನ್ಮಾನಿಸಲಾಯಿತು.

'ಮೂಡ್ಲಮಣೇವು' ಸಂಭ್ರಮ

ತುಮಕೂರು: ಯುಗಾದಿ ಪ್ರಯುಕ್ತ ಶಿರಾ ತಾಲ್ಲೂಕಿನ ಬೇವಿನಹಳ್ಳಿ ಗೊಲ್ಲರಹಟ್ಟಿಯಲ್ಲಿ ಮೂಡ್ಲಮಣೇವು ಆಚರಣೆಯು ಶನಿವಾರ ಸಂಭ್ರಮದಿಂದ ನೆರವೇರಿತು.

ಹಳ್ಳಿಯ ಕೆರೆಯಂಗಳದಲ್ಲಿ ಪೂಜಾರಪ್ಪ ಮತ್ತು ಅರೆನೇರ ಗೊಲ್ಲರ ದಾಸಪ್ಪ ನೇತೃತ್ವದಲ್ಲಿ ಹಬ್ಬ ನಡೆಯಿತು. ಹಬ್ಬದ ದಿನ ಕಾಡುಗೊಲ್ಲರು ಪ್ರತಿ ವರ್ಷ ಸಾಂಪ್ರದಾಯಿಕವಾಗಿ ಮೂಡ್ಲಮಣೇವು ಆಚರಣೆಯನ್ನು ಆಚರಿಸುತ್ತಾರೆ.

ದಾಸಪ್ಪ ಮಡಿಯಿಂದ ಜಾಗಟೆ ಮತ್ತು ಬವನಾಸಿಯೊಂದಿಗೆ ಜುಂಜಪ್ಪನ ಗುಡಿಗೆ ಬಂದು ಗುಡಿಯ ಮುಂದೆ ಜಾಗಟೆ ಬಾರಿಸಿ, ಗೋವಿಂದನನ್ನು ಜಪಿಸಿದರು. ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಜುಂಜಪ್ಪ ಮತ್ತು ತಿಮ್ಮಪ್ಪನಿಗೆ ಪೂಜೆ ಸಲ್ಲಿಸಿ, ಹಟ್ಟಿಯ ಎಲ್ಲರ ಮನೆಗಳಿಗೂ ತೆರಳಿ, ಮನೆಗಳ ಮುಂದೆ ನಿಂತು ಜಾಗಟೆ ಬಾರಿಸಿ ಗೋವಿಂದನನ್ನು ಕೂಗುವುದು ಹಬ್ಬದ ವಿಶೇಷ. ಇದರಂತೆ ಹಬ್ಬದ ಆಚರಣೆಯೂ ನೆರವೇರಿತು.

ಗ್ರಾಮಸ್ಥರು ಫಲಹಾರ ಮತ್ತು ಕಳಸ ಹೊತ್ತು ಪೂಜಾರಪ್ಪ ಮತ್ತು ದಾಸಪ್ಪರ ನೇತೃತ್ವದಲ್ಲಿ ಮೆರವಣಿಗೆಯ ಮೂಲಕ ಕೆರೆಯಂಗಳಕ್ಕೆ ಮೂರು ಗುಂಪುಗಳಾಗಿ ಪ್ರತ್ಯೇಕವಾಗಿ ಸೇರಿ ಹಬ್ಬ ಆಚರಿಸಿದರು.

ಕೆರೆಯಂಗಳದಲ್ಲಿ ಮೂರು ಗುಂಪುಗಳು ಜಾಡಿ ಹಾಸಿ, ಪ್ರತಿ ಗುಂಪಿನವರು ತಾವು ತಂದಿದ್ದ ಜಾಗಟೆ, ತಿರುಪತಿ ಚಂಬು ಮತ್ತು ಹಣ್ಣುಕಾಯಿಗಳನ್ನು ಜಾಡಿಯ ಮೇಲಿಟ್ಟು, ಪೂಜೆ ಮುಗಿಸಿದರು. ಜಾಡಿಯ ಮುಂದೆ ಬಿಳಿ ವಸ್ತ್ರ ಹಾಸಿ ಮಣೇವಿಗೆ ಮೂರು ಗುಡ್ಡೆಗಳಾಗಿ ಫಲಹಾರವಿಟ್ಟರು. ಪೂಜಾರಪ್ಪ ಸಾಂಪ್ರದಾಯಿಕ ನೃತ್ಯದ ಮೂಲಕ ಮಣೇವು ಪೂಜೆ ಮುಗಿಸುವ ದೃಶ್ಯಗಳು ಹಬ್ಬದ ಸಂಭ್ರಮಕ್ಕೆ ಮತ್ತಷ್ಟು ಮೆರಗು ನೀಡಿತು.

ರೇಷ್ಮೆಗೂಡು ಮಾರುಕಟ್ಟೆಗೆ ಜರ್ಮನಿ ನಿಯೋಗ ಭೇಟಿ

ರಾಮನಗರ: ಇಲ್ಲಿನ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗೆ ಶನಿವಾರ ಜರ್ಮನಿಯ ನಿಯೋಗವು ಭೇಟಿ ನೀಡಿ ಇಲ್ಲಿನ ವ್ಯವಸ್ಥೆ ಹಾಗೂ ಕಾರ್ಯ ನಿರ್ವಹಣೆ ಕುರಿತು ಮಾಹಿತಿ ಪಡೆಯಿತು.

ಜರ್ಮನಿಯ ನಿಯೋಗದಲ್ಲಿವರಿಗೆ, ಕೇಂದ್ರ ರೇಷ್ಮೆ ಮಂಡಳಿಯ ಹಿರೇಮಠ್ ಎಂಬುವರು ಸಾಥ್ ನೀಡಿದರು. ಮಾರುಕಟ್ಟೆಗೆ ಯಾವ ಪ್ರಮಾಣದಲ್ಲಿ ಗೂಡು ಬರುತ್ತದೆ. ಅದನ್ನು ಹೇಗೆ ಹರಾಜು ಮಾಡಿ ಸಾಗಿಸಲಾಗುತ್ತದೆ ಎಂದು ವಿವರಿಸಲಾಯಿತು. ಹಬ್ಬದ ನಡುವೆಯೂ ಶನಿವಾರ ಹಾಗೂ ಭಾನುವಾರ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಗೂಡು ಆವಕವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

ನೈರುತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ.: 08/ಎಂವೈಎಸ್/2022 ದಿನಾಂಕ:29.03.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಕಾಮಗಾರಿ ವಿವರ	ಅಂದಾಜು ವೆಚ್ಚ
1 ಮೈಸೂರು: 24 ತಿಂಗಳ ಕಾಲ ಉದ್ಯಾನ, ಮರಗಳು, ಬೇಲಿಗಳು ಇತ್ಯಾದಿಗಳ ನಿರ್ವಹಣೆ.	Rs. 33,33,403/-
2 ಎಡಿಇಎನ್/ಎಸ್‌ಕೆಎಲ್‌ಆರ್ ಉಪ ವಿಭಾಗ: ನೀರಿನ ಚರಂಡಿ ಮತ್ತು ಗಾರ್ಲ್ಯಾಂಡ್ ಚರಂಡಿಗಳ ದುರಸ್ತಿ, ಆರ್‌ಆರ್ ಕಲ್ಲಿನ ಗೋಡೆಗಳ ಬಲಪಡಿಸುವುದು ಮತ್ತು ಬದಿಯ ಚರಂಡಿಗಳ ದುರಸ್ತಿ ಮತ್ತು ಎಡಿಇಎನ್/ಎಸ್‌ಬಿಹೆಚ್‌ಆರ್ ಘಾಟ್ ವಿಭಾಗದಲ್ಲಿ ರೈಲ್ವೆ ಹಳಿಗಳ ಪಕ್ಕದಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವ ಮತ್ತು ದುರ್ಬಲ ಮರಗಳನ್ನು ಕಡಿಯುವುದು.	Rs. 2,27,68,951/-
3 ಎಡಿಇಎನ್/ಎಸ್‌ಕೆಎಲ್‌ಆರ್ ಉಪ ವಿಭಾಗ: ಉಪಕೆಲಸ–1: ಎಡಿಇಎನ್/ಎಸ್‌ಕೆಎಲ್‌ಆರ್ ಉಪ ವಿಭಾಗ 39/100–200, 131/100–200, 116/00–100 ಮತ್ತು 177/300–400 (ಒಟ್ಟು 190 ಮೀ) ನಲ್ಲಿನ ವಿವಿಧ ಸ್ಥಳಗಳಲ್ಲಿ ಕೋರ್ಸ್ಡ್ ರಬಲ್ ಮ್ಯಾಸನ್ರಿ ಗೋಡೆಗಳ ಬದಲಿಗೆ ಗೇಬಿಯನ್ ಗೋಡೆಗಳ ನಿಬಂಧನೆ. ಉಪಕೆಲಸ–2: ಎಡಿಇಎನ್/ಎಸ್‌ಕೆಎಲ್‌ಆರ್ ಉಪ ವಿಭಾಗ ಎಸ್‌ಎಸ್‌ಇ ಪಿಡಬ್ಲ್ಯೂವೈ ಹೆಚ್‌ಎಎಸ್–ಎಸ್‌ಕೆಎಲ್‌ಆರ್ ಮತ್ತು ಎಸ್‌ಎಸ್‌ಇ ಪಿಡಬ್ಲ್ಯೂವೈ ಕೆಬಿಪಿಆರ್ ವ್ಯಾಪ್ತಿಯಲ್ಲಿ ಒಟ್ಟು 2000ಮೀ ಉದ್ದದ ಚದುರಿದ ಸ್ಥಳಗಳಲ್ಲಿ ಆರ್‌ಆರ್ ಕಲ್ಲಿನ ಗೋಡೆಗಳ ಬಲಪಡಿಸುವಿಕೆ ಉಪಕೆಲಸ–3: ಹೆಚ್‌ಎಎಸ್/ಎಸ್‌ಕೆಎಲ್‌ಆರ್ & ಎಸ್‌ಬಿಹೆಚ್‌ಆರ್ ಪಡೀಲ್ ವಿಭಾಗ: ರೈಲ್ವೇ ಹಳಿಯ ಪಕ್ಕದಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವ ಮತ್ತು ಸವರುವ ಮತ್ತು ದುರ್ಬಲವಾದ ಮರಗಳನ್ನು ಕಡಿಯುವುದು.	Rs. 2,40,66,434/-
4 ಹರಿಹರ–ದೇವರಗುಡ್ಡ ಮತ್ತು ತೋಳಹುಣಸೆ–ದಾವಣಗೆರೆ ನಡುವಿನ ದ್ವಿಗುಣ ಗೊಳಿಸುವ ಸಂಬಂಧಿತ ಟ್ರ್ಯಾಕ್ ಬ್ಯಾಲೆನ್ಸ್ ಕಾಮಗಾರಿಗಳು.	Rs. 4,66,58,030/-
5 ಎಡಿಇಎನ್ ಸಿಟಿಎ ಉಪ ವಿಭಾಗದಲ್ಲಿ ಆರ್‌ಯುಬಿ ರಸ್ತೆಯ ಹೂಳು ತೆಗೆಯುವುದು, ಚರಂಡಿಗಳ ಶುಚಿಗೊಳಿಸುವಿಕೆ, ಮಳೆನೀರಿನ ಶೇಖರಣೆಯನ್ನು ನಿರ್ಮೂಲನೆ ಮಾಡುವುದು ಮತ್ತು ಅಪ್ರೋಚ್‌ಗಳು ಮತ್ತು ಪ್ಯಾಚ್‌ಗಳಲ್ಲಿ ಸಸ್ಯಗಳನ್ನು ತೆರವುಗೊಳಿಸುವುದು ಆರ್‌ಆರ್‌ಬಿ-ಜೆಆರ್‌ಯು (36 ಸಂಖ್ಯೆ) ಮತ್ತು ಜೆಆರ್‌ಯು-ಆರ್‌ಡಿಜಿ ವಿಭಾಗ (55 ಸಂಖ್ಯೆ) ದಿಂದ ರಸ್ತೆ, ಡ್ರೈನ್ ಮತ್ತು ಆರ್‌ಯುಬಿ ಗಳ ತಡೆಗೋಡೆ ದುರಸ್ತಿ ಕೆಲಸಗಳು.	Rs. 60,03,115/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.04.2022 ಸಮಯ: 11:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕೆಲಸಗಳು) ಮೈಸೂರು
ಪಿಯುಬಿ/01/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022-23
S.W.Railways SWRRLY SWRRLY

ಸಂಭ್ರಮದ ಯುಗಾದಿ

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ: ತಾಲ್ಲೂಕು ವ್ಯಾಪ್ತಿಯಲ್ಲಿ ಯುಗಾದಿ ಹಬ್ಬವನ್ನು ಶನಿವಾರ ಮತ್ತು ಭಾನುವಾರ ಸಡಗರದಿಂದ ಆಚರಣೆ ಮಾಡಿದರು. ಕೆಲ ಗ್ರಾಮಗಳಲ್ಲಿ ರೈತರು ಹೊಸ ದಿನದಂದು ಹೊನ್ನಾರು ಹೂಡುವ ಮೂಲಕ ತಮ್ಮ ಪ್ರಸಕ್ತ ವರ್ಷ ಆಚರಿಸಿದರು.

ಸಾಮಾನ್ಯವಾಗಿ ಯುಗಾದಿ ಹಬ್ಬ ತರುವಾಯ ಹೊಸ ವರ್ಷದ ಮಳೆಗಾಲ ಆರಂಭವಾಗಿ ಪೂರ್ವ ಮುಂಗಾರು ಬೆಳೆ ಬೆಳೆಯಲು ಭೂಮಿ ಹಸನು ಮಾಡುತ್ತಾರೆ. ಕೆಲ ಬಾರಿ ಒಂದು ತಿಂಗಳು ಅಧಿಕ ಮಾಸ ಬಂದರೆ ಯುಗಾದಿ ಹಬ್ಬದ ಮೊದಲ ದಿನವೇ ಹೊಸ ಮಳೆ ಅಶ್ವಿನಿ ಪ್ರವೇಶವಾಗುತ್ತದೆ. ಆದರೆ ಈ ಬಾರಿ ಇದೇ ಏಪ್ರಿಲ್ 14ರಂದು ಅಶ್ವಿನಿ ಮಳೆ ಪ್ರವೇಶವಾಗಲಿದೆ. 4ರಂದು ಕೊನೆ ಮಳೆ ರೇವತಿ ಆರಂಭವಾಗಲಿದ್ದು ಅಲ್ಲಲ್ಲಿ ಮಳೆಯ ಸಿಂಚನವೂ ಆಗಿದೆ. ಇದರಿಂದ ರೈತರಲ್ಲಿ ಹೊಸ ಹುಮ್ಮಸ್ಸು ಬಂದಿದ್ದು ಹೊನ್ನಾರು ಹೂಡಿ ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿದ್ದಾರೆ.

ತಾಲ್ಲೂಕಿನ ಚಟ್ನಸಂದ್ರ ಗ್ರಾಮದಲ್ಲಿ ಯುಗಾದಿ ಹಬ್ಬದ ಎರಡನೇ ದಿನವಾದ ಭಾನುವಾರ ನೇಗಿಲಿಗೆ ನೊಗ ಹೂಡಿ ಎತ್ತುಗಳನ್ನು ಶೃಂಗರಿಸಿ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿದರು. ಗ್ರಾಮದ ಮುಂದಿನ ಹೊಲದಲ್ಲಿ ಭೂಮಿ ತಾಯಿಗೆ ಪೂಜಿಸಿ ಎತ್ತುಗಳಿಗೆ ಎಡೆ ನೀಡಿ ನೇಗಿಲು ಹೂಡಿದರು.

ಅಶೋಕ ಹಾರನಹಳ್ಳಿ ಅವರು 'ವಿಪ್ರ ನುಡಿ' ಪತ್ರಿಕೆಯ ಇಂಗ್ಲಿಷ್ ಅವತರಣಿಕೆಯನ್ನು ಬಿಡುಗಡೆ ಮಾಡಿದರು. ಸಂಘಟನಾ ಕಾರ್ಯದರ್ಶಿ ಡಾ.ಬಿ.ಎಸ್.ರಾಘವೇಂದ್ರ ಭಟ್, ಖಜಾಂಚಿ ವಿ.ಎಸ್.ನಾಯಕ್, ವಿಪ್ರ ನುಡಿ ಕನ್ನಡ ಪತ್ರಿಕೆಯ ಪ್ರಧಾನ ಸಂಪಾದಕ ಪ್ರೊ. ಶ್ರೀಧರ್, ಕಾರ್ತಿಕ್ ಬಾಪಟ್, ಕೃಷ್ಣಸ್ವಾಮಿ ಸುಬ್ಬರಾವ್, ಡಾ.ಎಂ.ಆರ್.ವಿ.ಪ್ರಸಾದ್ ಇದ್ದರು

'ವಿದೇಶದಲ್ಲಿರುವ ಬ್ರಾಹ್ಮಣರ ಒಗ್ಗೂಡಿಸಲು ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯೋಗ, ಅಧ್ಯಯನ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ವಿದೇಶಗಳಲ್ಲಿ ನೆಲೆಸಿರುವ ಬ್ರಾಹ್ಮಣ ಸಮುದಾಯದ ಜನರನ್ನು ಒಗ್ಗೂಡಿಸಿ ಮಹಾಸಭಾದ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳಲು ಯೋಜನೆ ರೂಪಿಸಲಾಗಿದೆ' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದರು.

ಬ್ರಾಹ್ಮಣ ಮಹಾಸಭಾದ ಮುಖವಾಣಿ 'ವಿಪ್ರ ನುಡಿ' ಪತ್ರಿಕೆಯ ಇಂಗ್ಲಿಷ್ ಅವತರಣಿಕೆಯ ಪ್ರಥಮ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಚಟುವಟಿಕೆಗಳನ್ನು ವಿದೇಶಗಳಿಗೂ ವಿಸ್ತರಿಸುವ ಗುರಿ ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಅಮೆರಿಕ, ಬ್ರಿಟನ್ ಸೇರಿ ವಿವಿಧ ದೇಶಗಳಲ್ಲಿರುವ ಸಮುದಾಯದ ಜನರನ್ನು ಒಗ್ಗೂಡಿಸಲು ನಿರ್ಧರಿಸಿದ್ದೇವೆ' ಎಂದರು.

'ವಿಪ್ರ ನುಡಿ ಪತ್ರಿಕೆಯ ಇಂಗ್ಲಿಷ್ ಅವತರಣಿಕೆಯ ಪ್ರಥಮ ಸಂಚಿಕೆಯು ಸದ್ಯ ಆನ್‌ಲೈನ್‌ನಲ್ಲಿ ಲಭ್ಯವಿರಲಿದೆ. ಚಂದಾದಾರರ ಸಂಖ್ಯೆ ಹೆಚ್ಚಾದರೆ ಮುದ್ರಣ ರೂಪದಲ್ಲೂ ಹೊರತರಲಾಗುತ್ತದೆ' ಎಂದು ತಿಳಿಸಿದರು.

ಮಹಾಸಭಾ ಕಾರ್ಯದರ್ಶಿ ಶ್ರೀಧರ ಮೂರ್ತಿ, ಉಪಾಧ್ಯಕ್ಷ ರಾಜೇಂದ್ರ ಪ್ರಸಾದ್, ಹಿರಿಯಣ್ಣಸ್ವಾಮಿ, ಇಂಗ್ಲಿಷ್ ಆವೃತ್ತಿಯ ಪ್ರಧಾನ ಸಂಪಾದಕ ಸತ್ಯೇಶ್ ಬೆಳ್ಳೂರು, ಮಹಾಸಭಾ ಸದಸ್ಯರಾದ ಉಮೇಶ್, ಗುರುನಾಥ ಭಟ್, ವೇಣುಗೋಪಾಲ್ ವೈದ್ಯ, ಗುರುರಾಜ್, ಮಾರುತಿ ಪ್ರಸಾದ್, ಅಶೋಕ್ ರಾವ್ ಇದ್ದರು.

ನಗರದಲ್ಲಿ ಇಂದು

'ನವೀನ ನಿರ್ಮಾಣ ಸಾಮಗ್ರಿಗಳು ಮತ್ತು ತ್ಯಾಜ್ಯ ನಿರ್ವಹಣೆ ಅಭ್ಯಾಸಗಳು' ಕುರಿತು ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ: ಉದ್ಘಾಟನೆ–ಮನಮೋಹನ್ ಕಲ್ಗಾಲ್, ಅಧ್ಯಕ್ಷೀಯ ಭಾಷಣ–ಸಿ.ಪಿ.ಪ್ರಕಾಶ್, ಆಯೋಜನೆ–ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜು, ಸ್ಥಳ–ಎ.ವಿ.ಸಭಾಂಗಣ, ಕಾಲೇಜು ಆವರಣ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ ಲಾಲ್ಗುಡಿ ಕೃಷ್ಣನ್ ಮತ್ತು ವಿಜಯ ಲಕ್ಷ್ಮಿ, ವಿ.ಪ್ರವೀಣ್, ಜಿ.ಗುರು ಪ್ರಸನ್ನ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ಲಾಲ್ಗುಡಿ ಜಿ.ಜೆ.ಆರ್ ಕೃಷ್ಣನ್ ಮತ್ತು ಲಾಲ್ಗುಡಿ ವಿಜಯಲಕ್ಷ್ಮಿ

ನಟ ಪುನೀತ್ ರಾಜ್‌ಕುಮಾರ್ ಸೆಲ್ಫಿ ಗ್ಯಾಲರಿ ಹಾಗೂ ಅಪರೂಪದ ವೈಜ್ಞಾನಿಕ ಪ್ರದರ್ಶನ: ಆಯೋಜನೆ–ರೊಬೊಟಿಕ್ಸ್ ಬರ್ಡ್ಸ್ ಕಿಂಗ್‌ಡಮ್, ಸ್ಥಳ–ಬಿನ್ನಿ ಮಿಲ್ ಮೈದಾನ, ಟ್ಯಾಂಕ್‌ಬಂಡ್ ರಸ್ತೆ, ಸಂಜೆ 5.30ರಿಂದ

ವಸಂತ ನವರಾತ್ರಿ ಶ್ರೀರಾಮೋತ್ಸವ: ವಿ. ರಾಧಾ ಅವರಿಂದ ಭಕ್ತಿಗೀತೆಗಳು, ಆಯೋಜನೆ ಮತ್ತು ಸ್ಥಳ–ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30ರಿಂದ

ನ್ಯಾಮತಿ ತಾಲ್ಲೂಕು ಬಸವನಹಳ್ಳಿ ಮತ್ತು ಮಾದನಬಾವಿ ಗ್ರಾಮಸ್ಥರ ನಡುವೆ ಭಾನುವಾರ ದೇವರ ಉತ್ಸವ ಸಂಬಂಧ ಗುಂಪು ಘರ್ಷಣೆ ಉಂಟಾಗಿದ್ದು, ಜನರನ್ನು ನಿಯಂತ್ರಿಸಲು ಸೇರಿದ್ದ ಪೊಲೀಸರು.

ದೇವರ ಉತ್ಸವ: ಗ್ರಾಮಸ್ಥರ ನಡುವೆ ಗಲಾಟೆ

ಪ್ರಜಾವಾಣಿ ವಾರ್ತೆ

ಬಸವನಹಳ್ಳಿ (ನ್ಯಾಮತಿ): ಕುರುವ ಗಡ್ಡೆ ರಾಮೇಶ್ವರ ರಥೋತ್ಸವದಲ್ಲಿ ಪಾಲ್ಗೊಳ್ಳಲು ಮಾದನಬಾವಿ ಗ್ರಾಮಸ್ಥರು ಬೀರಲಿಂಗೇಶ್ವರಸ್ವಾಮಿ, ರಂಗನಾಥಸ್ವಾಮಿ, ಮುರುಡಲಿಂಗೇಶ್ವರ ಸ್ವಾಮಿ ಉತ್ಸವ ಮೂರ್ತಿಗಳನ್ನು ಪಕ್ಕದ ಬಸವನಹಳ್ಳಿ ಗ್ರಾಮದ ಮುಖಾಂತರ ಮೆರವಣಿಗೆ ಮೂಲಕ ತೆರಳುವಾಗ ಎರಡೂ ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆದು, ಕಲ್ಲು ತೂರಾಟ ನಡೆದಿದೆ.

ರಥೋತ್ಸವದ ನಂತರ ಮಾದನಬಾವಿ ಗ್ರಾಮಸ್ಥರು ಬಸವನಹಳ್ಳಿ ಮೂಲಕವೇ ಮರಳಿ ಬರುವುದು ವಾಡಿಕೆ. ಮಾದನಬಾವಿ ಗ್ರಾಮಸ್ಥರನ್ನು ತಡೆಯುವ ಸಲುವಾಗಿ ಬಸವನಹಳ್ಳಿ ಗ್ರಾಮಸ್ಥರು ಗುಂಪುಗೂಡಿದ್ದರಿಂದ ಎರಡೂ ಗ್ರಾಮಗಳಲ್ಲಿ ಬಿಗುವಿನ ಪರಿಸ್ಥಿತಿ ಉಂಟಾಗಿದೆ.

ಎರಡು ಗ್ರಾಮಗಳ ಮಧ್ಯೆ ದೇವರ ವಿಚಾರದಲ್ಲಿ ತಲೆತಲಾಂತರದಿಂದ ತಕರಾರು ಇದೆ. 'ಯುಗಾದಿ ಚಂದ್ರದರ್ಶನ ನಂತರ ಗಡ್ಡೆ ರಾಮೇಶ್ವರಕ್ಕೆ ಉತ್ಸವ ಮೂರ್ತಿಗಳನ್ನು ಬಸವನಹಳ್ಳಿ ಮೂಲಕ ತೆಗೆದುಕೊಂಡು ಹೋಗುತ್ತೇವೆ. ಆ ವಿಚಾರವಾಗಿ ಬಸವನಹಳ್ಳಿ ಗ್ರಾಮಸ್ಥರು ಗಲಾಟೆ ಮಾಡಿದ್ದಾರೆ' ಎಂದು ಮಾದನಬಾವಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಮಾದನಬಾವಿ ಗ್ರಾಮಸ್ಥರು ಗ್ರಾಮದ ಮೂಲಕ ತೆರಳುವಾಗ ಗಲಾಟೆ ಮಾಡಿದರು ಎಂದು ಬಸವನಹಳ್ಳಿ ಗ್ರಾಮಸ್ಥರು ಪ್ರತ್ಯಾರೋಪ ಮಾಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಹೆಚ್ಚುವರಿ ಎಸ್‌ಪಿ ರಾಮಗೊಂಡ ಬಿ. ಬಸರಂಗಿ, ಚನ್ನಗಿರಿ ಸಿಪಿಐ ಮಧು, ಹರಿಹರ ಸಿಪಿಐ ಸತೀಶ, ಹೊನ್ನಾಳಿ ಎಸ್‌ಐ ಬಸವನಗೌಡ, ನ್ಯಾಮತಿ ಎಸ್‌ಐ ಪಿ.ಎಸ್. ರಮೇಶ, ಹದಡಿ ಎಸ್‌ಐ ರೂಪಾ ತೆಂಬದ್ ಇದ್ದರು.

ನಾಳೆ ಮಾಸ್ತೇನಹಳ್ಳಿ ವೀರಭದ್ರ ರಥೋತ್ಸವ

ಆನೇಕಲ್ : ತಾಲ್ಲೂಕಿನ ಮಾಸ್ತೇನಹಳ್ಳಿ ವೀರಭದ್ರಸ್ವಾಮಿ ರಥೋತ್ಸವ ಮಂಗಳವಾರ (ಏ.5) ನಡೆಯಲಿದೆ.

ರಥೋತ್ಸವದ ಅಂಗವಾಗಿ ಸೋಮವಾರ ರಾಜೋಪಾಚಾರ, ತ್ರಿಮುಖ ಗಣಪತಿ, ಅನ್ನಪೂರ್ಣೇಶ್ವರಿ ಹಾಗೂ ಕಾಶಿ ವಿಶ್ವೇಶ್ವರ ಸ್ವಾಮಿಗೆ ರುದ್ರಾಭಿಷೇಕ, ವೀರಗಾಸೆ, ವೃಷಭವಾಹನೋತ್ಸವ, ಕರಡಿ ವಾದ್ಯ ಹಾಗೂ ಅಗ್ನಿಕೊಂಡ ನಡೆಯಲಿವೆ.

ಮಂಗಳವಾರ ರಾಜಾಪುರ ಶ್ರೀಗಳು, ಕನಕಪುರ ಮರಳೇಗವಿ ಮಠ ಮತ್ತು ಗುಮ್ಮಳಾಪುರ ಶ್ರೀಗಳ ಸಾನ್ನಿಧ್ಯದಲ್ಲಿ ರಥೋತ್ಸವ, ರಾತ್ರಿ ಧರ್ಮರಾಯಸ್ವಾಮಿ ಕರಗ ಮಹೋತ್ಸವ ಹಾಗೂ 20 ಗ್ರಾಮ ದೇವತೆಗಳ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದೆ. 'ತಾಲ್ಲೂಕಿನ ಪ್ರಮುಖ ಶೈವ ಕ್ಷೇತ್ರಗಳಲ್ಲಿ ಮಾಸ್ತೇನಹಳ್ಳಿ ವೀರಭದ್ರಸ್ವಾಮಿ ದೇವಾಲಯವು ಪ್ರಮುಖವಾಗಿದೆ. ನಿತ್ಯ ದಾಸೋಹ ನಡೆಯುತ್ತಿರುವ ಏಕೈಕ ಕೇಂದ್ರವಾಗಿದೆ'ಎಂದು ದೇವಾಲಯ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

ನಗರದ ಪೂರ್ಣಪ್ರಜ್ಞ ಬಡಾವಣೆಯಲ್ಲಿ ಸಿದ್ಧಗಂಗಾ ಚಾರಿಟಬಲ್ ಸಮಿತಿಯ ಪದಾಧಿಕಾರಿಗಳು ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮ ದಿನದ ಅಂಗವಾಗಿ ಶಿವಕುಮಾರ ಸ್ವಾಮೀಜಿ ವೃತ್ತವನ್ನು ಅನಾವರಣಗೊಳಿಸಿದರು. ಸುಮಾರು 800 ಮಂದಿಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಸಮಿತಿ ಅಧ್ಯಕ್ಷ ಸುಭಾಷ್ ಸಿ. ಕುಬಸದ, ಗೌರವ ಅಧ್ಯಕ್ಷ ಪ್ರಸಾದ್, ಪಾಲಿಕೆ ಮಾಜಿ ಸದಸ್ಯ ಹನುಮಂತಯ್ಯ ಮತ್ತು ರಮೇಶ್ ರಾಜು ಇದ್ದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್
(9606038256)
ಸಹ ಮಾಡಬಹುದು.

ಕಳಪೆ ಕಾಮಗಾರಿ: ಗುಂಡಿಗೆ ಸಿಲುಕಿದ ಲಾರಿ

ನಂದಿನಿ ಬಡಾವಣೆಯ ಸ್ಟುಡಿಯೊ ರಸ್ತೆ ಮಾರ್ಗದಲ್ಲಿರುವ ರವಿತೇಜ ಪೆಟ್ರೋಲ್ ಬಂಕ್ ಮುಂದೆ ಜಲಮಂಡಳಿಯವರು ಕಾಮಗಾರಿ ನಡೆಸಿದ್ದರು. ಅಗೆದ ರಸ್ತೆಯನ್ನು ಮುಚ್ಚಲು ಹಾಕಿದ್ದ ಡಾಂಬರು ಕೆಲವೇ ದಿನಗಳಲ್ಲಿ ಕುಸಿದಿದೆ. ರಸ್ತೆಯುದ್ದಕ್ಕೂ ಕಾಮಗಾರಿ ನಡೆದಿದ್ದ ಸ್ಥಳದಲ್ಲಿ ಗುಂಡಿಗಳು ಬಿದ್ದಿವೆ.

ಮರಳು ಹೊತ್ತು ಬಂದ ಲಾರಿಯೊಂದು ಗುಂಡಿಯಲ್ಲಿ ಸಿಲುಕಿಕೊಳ್ಳುವಷ್ಟರಮಟ್ಟಿಗೆ ಕಳಪೆ ಕಾಮಗಾರಿ ನಡೆದಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಬಹಳ ಸಮಸ್ಯೆಯಾಗಿದೆ. ದಯವಿಟ್ಟು ಗುಣಮಟ್ಟದ ರಸ್ತೆಯನ್ನು ನಿರ್ಮಿಸಿಕೊಡಿ.

ಮಲ್ಲಿಕಾರ್ಜುನ್, ನಂದಿನಿ ಬಡಾವಣೆ



ಸ್ಟುಡಿಯೊ ರಸ್ತೆಯ ಗುಂಡಿಯಲ್ಲಿ ಲಾರಿಯ ಚಕ್ರಗಳು ಸಿಲುಕಿರುವುದು

ಸಹಕಾರ ನಗರದ ರೈಲ್ವೆ ಸಮಾನಾಂತರ ರಸ್ತೆಯಲ್ಲಿ ಕೊಳಚೆ ನೀರು

ಕೊಳಚೆಗೆ ಕೊನೆ ಯಾವಾಗ?

ಸಹಕಾರ ನಗರದ ರೈಲ್ವೆ ಸಮಾನಾಂತರ ರಸ್ತೆಯಲ್ಲಿ ಸೂಕ್ತವಾದ ಒಳಚರಂಡಿ ಸಂಪರ್ಕ ಇಲ್ಲ. ಇದರಿಂದ ಈ ಪ್ರಮುಖ ರಸ್ತೆಯಲ್ಲೇ ಕೊಳಚೆ ನೀರು ಸದಾ ಹರಿಯುತ್ತಿದ್ದು, ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ.

ರಸ್ತೆಯುದ್ದಕ್ಕೂ ಕೊಳಚೆ ನೀರಿನಲ್ಲೇ ವಾಹನಗಳು ಸಂಚರಿಸುವುದು ಅನಿವಾರ್ಯವಾಗಿದೆ. ಈಗ ಯಾವುದೇ ಚುನಾವಣೆ ಇಲ್ಲದ ಕಾರಣ ಜನಪ್ರತಿನಿಧಿಗಳು ಇತ್ತ ಸುಳಿಯುವುದೇ ಇಲ್ಲ. ಚುನಾವಣೆ ಬಂದಾಗ ಮಾತ್ರ ಶಾಸಕರು ಹಾಗೂ ಇತರ ನಾಯಕರು ಬರುತ್ತಾರೆ.

ಬಸವರಾಜ್ ಅಪ್ಪಣ್ಣವರ, ಸಹಕಾರ ನಗರ

ಸ್ವಚ್ಛತೆ ಇಲ್ಲದ ಮೇಲ್ಸೇತುವೆ

ಹೊರವರ್ತುಲ ರಸ್ತೆಯ ಬಾಬುಸಾಪಾಳ್ಯದ ಮೇಲ್ಸೇತುವೆಯಲ್ಲಿ ಸ್ವಚ್ಛತೆ ಮರೆಯಾಗಿದೆ. ಇಲ್ಲಿ ಕಸ ಗುಡಿಸಿ, ಅದೆಷ್ಟೋ ದಿನಗಳು ಆಗಿವೆ. ಈ ಪ್ರದೇಶವು ರಾತ್ರಿ ಸಮಯದಲ್ಲಿ ಕುಡುಕರ ಅಡ್ಡೆಯಾಗುತ್ತಿದೆ. ಮದ್ಯದ ಬಾಟಲಿಗಳು ಇಲ್ಲಿ ರಾಶಿ ಬಿದ್ದಿವೆ.

ಮೇಲ್ಸೇತುವೆ ಬಳಸಿ ರಸ್ತೆ ದಾಟುವವರ ಅನುಕೂಲಕ್ಕಾಗಿ ವಿದ್ಯುತ್ ದೀಪದ ವ್ಯವಸ್ಥೆಯೂ ಇಲ್ಲ. ಮಹಿಳೆಯರು ಮತ್ತು ಮಕ್ಕಳು ಭಯದಲ್ಲೇ ಕತ್ತಲಿನಲ್ಲಿ ಹೆಜ್ಜೆ ಹಾಕುತ್ತಾರೆ. ಮೇಲ್ಸೇತುವೆಯನ್ನು ಸ್ವಚ್ಛವಾಗಿಡುವುದಕ್ಕೆ ಕ್ರಮಕೈಗೊಳ್ಳಬೇಕು. ಇಲ್ಲಿಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಿದರೆ, ಸಾರ್ವಜನಿಕರಿಗೆ ಬಹಳ ಅನುಕೂಲ.

ಮಂಜುನಾಥ್, ಸ್ಥಳೀಯ ನಿವಾಸಿ

ವಿದ್ಯಮಾನ್ಯ ನಗರದ 5ನೇ ಅಡ್ಡ ರಸ್ತೆಯಲ್ಲಿ ವಾಹನ ದಟ್ಟಣೆ

ಚರಂಡಿಯ ಚಪ್ಪಡಿ ಸರಿಪಡಿಸಿ

ಜಕ್ಕೂರು ಬಡಾವಣೆಯ 19ನೇ ಅಡ್ಡರಸ್ತೆಯಲ್ಲಿ ಚರಂಡಿ ಮೇಲೆ ಮುಚ್ಚಿರುವ ಚಪ್ಪಡಿ ಕಲ್ಲುಗಳು ಹಾಳಾಗಿ ವರ್ಷ ಕಳೆದಿದೆ. ಆದರೆ, ಅದನ್ನು ಸರಿಪಡಿಸುವ ಕೆಲಸಕ್ಕೆ ಅಧಿಕಾರಿಗಳು ಈವರೆಗೆ ಮುಂದಾಗಿಲ್ಲ. ಚಪ್ಪಡಿಗಳು ಹಾಳಾಗಿ ಗುಂಡಿ ನಿರ್ಮಾಣವಾಗಿದ್ದು, ವಾಹನ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ಬಿದ್ದಿದ್ದಾರೆ.

ಈ ಬಗ್ಗೆ ಹಲವು ಸಲ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಚರಂಡಿಯ ಚಪ್ಪಡಿಯನ್ನು ಬದಲಿಸಿ, ಗುಂಡಿಯಿಲ್ಲದ ರಸ್ತೆ ನಿರ್ಮಿಸಿದರೆ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ಸಮಸ್ಯೆ ಇರುವುದಿಲ್ಲ.

ಅಶೋಕ್, ಜಕ್ಕೂರು ಬಡಾವಣೆ

ದೂಳಿನ ರಸ್ತೆ: ಡಾಂಬರು ಹಾಕಿ

ಅಂದ್ರಹಳ್ಳಿಯ ವಿದ್ಯಮಾನ್ಯ ನಗರದ 5ನೇ ಅಡ್ಡ ರಸ್ತೆಯಲ್ಲಿ ಪ್ರತಿದಿನ ನೂರಾರು ವಾಹನಗಳು ಸಂಚರಿಸುತ್ತವೆ. ಇದರಿಂದ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ರಸ್ತೆ ಹದಗೆಟ್ಟಿರುವ ಕಾರಣ ದೂಳಿನ ಸಮಸ್ಯೆಯೂ ಹೆಚ್ಚು.

ವಾಹನಗಳ ಓಡಾಟದಿಂದ ಸ್ಥಳೀಯರಿಗೆ ದೂಳಿನ ಮಜ್ಜನ ತಪ್ಪಿದ್ದಲ್ಲ. ದೂಳಿಗೆ ಹೆದರಿ, ಮನೆಯಿಂದ ಹೊರಬರಲು ಜನ ಹೆದರುತ್ತಾರೆ. ರಸ್ತೆಗೆ ಡಾಂಬರು ಹಾಕಿಸಿದರೆ, ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

ಸುಧಾ, ಸ್ಥಳೀಯ ನಿವಾಸಿ

ರಸ್ತೆ ಅತಿಕ್ರಮಿಸಿದ ಮಾರುಕಟ್ಟೆ

ಕೆ.ಆರ್.ಪುರ ಬಳಿ ಇರುವ ಹಳೆ ಮದ್ರಾಸ್ ರಸ್ತೆಯನ್ನು ಮಾರುಕಟ್ಟೆ ಅತಿಕ್ರಮಿಸಿದೆ. ಸಮೀಪದಲ್ಲೇ ಬಸ್ ಪ್ರಯಾಣಿಕರ ತಂಗುದಾಣವಿದ್ದರೂ ಬಸ್‌ಗಳಿಗೆ ಮೀಸಲಾಗಿರುವ ಜಾಗದಲ್ಲಿ ತಳ್ಳು ಗಾಡಿಗಳು, ಆಟೊಗಳು ಹಾಗೂ ಖಾಸಗಿ ವಾಹನಗಳು ನಿಂತಿರುತ್ತವೆ. ಪಾದಚಾರಿಗಳ ಅನುಕೂಲಕ್ಕೆ ನಿರ್ಮಿಸಿರುವ ಮೇಲ್ಸೇತುವೆಯಲ್ಲೂ ಬೀದಿ ವ್ಯಾಪಾರಿಗಳ ಹಾವಳಿ ಹೆಚ್ಚಾಗಿದೆ.

ಈ ಎಲ್ಲ ಸಮಸ್ಯೆಗಳಿಂದಾಗಿ ಸಾರ್ವಜನಿಕರಿಗೆ ಬಹಳ ಸಮಸ್ಯೆಯಾಗಿದ್ದು, ನಿತ್ಯ ನರಕ ಯಾತನೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿ ಅತಿಕ್ರಮಣವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು. ಈ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

ಕಿರಣ್, ಕೆ.ಆರ್.ಪುರ

ಕೆ.ಆರ್.ಪುರದ ರಾಷ್ಟ್ರೀಯ ಹೆದ್ದಾರಿ ಅತಿಕ್ರಮಿಸಿರುವ ಮಾರುಕಟ್ಟೆ

ನೇಪಾಳದ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣದ ಆರೋಪಿ ಬಂಧನ

ಪರಾರಿಯಾಗಿದ್ದ ರೌಡಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ



ರೌಡಿ ಆವೇಜ್

ಬೆಂಗಳೂರು: ವೈದ್ಯಕೀಯ ಪರೀಕ್ಷೆಗೆ ಕರೆದೊಯ್ದಿದ್ದ ವೇಳೆ ಪೊಲೀಸರನ್ನು ತಳ್ಳಿ ಪರಾರಿಯಾಗಿದ್ದ ರೌಡಿ ಮಹಮ್ಮದ್ ಅವೇಜ್ ಅಲಿಯಾಸ್ ಬಚ್ಚನ್‌ನನ್ನು (25) ಕಾಲಿಗೆ ಗುಂಡು ಹಾರಿಸಿ ಶನಿವಾರ ಸೆರೆ ಹಿಡಿಯಲಾಗಿದೆ.

'ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 31ರ ಬೆಳಿಗ್ಗೆ ನೇಪಾಳದ ಮಹಿಳೆ ಮೇಲೆ ರೌಡಿ ಅವೇಜ್ ಅತ್ಯಾಚಾರ ಎಸಗಿದ್ದ. ಮಹಿಳೆ ಕೂಗಾಟ ಕೇಳಿ ರಕ್ಷಣೆಗೆ ಧಾವಿಸಿದ್ದ ಸ್ಥಳೀಯರು, ಅವೇಜ್‌ನನ್ನು ಹಿಡಿದು ಥಳಿಸಿ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿಗೆ ಒಪ್ಪಿಸಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಹಿಳೆ ಹಾಗೂ ಸ್ಥಳೀಯರ ಹೇಳಿಕೆ ಆಧರಿಸಿ ರೌಡಿ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ನಂತರ ವೈದ್ಯಕೀಯ ಪರೀಕ್ಷೆಗೆಂದು ರೌಡಿಯನ್ನು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಪರೀಕ್ಷೆ ಮುಗಿಸಿ ಠಾಣೆಗೆ ಮರಳಿ ಕರೆತರುವ ವೇಳೆ ಸಿಬ್ಬಂದಿಯನ್ನು ತಳ್ಳಿ ರೌಡಿ ಪರಾರಿಯಾಗಿದ್ದ' ಎಂದೂ ತಿಳಿಸಿದರು.

ವೀರಣ್ಣಪಾಳ್ಯದಲ್ಲಿ ಕಾರ್ಯಾಚರಣೆ: 'ನಗರದ ವೀರಣ್ಣಪಾಳ್ಯದ ನಿರ್ಜನ ಪ್ರದೇಶವೊಂದರಲ್ಲಿ ರೌಡಿ ಅವೇಜ್ ಅಡಗಿದ್ದ ಮಾಹಿತಿ ಲಭ್ಯವಾಗಿತ್ತು. ಸ್ಥಳಕ್ಕೆ ಹೋಗಿದ್ದ ಪೊಲೀಸರ ತಂಡ, ಆತನನ್ನು ಬಂಧಿಸಲು ಮುಂದಾಗಿತ್ತು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕಾನ್‌ಸ್ಟೆಬಲ್ ಅರುಣ್ ಕುಮಾರ್ ಮೇಲೆಯೇ ರೌಡಿ ಚಾಕುವಿನಿಂದ ಇರಿದಿದ್ದ. ರಕ್ಷಣೆಗೆ ಹೋದ ಇನ್‌ಸ್ಪೆಕ್ಟರ್ ಕಿರಣ್‌ಕುಮಾರ್, ರೌಡಿ ಕಾಲಿಗೆ ಗುಂಡು ಹೊಡೆದಿದ್ದರು. ಗುಂಡೇಟಿನಿಂದ ಗಾಯಗೊಂಡಿರುವ ರೌಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕಾನ್‌ಸ್ಟೆಬಲ್ ಅವರೂ ಆಸ್ಪತ್ರೆಯಲ್ಲಿದ್ದಾರೆ' ಎಂದರು.

'ಕೊಲೆ ಯತ್ನ, ಜೀವ ಬೆದರಿಕೆ, ಸುಲಿಗೆ ಸೇರಿದಂತೆ 27 ಪ್ರಕರಣಗಳಲ್ಲಿ ಅವೇಜ್ ಆರೋಪಿಯಾಗಿದ್ದ. ಜೈಲಿಗೂ ಹೋಗಿ ಜಾಮೀನಿನ ಮೇಲೆ ಹೊರಬಂದಿದ್ದ. ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ. ಪದೇ ಪದೇ ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದರಿಂದ ಈತನನ್ನು ಒಂದು ವರ್ಷದವರೆಗೆ ಬೆಂಗಳೂರು ಜಿಲ್ಲೆಯಿಂದ ಗಡಿಪಾರು ಮಾಡಲಾಗಿತ್ತು. ಈ ಅವಧಿಯಲ್ಲೂ ಈತ ಅಪರಾಧ ಕೃತ್ಯ ಎಸಗಿದ್ದಾನೆ' ಎಂದೂ ಹೇಳಿದರು.

ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ಎರಡು ಕಡೆ ದಾಳಿ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದು, ಅವರಿಂದ ₹ 3.35 ಲಕ್ಷ ಜಪ್ತಿ ಮಾಡಿದ್ದಾರೆ.

'ಸಿಸಿಬಿ ಹಾಗೂ ಉಪ್ಪಾರಪೇಟೆ ಠಾಣೆ ಪೊಲೀಸರು ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರಾಜಾಜಿನಗರ ಆರ್‌ಟಿಒ ಕಚೇರಿ ಬಳಿ ನಿಂತು ಬೆಟ್ಟಿಂಗ್ ಹಣ ಕಟ್ಟಿಸಿಕೊಳ್ಳುತ್ತಿದ್ದ ಪ್ರಶಾಂತ್ ಹಾಗೂ ಸಂತೋಷ್ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ತಂಡಗಳ ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ಆರೋಪಿಗಳು ಬೆಟ್ಟಿಂಗ್ ನಡೆಸುತ್ತಿದ್ದರು' ಎಂದೂ ತಿಳಿಸಿದರು.

'ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರನ್ನು ಪೊಲೀಸರು ಸೆರೆ ಹಿಡಿದಿದ್ದಾರೆ' ಎಂದೂ ಹೇಳಿದರು.

ಯಂತ್ರಕ್ಕೆ ತಲೆ ಬಡಿದು ಯುವತಿ ಸಾವು

ಪ್ರಜಾವಾಣಿ ವಾರ್ತೆ

ಸಾಜಿಯಾ ಬಾನು

ಬೆಂಗಳೂರು: ಚಂದ್ರಾ ಲೇಔಟ್ ಠಾಣೆ ವ್ಯಾಪ್ತಿಯ ಪ್ಲಾಸ್ಟಿಕ್ ಸಂಸ್ಕರಣಾ ಕಾರ್ಖಾನೆಯಲ್ಲಿ ಯಂತ್ರಕ್ಕೆ ತಲೆ ಬಡಿದಿದ್ದರಿಂದ ತೀವ್ರ ಗಾಯಗೊಂಡು ಸಾಜಿಯಾ ಬಾನು (28) ಎಂಬುವರು ಮೃತಪಟ್ಟಿದ್ದಾರೆ.

'ಗಂಗೊಂಡನಹಳ್ಳಿ ನಿವಾಸಿ ಸಾಜಿಯಾ, ಕೈಗಾರಿಕಾ ಪ್ರದೇಶದಲ್ಲಿರುವ 'ಜೆಡ್ ಎಸ್' ಪ್ಲಾಸ್ಟಿಕ್ ಸಂಸ್ಕರಣಾ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಸಾವಿಗೆ ಕಾರಣವಾದ ಆರೋಪದಡಿ ಕಾರ್ಖಾನೆ ಮಾಲೀಕ ಜೀಶಂ (31) ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾಜಿಯಾ ಅವರು ಎಂದಿನಂತೆ ಶನಿವಾರ ಕೆಲಸಕ್ಕೆ ಬಂದಿದ್ದರು. ಕಾರ್ಖಾನೆಯ ಯಂತ್ರದ ಬಳಿ ನಿಂತು ಕೆಲಸ ಮಾಡುತ್ತಿದ್ದರು. ಅದೇ ವೇಳೆ ಅವರ ದುಪ್ಪಟ್ಟಾ, ಯಂತ್ರದ ಬೆಲ್ಟ್‌ಗೆ ಸುತ್ತಿಕೊಂಡಿತ್ತು. ಸಾಜಿಯಾ ಅವರು ಯಂತ್ರದ ಮೇಲೆ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಪ್ರಜ್ಞೆ ಕಳೆದುಕೊಂಡಿದ್ದರು.'

'ಸಾಜಿಯಾ ಅವರನ್ನು ಸಮೀಪದ ಗುರುಶ್ರೀ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿಂದ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

'ಕಾರ್ಖಾನೆಯಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಮಾಲೀಕರ ನಿರ್ಲಕ್ಷ್ಯದಿಂದಲೇ ಸಾಜಿಯಾ ಮೃತಪಟ್ಟಿರುವುದಾಗಿ ಅವರ ತಾಯಿ ದೂರು ನೀಡಿದ್ದಾರೆ' ಎಂದೂ ಹೇಳಿದರು.

ಅಪಘಾತ: ಬಿಬಿಎಂಪಿ ಲಾರಿ ಚಾಲಕ ಬಂಧನ

ಬೆಂಗಳೂರು: ಬಾಗಲೂರು ಬಳಿ ಸಂಭವಿಸಿದ್ದ ಅಪಘಾತದಲ್ಲಿ ರಾಮಯ್ಯ (76) ಎಂಬುವರು ಮೃತಪಟ್ಟ ಪ್ರಕರಣ ಸಂಬಂಧ, ಬಿಬಿಎಂಪಿ ಕಸ ಸಾಗಣೆ ಲಾರಿ ಚಾಲಕ ಆಂಜನಪ್ಪ ಅವರನ್ನು ಚಿಕ್ಕಜಾಲ ಸಂಚಾರ ಪೊಲೀಸರು ಬಂಧಿಸಿದ್ದಾರೆ.

'ಸಂಪಿಗೆಹಳ್ಳಿ ನಿವಾಸಿ ರಾಮಯ್ಯ, ಸಂಬಂಧಿ ಯುವತಿಯೊಬ್ಬರಿಗೆ ಸಾತನೂರಿನಲ್ಲಿ ವರನನ್ನು ನೋಡಿಕೊಂಡು ದ್ವಿಚಕ್ರ ವಾಹನದಲ್ಲಿ ಮಾರ್ಚ್ 31ರಂದು ಮಧ್ಯಾಹ್ನ ಮನೆಗೆ ವಾಪಸು ಹೊರಟಿದ್ದರು. ಅವರ ವಾಹನಕ್ಕೆ ಬಿಬಿಎಂಪಿ ಕಸ ಸಾಗಣೆ ಲಾರಿ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡ ರಾಮಯ್ಯ ಮೃತಪಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'ಬಿಬಿಎಂಪಿ ಲಾರಿ ಚಾಲಕನ ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿತ್ತು. ರಾಮಯ್ಯ ಪುತ್ರ ರಾಜಶೇಖರ್ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಅಪಘಾತದ ನಂತರ ಲಾರಿ ಬಿಟ್ಟು ಚಾಲಕ ಪರಾರಿಯಾಗಿದ್ದರು. ಕೆಲವರು ನೀಡಿದ್ದ ಸುಳಿವಿನ ಆಧಾರದಲ್ಲಿ ಆರೋಪಿ ಇದ್ದ ಸ್ಥಳವನ್ನು ಪತ್ತೆ ಮಾಡಿ ಅವರನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

ಯುಗಾದಿ ಉತ್ಸವದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು(ಎಡಚಿತ್ರ), ಕೇರಳ ಕಲಾವಿದರು ಚಂಡೆ ವಾದ್ಯ ವಾದನ ಮೂಲಕ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಮರ್ಪಿಸಿದರು

ಯುಗಾದಿ ಹಬ್ಬದ ಮೆರುಗು ಹೆಚ್ಚಿಸಿದ ಕಾರ್ಯಕ್ರಮ: ಮೈದಾನಕ್ಕೆ ಹರಿದುಬಂದ ಜನಸಾಗರ

ಹಬ್ಬಕ್ಕೆ ಮನರಂಜನೆಯ ರಸದೌತಣ

ಪ್ರಜಾವಾಣಿ ವಾರ್ತೆ

ಕೋಲಾರ: ಯುಗಾದಿ ಪ್ರಯುಕ್ತ ಜಿಲ್ಲಾಡಳಿತವು ಇಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಯುಗಾದಿ ಉತ್ಸವ' ಸಾಂಸ್ಕೃತಿಕ ಕಾರ್ಯಕ್ರಮವು ಹಬ್ಬದ ಮೆರುಗು ಹೆಚ್ಚಿಸಿತು.

ಸಂಜೆ 7ರಿಂದ ಮಧ್ಯ ರಾತ್ರಿ 12ರವರೆಗೆ ನಡೆದ ಯುಗಾದಿ ಉತ್ಸವವು ಜನರಿಗೆ ಮನರಂಜನೆಯ ರಸದೌತಣ ಉಣಬಡಿಸಿತು. ಕೋವಿಡ್ ಹಾಗೂ ಲಾಕ್‌ಡೌನ್ ಕಾರಣಕ್ಕೆ ಕಳೆದ ಎರಡು ವರ್ಷಗಳಲ್ಲಿ ಯುಗಾದಿ ಆಚರಣೆ ಕಳೆಗುಂದಿತ್ತು. ಮತ್ತೊಂದೆಡೆ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲಾ ಸ್ಥಗಿತಗೊಂಡು ಜನರಿಗೆ ಮನರಂಜನೆಯೇ ಇಲ್ಲವಾಗಿತ್ತು.

ಹೀಗಾಗಿ ಜಿಲ್ಲಾಡಳಿತವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜನರ ಮನರಂಜನೆಗಾಗಿ ಏರ್ಪಡಿಸಿದ್ದ ಯುಗಾದಿ ಉತ್ಸವಕ್ಕೆ ಜನರಿಂದ ನಿರೀಕ್ಷೆಗೂ ಮೀರಿ ಮೆಚ್ಚುಗೆ ವ್ಯಕ್ತವಾಯಿತು. ಕಾರ್ಯಕ್ರಮ ನಡೆದ ಜ್ಯೂನಿಯರ್ ಕಾಲೇಜು ಮೈದಾನಕ್ಕೆ ಜನಸಾಗರವೇ ಹರಿದು ಬಂದಿತು.

ಸ್ಥಳೀಯ ಜನಪದ ಕಲಾ ತಂಡಗಳು, ಕಲಾವಿದರ ಜತೆಗೆ ಹೊರ ಜಿಲ್ಲೆ ಮತ್ತು ರಾಜ್ಯಗಳ ಕಲಾವಿದರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕೇರಳ ಕಲಾವಿದರು ವಿಶಿಷ್ಟ ರೀತಿಯಲ್ಲಿ ಚಂಡೆ ವಾದ್ಯ ನುಡಿಸಿ ಪ್ರೇಕ್ಷಕರ ಮನಸೂರೆಗೊಂಡರು. ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ ರಾಜಕುಮಾರ ಚಲನಚಿತ್ರದ ಗೀತೆಯನ್ನು ಚಂಡೆ ವಾದ್ಯ ಮತ್ತು ಕೊಳಲು ವಾದನದ ಮೂಲಕ ಪ್ರಸ್ತುತಪಡಿಸಿದರು. ಪ್ರೇಕ್ಷಕರು ತಮ್ಮ ಮೊಬೈಲ್‌ನಲ್ಲಿ ಟಾರ್ಚ್ ಬೆಳಗಿಸಿ ಅಭಿಮಾನ ಮೆರೆದರು. ಅಭಿಮಾನಿಗಳು ಪುನೀತ್‌ರ ಭಾವಚಿತ್ರವುಳ್ಳ ಬಾವುಟ ಹಾರಿಸಿ ನೆಚ್ಚಿನ ನಟನಿಗೆ ಗೌರವ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ನಟ ಗಣೇಶ್ ಪ್ರೇಕ್ಷಕರತ್ತ ಕೈ ಬೀಸಿದರು

ಹಿನ್ನೆಲೆ ಗಾಯಕ ವಿಜಯ್‌ಪ್ರಕಾಶ್ ಗಾಯನ ಪ್ರಸ್ತುತಪಡಿಸಿದರು

ಪ್ರೇಕ್ಷಕರ ಹರ್ಷೋದ್ಗಾರ: ನಟ ಗಣೇಶ್, ನಿರೂಪಕಿ ಅನುಶ್ರೀ, ಖ್ಯಾತ ಹಿನ್ನೆಲೆ ಗಾಯಕರಾದ ವಿಜಯ್‌ಪ್ರಕಾಶ್, ಶಮಿತಾ ಮಲ್ನಾಡ್ ಅವರು ವೇದಿಕೆಗೆ ಆಗಮಿಸುತ್ತಿದ್ದಂತೆ ಪ್ರೇಕ್ಷಕರ ಹರ್ಷೋದ್ಗಾರ ಮುಗಿಲು ಮುಟ್ಟಿತು. ವಿಜಯ್‌ಪ್ರಕಾಶ್ ಗಾಯನಕ್ಕೆ ಯುವಕ, ಯುವತಿಯರು, ಮಕ್ಕಳು ಕುಣಿದು ಕುಪ್ಪಳಿಸಿದರು.

ನಟ ಗಣೇಶ್ ಮುಂಗಾರು ಮಳೆ ಚಿತ್ರದ ಡೈಲಾಗ್ ಹೇಳಿ ಪ್ರೇಕ್ಷಕರನ್ನು ರಂಜಿಸಿದರು. ನಿರೂಪಕಿ ಅನುಶ್ರೀ ತಮ್ಮ ಚಿನುಕುರುಳಿ ಮಾತಿನಿಂದ ಹಾಸ್ಯ ಚಟಾಕಿ ಹಾರಿಸಿ ಗಮನ ಸೆಳೆದರು. ಸರಿಗಮಪ ಕಾರ್ಯಕ್ರಮದ ಗಾಯಕರು, ಮಜಾ ಟಾಕೀಸ್ ಕಲಾವಿದರು ಪ್ರೇಕ್ಷಕರಿಗೆ ಮನರಂಜನೆ ನೀಡಿದರು. ಕಾರ್ಯಕ್ರಮದ ಅಂತ್ಯದಲ್ಲಿ ಪಟಾಕಿ ಸಿಡಿಸಲಾಯಿತು. ಬಾಣ ಬಿರುಸುಗಳು ಬಾನಂಗಳದಲ್ಲಿ ಬಣ್ಣದ ಚಿತ್ತಾರ ಬಿಡಿಸಿದವು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಮುನಿರತ್ನ, ಸಂಸದ ಎಸ್. ಮುನಿಸ್ವಾಮಿ, ಶಾಸಕ ಕೆ.ಶ್ರೀನಿವಾಸಗೌಡ. ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ನಗರಸಭೆ ಅಧ್ಯಕ್ಷೆ ಶ್ವೇತಾ, ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಓಂಶಕ್ತಿ ಚಲಪತಿ, ಮಾಜಿ ಶಾಸಕ ವರ್ತೂರು ಪ್ರಕಾಶ್, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿ.ಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಯುಕೇಶ್‌ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ದೇವರಾಜ್ ಕಾರ್ಯಕ್ರಮ ವೀಕ್ಷಿಸಿದರು.

ದಾವಣಗೆರೆಯ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ಪತ್ರಿಕಾ ವಿತರಕ ಸಮಾವೇಶ ಸಮಾರಂಭ ಮತ್ತು ಕಾರ್ಯಕಾರಿಣಿ ಸಭೆಯನ್ನು ಸಂಸದ ಜಿ ಎಮ್ ಸಿದ್ದೇಶ್ವರ ಮತ್ತು ಶಾಸಕ ಎಸ್ ಎ ರವೀಂದ್ರನಾಥ ಅವರು ಉದ್ಘಾಟಿಸಿದರು. ರಾಜ್ಯ ಘಟಕದ ಅಧ್ಯಕ್ಷ ಶಂಭುಲಿಂಗ ಕೆ, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ ಹನಗವಾಡಿ —ಪ್ರಜಾವಾಣಿ ಚಿತ್ರ

ಶ್ರೀಶೈಲದಲ್ಲಿ ಗಲಾಟೆ ಯುವಕನಿಗೆ ಶಸ್ತ್ರಚಿಕಿತ್ಸೆ

ರಾಯಚೂರು: ಶ್ರೀಶೈಲದಲ್ಲಿ ಈಚೆಗೆ ನೀರಿಗಾಗಿ ನಡೆದ ಹಲ್ಲೆ ಘಟನೆಯಲ್ಲಿ ಗಾಯಗೊಂಡಿದ್ದ ಬಾಗಲಕೋಟೆ ಜಿಲ್ಲೆಯ ಶ್ರೀಶೈಲ ವಾರಿಮಠ ಅವರಿಗೆ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಶನಿವಾರ ಶಸ್ತ್ರಚಿಕಿತ್ಸೆ ನಡೆದಿದೆ.

'ಶ್ರೀಶೈಲ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಆದರೆ, ಮಾತನಾಡಲು ಬರುವುದಿಲ್ಲ. ಶಸ್ತ್ರಚಿಕಿತ್ಸೆ ಯಶಸ್ವಿ ಆಗಿರುವುದನ್ನು ವೈದ್ಯರು ದೃಢಪಡಿಸಿದ್ದಾರೆ' ಎಂದು ಶ್ರೀಶೈಲ ಅವರ ಸಂಬಂಧಿ ತಿಳಿಸಿದ್ದಾರೆ.

ನಿಧನ ವಾರ್ತೆ

ಎಚ್.ವಿ.ಸೀತಾರಾಂ



ಸೀತಾರಾಂ

ಬೆಂಗಳೂರು: ಕರ್ನಾಟಕ ಪಾನೀಯ ನಿಗಮದ ನಿವೃತ್ತ ಅಧಿಕಾರಿ ಎಚ್.ವಿ. ಸೀತಾರಾಂ (69) ಅವರು ಅನಾರೋಗ್ಯದಿಂದಾಗಿ ಭಾನುವಾರ ನಿಧನರಾದರು.

ತೀರ್ಥಹಳ್ಳಿ ತಾಲ್ಲೂಕಿನ ಹೊದ್ಲ ಗ್ರಾಮದ ಸೀತಾರಾಂ, ಬೆಂಗಳೂರಿನಲ್ಲಿ ನೆಲೆಸಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಹಣಕಾಸು, ಗೃಹ ಖಾತೆ ಉಳಿಸಿಕೊಂಡ ಗೋವಾ ಸಿ.ಎಂ

ಪಣಜಿ (ಪಿಟಿಐ): ಗೋವಾದ ಮುಖ್ಯಮಂತ್ರಿಯಾಗಿ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡಿರುವ ಪ್ರಮೋದ್ ಸಾವಂತ್ ಅವರು ಗೃಹ ಮತ್ತು ಹಣಕಾಸು ಖಾತೆಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ.

ಸಾವಂತ್ ಅವರು ಗೃಹ, ಹಣಕಾಸು, ಸಿಬ್ಬಂದಿ, ಜಾಗೃತದಳ ಮತ್ತು ಅಧಿಕೃತ ಭಾಷಾ ಇಲಾಖೆಗಳನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ. ರೋಹನ್ ಖೌಂಟೆ ಅವರಿಗೆ ಪ್ರವಾಸೋದ್ಯಮ, ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ನೀಡಲಾಗಿದೆ. ಸಿ.ಎಂ ಸ್ಥಾನಕ್ಕಾಗಿ ಲಾಬಿ ಮಾಡಿಯೂ ವಿಫಲರಾಗಿದ್ದ ವಿಶ್ವಜಿತ್ ರಾಣೆ ಅವರಿಗೆ ನಗರಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳು, ಅರಣ್ಯ ಇಲಾಖೆ ಜೊತೆಗೆ ಆರೋಗ್ಯ ಮತ್ತು ಪಟ್ಟಣ ಹಾಗೂ ಯೋಜನಾ ಖಾತೆಯನ್ನು ನೀಡಲಾಗಿದೆ.

ರೈತರ ರಕ್ತ ಕುಡಿಯುತ್ತಿರುವ ಸರ್ಕಾರ: ಸಿದ್ದರಾಮಯ್ಯ ವಾಗ್ದಾಳಿ

‘ಬೆಲೆ ಏರಿಕೆ ಮರೆಮಾಚಲು ಕೋಮುವಾದ’

ಪ್ರಜಾವಾಣಿ ವಾರ್ತೆ

ಗೋಹತ್ಯೆ ಮತ್ತು ಮತಾಂತರ ನಿಷೇಧ ಕಾಯ್ದೆಗೆ ಬೆಂಬಲ ನೀಡಿದ್ದು ಜೆಡಿಎಸ್. ಬೂಟಾಟಿಕೆಯನ್ನು ಜೆಡಿಎಸ್ ಬಿಡಲಿ. ನಾವು ಜಾತ್ಯತೀತಕ್ಕೆ ಬದ್ಧರಾಗಿದ್ದೇವೆ

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಬೆಂಗಳೂರು: ‘ಬೆಲೆ ಏರಿಕೆ, ನಿರುದ್ಯೋಗದಂತಹ ವಿಷಯಗಳನ್ನು ಮುಚ್ಚಿಹಾಕಲು ಕೋಮುವಾದದ ವಿಷ ಬೀಜವನ್ನು ಬಿಜೆಪಿ ಬಿತ್ತುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

‘ನೂರಾರು ವರ್ಷಗಳಿಂದ ಹಲಾಲ್ ಕಟ್ ನಡೆದುಕೊಂಡು ಬಂದಿದೆ. ಅನಗತ್ಯ ವಿಚಾರಗಳಿಂದ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಕೆಲಸ ಮಾಡಬೇಡಿ’ ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ರಕ್ತದಿಂದ ಕೂಡಿರುವ ಮಾಂಸ ಆರೋಗ್ಯಕ್ಕೆ ಒಳ್ಳೆಯದಲ್ಲ ಎನ್ನುವುದು ಮುಸ್ಲಿಮರ ನಂಬಿಕೆ. ಅವರ ನಂಬಿಕೆಯಂತೆ ಅವರಿಗೆ ಬದುಕಲು ಬಿಡಿ. ನಾವೂ ಕೂಡ ಹಲಾಲ್ ಕಟ್ ಮಾಂಸ ಖರೀದಿಸಿ ತಿಂದಿಲ್ವಾ? ನಾವು ಜಾತ್ರೆಗಳಲ್ಲಿ ಮರಿ ಕಡಿಯುವುದಿಲ್ಲವಾ?’ ಎಂದರು.

‘ಜನರಿಗೆ ಮೋಸ, ದ್ರೋಹ ಮಾಡುತ್ತಿರುವ ಬಿಜೆಪಿ, ಸಹಬಾಳ್ವೆ ಮತ್ತು ಸಾಮರಸ್ಯಕ್ಕೆ ಧಕ್ಕೆ ತರುತ್ತಿದೆ. ಇವರಿಗೆ ಮನುಷ್ಯತ್ವ ಇದೆಯಾ? ಕಾನೂನು ಸುವ್ಯವಸ್ಥೆಗೂ ಅಭಿವೃದ್ಧಿಗೂ ಸಂಬಂಧ ಇದೆ. ಶಾಂತಿ ಇಲ್ಲದಿದ್ದರೆ ಹೂಡಿಕೆ ಮೇಲೆ ಪರಿಣಾಮ ಬೀರುತ್ತದೆ. ಉದ್ಯಮಗಳು ಸ್ಥಾಪನೆಯಾಗದಿದ್ದರೆ ನಿರುದ್ಯೋಗ ತಾಂಡವವಾಡುತ್ತದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘50 ಕೆ.ಜಿ. ಚೀಲದ ಡಿಎಪಿ ರಸಗೊಬ್ಬರ ಬೆಲೆಯನ್ನು ₹150 ಹೆಚ್ಚಿಸಲಾಗಿದೆ. ಇದರಿಂದ, ಬೆಲೆ ₹1,350ಕ್ಕೆ ತಲುಪಿದೆ. ದೇಶದಲ್ಲಿ ಪ್ರತಿ ವರ್ಷ 1.20 ಕೋಟಿ ಟನ್ ಡಿಎಪಿ ಬಳಸಲಾಗುತ್ತಿದ್ದು, ಬೆಲೆ ಹೆಚ್ಚಳದ ಮೂಲಕ ₹3,600 ಕೋಟಿ ಮೊತ್ತವನ್ನು ರೈತರಿಂದ ಸುಲಿಗೆ ಮಾಡಲಾಗಿದೆ. ಕೀಟನಾಶಕಗಳ ಮೇಲೆ ಶೇ18 ರಷ್ಟು ಮತ್ತು ಯಂತ್ರೋಪಕರಣಗಳ ಮೇಲೆ ಶೇ 12 ರಷ್ಟು ರಸಗೊಬ್ಬರಗಳ ಮೇಲೆ ಶೇ 5 ರಷ್ಟು ಜಿಎಸ್‌ಟಿ ಹಾಕಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಎಂಟು ವರ್ಷಗಳಲ್ಲಿ ಡೀಸೆಲ್ ದರ ಶೇ 531 ರಷ್ಟು ಮತ್ತು ಪೆಟ್ರೋಲ್ ದರ ಶೇ 203 ರಷ್ಟು ಹೆಚ್ಚಿಸಲಾಗಿದೆ. ಈ ಹೆಚ್ಚಳದಿಂದ ಕೇಂದ್ರ ಸರ್ಕಾರಕ್ಕೆ ಅಬಕಾರಿ ಸುಂಕದಿಂದ ₹26 ಲಕ್ಷ ಕೋಟಿ ಹೆಚ್ಚುವರಿ ಆದಾಯ ದೊರೆತಿದೆ. ಆದರೆ, ಕಾರ್ಪೊರೇಟ್ ತೆರಿಗೆ ಶೇ 35 ರಿಂದ ಶೇ 23ರಷ್ಟು ಕಡಿಮೆ ಮಾಡಲಾಗಿದೆ. ಇದೇ ಮೋದಿ ಸರ್ಕಾರದ ಸಾಧನೆ’ ವ್ಯಂಗ್ಯವಾಡಿದರು.

‘ತೈಲ ಕಂಪನಿಗಳು ಸ್ವಾಯತ್ತತೆ ಹೊಂದಿರುವುದರಿಂದ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ ಮತ್ತು ಅಂತರ-ರಾಷ್ಟ್ರೀಯ ಕಚ್ಚಾ ತೈಲದ ಮೇಲೆ ಬೆಲೆ ಏರಿಕೆ ಅವಲಂಬನೆಯಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಹಾಗಿದ್ದರೆ, ಚುನಾವಣೆ ಸಮಯದಲ್ಲಿ ತೈಲ ಬೆಲೆ ಏಕೆ ಹೆಚ್ಚಿಸಲಿಲ್ಲ. ಆಗ ಮೌನವಹಿಸಿದ್ದು ಏಕೆ’ ಎಂದು ಪ್ರಶ್ನಿಸಿದರು.

‘ಈ ವರ್ಷ ರಾಜ್ಯದಲ್ಲಿ 15 ಲಕ್ಷ ಟನ್ ರಾಗಿ ಬೆಳೆದಿದ್ದರೂ ಬೆಂಬಲ ಬೆಲೆ ಅಡಿ 2.1 ಲಕ್ಷ ಟನ್ ಮಾತ್ರ ಖರೀದಿಸುವುದಾಗಿ ಸರ್ಕಾರ ಹೇಳಿದೆ. ಇಲ್ಲಿಯವರೆಗೆ, 1.9 ಲಕ್ಷ ಟನ್ ಮಾತ್ರ ಖರೀದಿಸಲಾಗಿದೆ. ಇದೊಂದು ರೈತ ಪರ ಸರ್ಕಾರವೇ’ ಎಂದು ಪ್ರಶ್ನಿಸಿದರು.

‘ತೆರಿಗೆ ಹೆಚ್ಚಿಸಿ ಜನರ ಮೇಲೆ ಗದಾಪ್ರಹಾರ’

‘ಕೇಂದ್ರ ಸರ್ಕಾರ ತೆರಿಗೆಗಳನ್ನು ಹೆಚ್ಚಿಸಿ ಜನ ಸಾಮಾನ್ಯರ ಮೇಲೆ ಗದಾಪ್ರಹಾರ ಮಾಡುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಆಕ್ರೋಶ ವ್ಯಕ್ತಪಡಿಸಿದರು.

‘ಬೆಲೆ ಏರಿಕೆಯಿಂದ ಎಲ್ಲ ವರ್ಗಗಳ ಜನರು ತತ್ತರಿಸಿದ್ದಾರೆ. ಬಿಜೆಪಿ ಸರ್ಕಾರ ಜನರ ಜೀವನ ನರಕವಾಗಿಸಿದೆ. ಅಚ್ಛೇ ದಿನಗಳ ಹೆಸರಿನಲ್ಲಿ ರಸಗೊಬ್ಬರ, ಪೆಟ್ರೋಲ್, ಡೀಸೆಲ್, ಸಿಮೆಂಟ್ ಸೇರಿದಂತೆ ಎಲ್ಲ ವಸ್ತುಗಳ ಬೆಲೆ ಹೆಚ್ಚಿಸಲಾಗಿದೆ’ ಎಂದು ತಿಳಿಸಿದರು.

‘ಕಬ್ಬಿಣದ ಬೆಲೆ ಕಳೆದ ಒಂದು ವರ್ಷದಲ್ಲಿ ಶೇ 30ರಷ್ಟು, ಸಿಮೆಂಟ್ ಬೆಲೆ ಶೇ 22 ರಷ್ಟು ಹೆಚ್ಚಾಗಿದೆ. ಕೃಷಿ ಯಂತ್ರೋಪಕರಣಗಳ ಬೆಲೆಯೂ ಹೆಚ್ಚಳವಾಗಿದೆ. ಬೆಲೆ ಇಳಿಕೆಯಾಗುವವರೆಗೂ, ಈ ಸರ್ಕಾರವನ್ನು ಕಿತ್ತೊಗೆಯುವವರೆಗೆ ಕಾಂಗ್ರೆಸ್ ಹೋರಾಟ ನಡೆಸಲಿದೆ’ ಎಂದು ಹೇಳಿದರು.

‘ಬೆಲೆ ಏರಿಕೆ ಬಿಜೆಪಿ ಮೌನವೇಕೆ’

ಪ್ರಜಾವಾಣಿ ವಾರ್ತೆ

ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ‘ಬೆಲೆ ಏರಿಕೆಗೆ ಸಂಬಂಧಿಸಿ ಹಿಂದೆ ಡಾ.ಮನಮೋಹನ್ ಸಿಂಗ್ ಅವರನ್ನು ಮೌನಿ ಎಂದು ಟೀಕಿಸಿದ್ದ ಬಿಜೆಪಿಯವರು ಈಗ ಸತತ ಬೆಲೆ ಏರುತ್ತಿದ್ದರೂ ಏಕೆ ಮೌನವಾಗಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳ ದರದಲ್ಲಿ ನಿರಂತರ ಏರಿಕೆ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ದರ 13 ದಿನಗಳಲ್ಲಿ ₹ 8 ರಷ್ಟು ಏರಿದೆ. ಜನರು ತತ್ತರಿಸಿ ಹೋಗಿದ್ದಾರೆ. ಬಿಜೆಪಿ ಹಾಗೂ ಕೇಂದ್ರ ಸರ್ಕಾರ ಮೌನವಾಗಿದೆ. ರಾಜ್ಯದಲ್ಲಿನ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯೂ ಮೌನವಾಗಿದ್ದಾರೆ’ ಎಂದು ಟೀಕಿಸಿದ್ದಾರೆ.

‘2018 ರಲ್ಲಿ ನಾನು ಸಿ.ಎಂ ಆಗಿದ್ದಾಗ ರೈತರ ಸಾಲಮನ್ನಾದ ಹೊರೆ ಭರಿಸಲು ಪ್ರತಿ ಲೀ ಪೆಟ್ರೋಲ್‌ಗೆ ₹ 1.12 ಮತ್ತು ಡೀಸೆಲ್‌ಗೆ ₹ 1.14 ಹೆಚ್ಚಿಸಿದ್ದೆ. ಆಗ ಬಿಜೆಪಿ ನಾಯಕರು ಗಲಾಟೆ ಎಬ್ಬಿಸಿದ್ದರು. ಈಗ ಬೆಲೆ ಏರಿಕೆಯಿಂದ ಜನರ ದಿಕ್ಕು ತಪ್ಪಿಸಲು ಹಿಜಾಬ್, ಕೇಸರಿ ಶಾಲು, ಮುಸ್ಲಿಂ ವ್ಯಾಪಾರಿಗಳಿಗೆ ನಿಷೇಧ, ಹಲಾಲ್ ಕಟ್ ವಿಚಾರ ಮುನ್ನೆಲೆಗೆ ತರುತ್ತಿದ್ದಾರೆ’ ಎಂದರು.

ಮುಂದಿನ ಚುನಾವಣೆಯಲ್ಲಿ 150 ಸ್ಥಾನಗಳಿಸುವ ಕನಸು ಬೆಲೆ ಏರಿಕೆಯಿಂದ ಮಣ್ಣು ಪಾಲಾಗುತ್ತದೆ ಎಂಬ ಭಯ ಬಿಜೆಪಿಯನ್ನು ಆವರಿಸಿದೆ. ಅದಕ್ಕಾಗಿ ಜನರ ಗಮನ ಸೂಕ್ಷ್ಮ ವಿಚಾರಗಳತ್ತ ಸೆಳೆಯಲು ಪ್ರಯತ್ನ ಮಾಡುತ್ತಿದೆ. ಹಿಂದುತ್ವದ ವಿನಾಶಕ್ಕಾಗಿ ಹಿಂಸಾಚಾರದ ಶಂಖ ಊದಲಾಗಿದೆ ಎಂದು ಹೇಳಿದ್ದಾರೆ.

ಹಿಂದೆ ಖಾಲಿ ಸಿಲಿಂಡರುಗಳನ್ನು ಹೊತ್ತು ಬೀದಿಯಲ್ಲಿ ಪ್ರತಿಭಟನೆ ನಡೆಸಿದವರು ಈಗ ಎಲ್ಲಿ ಹೋಗಿದ್ದಾರೆ? ಈಗಲೂ ಬೀದಿಗೆ ಬಂದು ಪ್ರತಿಭಟನೆ ನಡೆಸಲಿ ಎಂದು ಸವಾಲು ಹಾಕಿದ್ದಾರೆ.

‘ಬೆಲೆ ಏರಿಕೆಗೆ ಹಿಂದಿನ ಯುಪಿಎ ಸರ್ಕಾರ ಕಾರಣ ಎಂದು ಬಿಜೆಪಿ ಸಂಸದ ಡಿ.ವಿ. ಸದಾನಂದ ಗೌಡ ಹೇಳಿದ್ದಾರೆ. ಎಂಟು ವರ್ಷದ ಹಿಂದಿನ ತಪ್ಪನ್ನು ಇನ್ನೂ ಏಕೆ ಸರಿಪಡಿಸಿಲ್ಲ. ಬಿಜೆಪಿ ಎಂದರೆ ಭಾರತೀಯ ಜನತಾ ಪಕ್ಷವಲ್ಲ, ಬಡವರ ರಕ್ತ ಹೀರಿ ಸಿರಿವಂತರ ಖಜಾನೆ ಭರಿಸುವ ಬಲ್ಲಿದ ಜನರ ಪಕ್ಷ’ ಎಂದರು.

ರಾಜ್ಯ ವಿಧಾನಸಭೆ ಚುನಾವಣೆ: ಬೂತ್ ಮಟ್ಟದಲ್ಲಿ ತಾಲೀಮು

ಶಾ ಭೇಟಿ ಬೆನ್ನಲೇ ಬಿರುಸಿನ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನು ಒಂದು ವರ್ಷ ಬಾಕಿ ಇರುವಾಗಲೇ ಗೃಹ ಸಚಿವ ಅಮಿತ್ ಶಾ ಅವರ ಇತ್ತೀಚಿನ ಭೇಟಿ ಬಿಜೆಪಿಯಲ್ಲಿ ಉತ್ಸಾಹ ಮೂಡಿಸಿದ್ದು, ಇದಕ್ಕೆ ಪೂರಕವಾಗಿ ಪಕ್ಷದ ಬೂತ್ ಮಟ್ಟದಿಂದ ವಿವಿಧ ಹಂತಗಳಲ್ಲಿ ಚುನಾವಣೆಯ ತಾಲೀಮು ಭರ್ಜರಿಯಾಗಿ ನಡೆದಿದೆ.

ಚುನಾವಣೆಯಲ್ಲಿ 150 ಪ್ಲಸ್ ಸ್ಥಾನಗಳನ್ನು ಗೆದ್ದು ಮತ್ತೊಮ್ಮೆ ಅಧಿಕಾರ ಹಿಡಿಯುವ ಬಗ್ಗೆ ಅಮಿತ್ ಶಾ ಕೆಲವು ಸಲಹೆ ಸೂಚನೆಗಳನ್ನು ನೀಡಿದ್ದು, ಅದಕ್ಕೆ ತಕ್ಕಂತೆ ಕಾರ್ಯಯೋಜನೆ ನಕಾಶೆಯನ್ನೂ ರೂಪಿಸುವಂತೆಯೂ ರಾಜ್ಯ ನಾಯಕರಿಗೂ ಸಲಹೆ ನೀಡಿದ್ದಾರೆ.

ಇದರ ಮುಂದಿನ ಹಂತದ ಯೋಜನೆಗಳ ಬಗ್ಗೆ ಇದೇ ತಿಂಗಳ 16 ಮತ್ತು 17 ರಂದು ವಿಜಯನಗರದಲ್ಲಿ ರಾಜ್ಯ ಕಾರ್ಯಕಾರಿಣಿ ನಡೆಯಲಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಎ.17 ರಂದು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಚುನಾವಣೆ ಹಂತದವರೆಗೆ ಯಾವ ರೀತಿಯ ಕಾರ್ಯತಂತ್ರಗಳನ್ನು ಅನುಸರಿಸಬೇಕು ಎಂಬ ಚರ್ಚೆ ನಡೆಯಲಿದೆ. ಸಂಘಟನಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಪಕ್ಷವನ್ನು ಬಲಿಷ್ಠಗೊಳಿಸುವ ಸಂಬಂಧ ಮಾರ್ಗದರ್ಶನ ಸಿಗಲಿದೆ.

ಇದಲ್ಲದೇ ಇದೇ 13 ರಿಂದ 10 ದಿನಗಳ ಕಾಲ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಹಿರಿಯ ನಾಯಕರಾದ ಬಿ.ಎಸ್.ಯಡಿಯೂರಪ್ಪ ಮತ್ತು ಜಗದೀಶ ಶೆಟ್ಟರ್ ಅವರನ್ನು ಒಳಗೊಂಡ ಮೂರು ತಂಡಗಳು ರಾಜ್ಯದಲ್ಲಿ ಪ್ರವಾಸ ನಡೆಸಲಿವೆ. ಈ ತಂಡಗಳು ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಕಾರ್ಯಕರ್ತರ ಸಭೆ, ಪಕ್ಷದ ಜಿಲ್ಲಾ ಪ್ರಮುಖರ ಸಭೆ ಮತ್ತು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈ ಮೂಲಕ ಕಾರ್ಯಕರ್ತರನ್ನು ಬೇರು ಮಟ್ಟದಲ್ಲಿ ಚುನಾವಣೆಗೆ ಅಣಿಗೊಳಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಿಜೆಪಿಯ ಚುನಾವಣೆ ತಯಾರಿ ಹೆಜ್ಜೆಗಳು

ಅಮಿತ್ ಶಾ ಅವರ ಸೂಚನೆಯ ಮೇರೆಗೆ ಕೆಳಹಂತದಲ್ಲಿ ಚುನಾವಣೆಗೆ ಈಗಿನಿಂದಲೇ ಸಜ್ಜುಗೊಳಿಸುವುದರ ಜತೆಗೆ ‘ಸೋಷಿಯಲ್ ಎಂಜಿನಿಯರಿಂಗ್’ಗೆ ಕೂಡ ಒತ್ತು ನೀಡಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆಳಹಂತದಲ್ಲಿ ತಯಾರಿ ಜೊತೆಗೆ ವಿವಿಧ ಜಿಲ್ಲೆಗಳಲ್ಲಿ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ನಮ್ಮ ಪಕ್ಷಕ್ಕಿರುವ ಕೊರತೆ ಏನು ಎಂಬುದನ್ನು ಪತ್ತೆ ಮಾಡಿ ಅದನ್ನು ಸರಿಪಡಿಸುವುದಕ್ಕೆ ಆದ್ಯತೆ ನೀಡುತ್ತೇವೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲ ಕ್ಷೇತ್ರಗಳನ್ನು ಗೆದ್ದರೂ ಭದ್ರಾವತಿ ಗೆಲ್ಲಲು ಆಗಿಲ್ಲ. ಸಂಸತ್ತಿನ ಚುನಾವಣೆ ನಡೆದಾಗ ಅಲ್ಲಿ ನಮ್ಮ ಪಕ್ಷಕ್ಕೆ ಲೀಡ್ ಬರುತ್ತದೆ. ಈ ರೀತಿ ಸಾಕಷ್ಟು ಕ್ಷೇತ್ರಗಳಿದ್ದು, ಅವುಗಳನ್ನು ಪಟ್ಟಿ ಮಾಡಿ, ಕೆಲಸ ಮಾಡಲು ಒತ್ತು ನೀಡಲಾಗುವುದು’ ಎಂದು ಅವರು ಹೇಳಿದರು.

ಮುಂದಿನ ಒಂದು ವರ್ಷಗಳ ಕಾಲ ಅಮಿತ್ ಶಾ ಮತ್ತು ನಡ್ಡಾ ಚುನಾವಣೆಗೆ ಸಂಬಂಧಿಸಿದಂತೆ ಸಂಪೂರ್ಣ ನಿಗಾ ವಹಿಸಲಿದ್ದಾರೆ ಎಂದರು.

ಲಸಿಕಾ ಅಭಿಯಾನ: ‘ಕೊವೊವ್ಯಾಕ್ಸ್’ ಸೇರ್ಪಡೆಗೆ ಶಿಫಾರಸು

ನವದೆಹಲಿ: 12 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರಿಗಾಗಿ ಹಮ್ಮಿಕೊಂಡಿರುವ ರಾಷ್ಟ್ರೀಯ ಲಸಿಕಾ ಅಭಿಯಾನದಲ್ಲಿ ಸೀರಂ ಸಂಸ್ಥೆಯ ಕೊವೊವ್ಯಾಕ್ಸ್ ಲಸಿಕೆಯನ್ನು ಸೇರ್ಪಡೆಗೊಳಿಸಲು ಕೋವಿಡ್‌–19 ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ (ಎನ್‌ಟಿಎಜಿಐ) ಶಿಫಾರಸು ಮಾಡಿದೆ ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ.

ಕೊವೊವ್ಯಾಕ್ಸ್ ಲಸಿಕೆಯನ್ನು ತುರ್ತು ಸಂದರ್ಭಗಳಲ್ಲಿ ವಯಸ್ಕರಿಗೆ ನೀಡಲು ಕಳೆದ ಡಿಸೆಂಬರ್ 28 ರಂದು ಹಾಗೂ 12ರಿಂದ 17 ವಯಸ್ಸಿನವರಿಗೆ ನೀಡಲು ಮಾರ್ಚ್ 9ರಂದು ಭಾರತೀಯ ಔಷಧ ನಿಯಂತ್ರಕರು ಷರತ್ತುಬದ್ಧ ಅನುಮೋದನೆ ನೀಡಿದ್ದರು.

ಕೊವೊವ್ಯಾಕ್ಸ್ ಲಸಿಕೆಯನ್ನು ರಾಷ್ಟ್ರೀಯ ಲಸಿಕಾ ಅಭಿಯಾನದಲ್ಲಿ ಸೇರ್ಪಡೆಗೊಳಿಸಬೇಕೆಂದು ಕೋರಿ ಸೀರಂ ಸಂಸ್ಥೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿತ್ತು.

ವಾಲ್ಮೀಕಿ ಬೇಡ ಸಮಾಜದವರಿಂದ ಪ್ರಾಣಿ, ಪಕ್ಷಿಗಳ ಬೇಟೆ

ಲಾಂಗ್, ಕತ್ತಿ ಹಿಡಿದು ಮೆರವಣಿಗೆ

ಪ್ರಜಾವಾಣಿ ವಾರ್ತೆ

ವಾಲ್ಮೀಕಿ ಬೇಡ ನಾಯಕರು ಭಾನುವಾರ ಹೊಸಪೇಟೆಯಲ್ಲಿ ಬಂದೂಕು, ಲಾಂಗ್ ಹಾಗೂ ಬೇಟೆಯಾಡಿದ ಪ್ರಾಣಿ, ಪಕ್ಷಿಗಳೊಂದಿಗೆ ಮೆರವಣಿಗೆ ಮಾಡಿದರು

ಹೊಸಪೇಟೆ (ವಿಜಯನಗರ): ಯುಗಾದಿ ಪ್ರಯುಕ್ತ ಇಲ್ಲಿನ ಏಳುಕೇರಿ ವಾಲ್ಮೀಕಿ ಬೇಡ ನಾಯಕ ಸಮುದಾಯದವರು ಬಂದೂಕು, ಕತ್ತಿ, ಲಾಂಗ್ ಹಿಡಿದುಕೊಂಡು ಅವರು ಬೇಟೆಯಾಡಿದ ಪ್ರಾಣಿ, ಪಕ್ಷಿಗಳೊಂದಿಗೆ ಭಾನುವಾರ ನಗರದಲ್ಲಿ ಮೆರವಣಿಗೆ ಮಾಡಿದರು.

ಯುಗಾದಿ ಮಾರನೇ ದಿನ ಬೇಟೆಯಾಡುವ ಸಂಪ್ರದಾಯ ವಾಲ್ಮೀಕಿ ನಾಯಕರಲ್ಲಿದೆ. ಬೇಟೆಯಾಡಿದ ಪ್ರಾಣಿ, ಪಕ್ಷಿಗಳನ್ನು ಮೆರವಣಿಗೆ ಮಾಡಿ, ಆಯುಧಗಳಿಗೆ ಚಿತ್ರಕೇರಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಾರೆ. ಅರಣ್ಯ ಇಲಾಖೆಯು ಅರಣ್ಯದಲ್ಲಿ ಬೇಟೆಯಾಡುವುದನ್ನು ಹಿಂದೆಯೇ ನಿರ್ಬಂಧಿಸಿದೆ. ಆದರೂ, ಭಾನುವಾರ ಇಲ್ಲಿನ ಚಿತ್ರಕೇರಿಯಲ್ಲಿ, ಬೇಟೆಯಾಡಿದ ಮೊಲ, ಕೌಜುಗ ಸೇರಿದಂತೆ ಇತರೆ ಪ್ರಾಣಿ, ಪಕ್ಷಿಗಳನ್ನು ಹಿಡಿದಿದ್ದರು. ಗಾಳಿಯಲ್ಲಿ ಗುಂಡು ಹಾರಿಸಿದರು. ಇದರಲ್ಲಿ ಕತ್ತಿ, ಲಾಂಗ್ ಹಿಡಿದು ಮಕ್ಕಳೊಂದಿಗೆ ಸಮುದಾಯದ ಹಲವರು ಭಾಗವಹಿಸಿದ್ದರು.

‘ಈ ವಿಷಯ ಈಗಷ್ಟೇ ನನ್ನ ಗಮನಕ್ಕೆ ಬಂದಿದೆ. ಸಿಬ್ಬಂದಿ ಕಳುಹಿಸಿ ಪರಿಶೀಲಿಸುವೆ’ ಎಂದು ವಲಯ ಅರಣ್ಯ ಅಧಿಕಾರಿ ವಿನಯ್ ಕೆ.ಸಿ. ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು. ‘ಸಾರ್ವಜನಿಕ ಸ್ಥಳದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿರುವುದಕ್ಕೆ ಸಂಬಂಧಿಸಿದಂತೆ ಉಕ್ಕಡಕೇರಿಯ ಕೆ. ಹನುಮೇಶ್ (37) ಹಾಗೂ ಚಿತ್ರಕೇರಿಯ ಕಿಚಡಿ ಯಮನೂರಪ್ಪ (29) ವಿರುದ್ಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪರಿಷತ್ ಚುನಾವಣೆ: ಗರಿಗೆದರಿದ ರಾಜಕಾರಣ

ಒಂದನೇ ಪುಟದಿಂದ

ಅಮಿತ್ ಶಾ ಸೇರಿದಂತೆ ಬಿಜೆಪಿಯ ವರಿಷ್ಠರು ಸೇರ್ಪಡೆಗೆ ಸಮ್ಮತಿ ಸೂಚಿಸಿದ್ದಾರೆ. ಆ ಬಳಿಕ ಹೊರಟ್ಟಿ ಅವರೇ ಬಿಜೆಪಿ ಸೇರ್ಪಡೆಯನ್ನು ಬಹಿರಂಗಪಡಿಸಿದ್ದಾರೆ.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ ಸೇರಿದಂತೆ ಹಲವರು ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಟಿಕೆಟ್‌ಗಾಗಿ ಪೈಪೋಟಿಯಲ್ಲಿದ್ದರು. ಏಳು ಬಾರಿ ಸತತವಾಗಿ ಈ ಕ್ಷೇತ್ರದಿಂದ ಆಯ್ಕೆಯಾಗಿರುವ ಬಸವರಾಜ ಹೊರಟ್ಟಿ ಅವರನ್ನು ಪಕ್ಷಕ್ಕೆ ಸೆಳೆದುಕೊಂಡು ಟಿಕೆಟ್ ನೀಡುವ ತೀರ್ಮಾನವನ್ನು ಬಿಜೆಪಿ ವರಿಷ್ಠರು ಮಾಡಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಎರಡು ಕ್ಷೇತ್ರ ಬಾಕಿ: ಕಾಂಗ್ರೆಸ್ ದಕ್ಷಿಣ ಪದವೀಧರ ಕ್ಷೇತ್ರ ಮತ್ತು ಪಶ್ಚಿಮ ಶಿಕ್ಷಕರ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಉಳಿದ ಎರಡು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಬಾಕಿ ಇದೆ.

ದಕ್ಷಿಣ ಪದವೀಧರ ಕ್ಷೇತ್ರಕ್ಕೆ ಪರಿಷತ್‌ನ ಮಾಜಿ ಸದಸ್ಯ ಮಧು ಜಿ. ಮಾದೇಗೌಡ ಹಾಗೂ ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಬಸವರಾಜ ಗುರಿಕಾರ ಅವರಿಗೆ ಟಿಕೆಟ್ ಘೋಷಿಸಲಾಗಿದೆ. ವಾಯವ್ಯ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗೆ ಹಲವು ಸುತ್ತಿನ ಸಭೆ ನಡೆಸಿರುವ ಕೆಪಿಸಿಸಿ ಪ್ರಮುಖರು, ಸಂಭವನೀಯರ ಪಟ್ಟಿಯನ್ನು ಎಐಸಿಸಿಗೆ ಕಳುಹಿಸಿದ್ದಾರೆ.

ಜೆಡಿಎಸ್ ದಕ್ಷಿಣ ಪದವೀಧರ ಕ್ಷೇತ್ರದ ಹಾಲಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಬದಲಾಗಿ ಎಚ್. ಕೆ. ರಾಮು ಅವರಿಗೆ ಟಿಕೆಟ್ ಘೋಷಿಸಿದೆ. ಉಳಿದ ಮೂರು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಇನ್ನೂ ಅಂತಿಮಗೊಂಡಿಲ್ಲ.

ಅಲ್ಲದೆ, ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಆಯ್ಕೆ ಆಗಿರುವ ಆರ್.ಬಿ.ತಿಮ್ಮಾಪೂರ, ಅಲ್ಲಂ ವೀರಭದ್ರಪ್ಪ, ಎಸ್.ವೀಣಾ ಅಚ್ಚಯ್ಯ, ಕೆ.ವಿ.ನಾರಾಯಣಸ್ವಾಮಿ, ಲೆಹರ್ ಸಿಂಗ್ ಸಿರೋಯಾ, ಎಚ್.ಎಂ.ರಮೇಶ್ ಗೌಡ ಮತ್ತು ಲಕ್ಷ್ಮಣ ಸವದಿ ಅವರ ಅವಧಿ ಜೂನ್ 14 ಕ್ಕೆ ಮುಗಿಯಲಿದೆ.

‘ಸೋಲುವ ಭೀತಿಯಿಂದ ಹೊರಟ್ಟಿ ತಂತ್ರ’

ಹುಬ್ಬಳ್ಳಿ: ಮೇಲ್ಮನೆಗೆ ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಸೋಲುವ ಭೀತಿ ಇರುವುದರಿಂದ ಬಸವರಾಜ ಹೊರಟ್ಟಿ ಅವರು ನಮ್ಮ ಪಕ್ಷ ಸೇರುವ ತಂತ್ರ ಮಾಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಮೋಹನ ಲಿಂಬಿಕಾಯಿ ಟೀಕಿಸಿದ್ದಾರೆ.

ಚುನಾವಣೆಗೆ ಮೂರು ತಿಂಗಳಿನಿಂದ ಪ್ರಚಾರ ಮಾಡುತ್ತಿರುವ ಲಿಂಬಿಕಾಯಿ ಅವರು ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಕಾನೂನು ಸಲಹೆಗಾರರಾಗಿದ್ದರು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಚುನಾವಣೆಗೆ ನಿಮ್ಮ ಹೆಸರು ಅಂತಿಮಗೊಳಿಸಿ ಹೈಕಮಾಂಡ್‌ಗೆ ಕಳುಹಿಸಲಾಗಿದೆ ಎಂದು ಜಗದೀಶ ಶೆಟ್ಟರ್ ಹಾಗೂ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಆದ್ದರಿಂದ ಪ್ರಚಾರ ನಡೆಸುತ್ತಿದ್ದೇನೆ’ ಎಂದರು.

‘ಹೊರಟ್ಟಿ ಅವರನ್ನು ಯಾರೂ ಬಿಜೆಪಿಗೆ ಕರೆದಿಲ್ಲ. ಅವರು ಬಿಜೆಪಿಗೆ ಬರುತ್ತಿದ್ದಾರೆ ಎಂದು ನಮ್ಮ ಪಕ್ಷದ ನಾಯಕರು ಹೇಳಬೇಕು. ಆದರೆ, ಹೊರಟ್ಟಿ ಅವರೇ ಬಿಜೆಪಿಗೆ ಹೋಗುತ್ತಿದ್ದೇನೆ ಎನ್ನುತ್ತಿದ್ದಾರೆ. ಅವರನ್ನು ನಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವ ಬಗ್ಗೆ ಮುಖ್ಯಮಂತ್ರಿ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಸೇರಿದಂತೆ ಯಾರಾದರೂ ಮಾತನಾಡಿದ್ದಾರೆಯೇ’ ಎಂದು ಪ್ರಶ್ನಿಸಿದರು.

ಟೋಲ್ ವಸೂಲಿ: ನೈಸ್ ವಿರುದ್ಧ ಕ್ರಮಕ್ಕೆ ದೇವೇಗೌಡ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರಿಯಾದ ರಸ್ತೆಯನ್ನೇ ನಿರ್ಮಿಸದೇ ಜನರಿಂದ ಬೇಕಾಬಿಟ್ಟಿ ಟೋಲ್ ವಸೂಲಿ ಮಾಡುತ್ತಿರುವ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಹೋರಾಟ ಆರಂಭಿಸುತ್ತೇನೆ’ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಟೋಲ್ ದರ ಹೆಚ್ಚಿಸಿದೆ. ಸರ್ಕಾರದ ಎಲ್ಲ ನಿಯಮಗಳು ಮತ್ತು ಒಪ್ಪಂದದ ಷರತ್ತು ಉಲ್ಲಂಘಿಸಿ ನೈಸ್ ಕಂಪನಿ ಟೋಲ್ ಸಂಗ್ರಹಿಸುತ್ತಿದೆ. ಇದರ ವಿರುದ್ಧ ಕ್ರಮ ಜರುಗಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಚಿವರಿಗೆ ಪತ್ರ ಬರೆದಿದ್ದೇನೆ’ ಎಂದು ತಿಳಿಸಿದರು.

ನೈಸ್ ಸಂಸ್ಥೆಯ ಅಕ್ರಮಗಳ ಕುರಿತು ಮೇಲ್ಮನೆಯಲ್ಲಿ ಚರ್ಚೆ ನಡೆದಿತ್ತು. ಆದರೆ, ಸರ್ಕಾರದಿಂದ ಸ್ಪಷ್ಟ ಉತ್ತರ ಬಂದಿಲ್ಲ. ತುರ್ತಾಗಿ ಕ್ರಮಜರುಗಿಸಲು ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ. ಮುಖ್ಯಮಂತ್ರಿಯವರಿಗೆ ಸಮಯ ಇಲ್ಲದೇ ಇರಬಹುದು. ಸಚಿವರಿಗಾದರೂ ಆ ಜವಾಬ್ದಾರಿ ವಹಿಸಲಿ ಎಂದು ಒತ್ತಾಯಿಸಿದರು.

ಸಮಿತಿ ಬದಲಾವಣೆಗೆ ಅಸಮಾಧಾನ: ‘ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ನಲ್ಲಿನ ಲೋಪಗಳ ಕುರಿತು ಪರಿಶೀಲನೆಗೆ ನೇಮಿಸಿದ್ದ ಸದನ ಸಮಿತಿಯಲ್ಲಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಇದ್ದರು. ನೈಸ್ ಕಂಪನಿ ತಪ್ಪು ಮಾಡಿದೆ ಎಂದು ಅವರು ಹೇಳಿದ್ದರು. ಈಗ ಮಾಧುಸ್ವಾಮಿ ಅವರನ್ನೇ ಸಮಿತಿಯಿಂದ ಕೈಬಿಡಲಾಗಿದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಸ್ತೆ ನಿರ್ಮಿಸದೇ ಟೋಲ್ ಸಂಗ್ರಹಿಸಲಾಗುತ್ತಿದೆ ಎಂದು ಸದನ ಸಮಿತಿ ವರದಿ ತಿಳಿಸಿದೆ. ರಸ್ತೆ ನಿರ್ಮಾಣ ಪೂರ್ಣಗೊಳಿಸಿಲ್ಲ. ಉಪನಗರಗಳ ನಿರ್ಮಾಣವಾಗಿಲ್ಲ. ಒಪ್ಪಂದದ ಯಾವುದೇ ಷರತ್ತನ್ನೂ ಕಂಪನಿ ಪಾಲಿಸುತ್ತಿಲ್ಲ. ನಿತ್ಯವೂ ₹ 2 ಕೋಟಿಯಿಂದ ₹ 3 ಕೋಟಿ ಟೋಲ್ ಸಂಗ್ರಹ ಮಾಡಲಾಗುತ್ತಿದೆ. 2016 ರಿಂದ ಅಕ್ರಮವಾಗಿ ಟೋಲ್ ಸಂಗ್ರಹಿಸುವುದು ನಡೆಯುತ್ತಿದೆ ಎಂದರು.

ಕೊಮ್ಮಘಟ್ಟದ ಬಳಿ ಬಿಎಂಐಸಿ ರಸ್ತೆ ನಿರ್ಮಾಣಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನೀಡಿದ್ದ ಜಮೀನನ್ನು ನೈಸ್ ಕಂಪನಿ ಮೆಟ್ರೊ ರೈಲು ನಿಗಮಕ್ಕೆ ₹ 14 ಕೋಟಿಗೆ ಮಾರಾಟ ಮಾಡಿದೆ. ಇನ್ನೂ ₹ 100 ಕೋಟಿ ಮೌಲ್ಯದ ಜಮೀನು ಮಾರಲು ಮುಂದಾಗಿದೆ. ಕೊಮ್ಮಘಟ್ಟ ಬಳಿಯ 41 ಎಕರೆ ಜಮೀನಿನ ಕ್ರಯಪತ್ರ ರದ್ದತಿಗೆ ಮುಖ್ಯಮಂತ್ರಿಗೆ ಪತ್ರ ಬರೆಯಲಾಗಿದೆ ಎಂದರು.

‘ಇದು ನನ್ನದೇ ಕನಸಿನ ಯೋಜನೆಯಾಗಿತ್ತು. ಒಳ್ಳೆಯ ಉದ್ದೇಶದಿಂದ ತಂದಿದ್ದೆ. ಆದರೆ, ನೈಸ್ ಕಂಪನಿ ರೈತರನ್ನು ಸಂಕಷ್ಟಕ್ಕೆ ದೂಡಿತು. ಎಚ್‌.ಡಿ.ಕುಮಾರಸ್ವಾಮಿ ಸಿ.ಎಂ ಆಗಿದ್ದಾಗ ನೈಸ್ ವಿಷಯದಲ್ಲಿ ಸುಪ್ರೀಂ ಕೋರ್ಟ್ ಆದೇಶ ಪಾಲಿಸಲು ಹೇಳಿದ್ದೆ’ ಎಂದು ಅವರು ಹೇಳಿದರು.

‘ನೈಸ್ ವಿರುದ್ಧ ಕ್ರಮಜರುಗಿಸಲು ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ, ಬಿ.ಎಸ್.ಯಡಿಯೂರಪ್ಪ ಅವರಿಗೂ ಪತ್ರ ಬರೆದಿದ್ದೆ. ಯಾರೂ ಕ್ರಮ ಕೈಗೊಳ್ಳಲಿಲ್ಲ’ ಎಂದು ಅವರು ಹೇಳಿದರು.

‘ಕಾಶ್ಮೀರಿ ಪಂಡಿತರು ಶೀಘ್ರದಲ್ಲೇ ಕಣಿವೆಗೆ ವಾಪಸು’

ಜಮ್ಮು (ಪಿಟಿಐ): ‘ಕಾಶ್ಮೀರಿ ಪಂಡಿತರು ಕಣಿವೆಯಲ್ಲಿರುವ ತಮ್ಮ ಮನೆಗಳಿಗೆ ಮರಳಲು ಶೀಘ್ರದಲ್ಲೇ ಸಾಧ್ಯವಾಗುತ್ತದೆ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಕಾಶ್ಮೀರಿ ಪಂಡಿತರು ಕಣಿವೆಯಿಂದ ಮತ್ತೆ ಎಂದಿಗೂ ಸ್ಥಳಾಂತರಗೊಳ್ಳದಂತೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಕೆಲಸ ನಡೆಯುತ್ತಿದೆ’ ಎಂದು ಪ್ರತಿಪಾದಿಸಿದ ಅವರು, ‘ದಿ ಕಾಶ್ಮೀರ್ ಫೈಲ್ಸ್’ ಚಲನಚಿತ್ರವು 1990 ರಲ್ಲಿ ಕಣಿವೆಯಿಂದ ಕಾಶ್ಮೀರಿ ಪಂಡಿತರ ನಿರ್ಗಮನದ ಹಿಂದಿನ ವಾಸ್ತವತೆಯ ಬಗ್ಗೆ ದೇಶದಾದ್ಯಂತ ಮತ್ತು ಇತರೆ ದೇಶಗಳಲ್ಲಿ ಸಾರ್ವಜನಿಕ ಜಾಗೃತಿ ಮೂಡಿಸಿದೆ ಎಂದು ಶ್ಲಾಘಿಸಿದರು.

ಮೂರು ದಿನಗಳ ‘ನವರೆಹ್’ ಆಚರಣೆಯ ಕೊನೆಯ ದಿನದಂದು ಕಾಶ್ಮೀರಿ ಪಂಡಿತರ ಸಮುದಾಯದ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಶ್ಮೀರ ಕಣಿವೆಯಲ್ಲಿ ತಮ್ಮ ಮನೆಗಳಿಗೆ ಮರಳುವ ಪ್ರತಿಜ್ಞೆಯನ್ನು ಮಾಡುವ ಸಮಯ ಬಂದಿದೆ ಎಂದು ಹೇಳಿದರು.

‘ಕಾಶ್ಮೀರ ಕಣಿವೆಗೆ ಮರಳುವ ನಮ್ಮ ಪ್ರತಿಜ್ಞೆ ಈಡೇರಲು ಹೆಚ್ಚು ದಿನಗಳು ಬೇಕಾಗುವುದಿಲ್ಲ ಮತ್ತು ನಾವು ಈ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮುಂದುವರೆಸುವ ಅಗತ್ಯವಿದೆ. ನಮ್ಮ ಇತಿಹಾಸ ಮತ್ತು ನಾಯಕರು ನಮಗೆಲ್ಲರಿಗೂ ಸ್ಫೂರ್ತಿಯಾಗಿ ಮಾರ್ಗದರ್ಶನ ನೀಡುವ ಕಾರ್ಯನಿರ್ವಹಿಸಬೇಕು’ ಎಂದು ಭಾಗವತ್ ಹೇಳಿದರು.

‘ದೋಷಗಳಿದ್ದರೆ ಸರಿಪಡಿಸೋಣ’

ಪ್ರಜಾವಾಣಿ ವಾರ್ತೆ

ಉದ್ಯಮಿಗಳಿಗೆ ಸರ್ಕಾರ ಯಥೇಚ್ಛ ಅನುಕೂಲಗಳನ್ನು ಒದಗಿಸುತ್ತಿದೆ. ಉದ್ಯಮಿಗಳೂ ಮೊದಲು ನಾವು ಭಾರತೀಯರು ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು

ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಐಟಿ ಮತ್ತು ಬಿಟಿ ಸಚಿವ

ಬೆಂಗಳೂರು: ‘ರಾಜಧಾನಿಯಲ್ಲಿ ಮೂಲಸೌಕರ್ಯಗಳ ವಿಚಾರದಲ್ಲಿ ಚಿಕ್ಕಪುಟ್ಟ ಕೊರತೆಗಳು ಇರಬಹುದು. ಉದ್ಯಮಿಗಳು ಅಂತಹ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಕೆಲಸ ಮಾಡಲಿ. ಬದಲಾಗಿ, ಸರ್ಕಾರಕ್ಕೆ ಬೆದರಿಕೆ ಹಾಕುವ ಮಟ್ಟಕ್ಕೆ ಹೋಗಬಾರದು’ ಎಂದು ಐಟಿ ಮತ್ತು ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

ನವೋದ್ಯಮಿಯೊಬ್ಬರು ಬೆಂಗಳೂರಿನಲ್ಲಿ ಮೂಲಸೌಕರ್ಯ ಕೊರತೆ ಇದೆ ಎಂದು ಟ್ವೀಟ್ ಮಾಡಿ, ಅಸಮಾಧಾನ ವ್ಯಕ್ತಪಡಿಸಿರುವ ಕಾರಣಕ್ಕೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

‘ನವೋದ್ಯಮ ಸೇರಿದಂತೆ ಯಾವುದೇ ಉದ್ದಿಮೆಗಳಿಗೆ ಬೆಂಗಳೂರಿನಲ್ಲಿ ಇರುವ ಮೂಲಸೌಕರ್ಯ ಮತ್ತು ಪರಿಸರ ಜಾಗತಿಕ ಮಟ್ಟದಲ್ಲಿ ಎಲ್ಲಿಯೂ ಇಲ್ಲ. ಹೀಗಾಗಿಯೇ ಬೆಂಗಳೂರು ದೇಶದ ನವೋದ್ಯಮ ರಾಜಧಾನಿಯಾಗಿದೆ’ ಎಂದು ಭಾನುವಾರ ಸುದ್ದಿಗಾರರಿಗೆ ಪ್ರಶ್ನೆಗೆ ಅವರು ಉತ್ತರಿಸಿದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಮಾಡಿರುವ ಭ್ರಷ್ಟಾಚಾರ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ ಅವರು, ‘ಕೆಂಪಣ್ಣನವರು ಎಷ್ಟು ವರ್ಷಗಳಿಂದ ಗುತ್ತಿಗೆದಾರರಾಗಿದ್ದಾರೆ ಎನ್ನುವುದು ನನಗೆ ಗೊತ್ತು. ಇಷ್ಟು ವರ್ಷ ಸುಮ್ಮನಿದ್ದು ಈಗಷ್ಟೇ ಮಾತನಾಡುತ್ತಿದ್ದಾರೆ ಅಂದರೆ ಏನರ್ಥ? ಇವರ ಹಿಂದೆ ಯಾರೆಲ್ಲ ಇದ್ದಾರೆ ಎನ್ನುವುದನ್ನು ಯಾರು ಬೇಕಾದರೂ ಊಹಿಸಬಹುದು’ ಎಂದರು.

‘ಭ್ರಷ್ಟಾಚಾರ ಇಲ್ಲವೇ ಇಲ್ಲ ಎನ್ನಲಾರೆ. ಆದರೆ, ಇದು 70 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಹುಟ್ಟು ಹಾಕಿದ ರೋಗಗ್ರಸ್ತ ಸಂಸ್ಕೃತಿ. ಈಗ ಹೆಮ್ಮರವಾಗಿದೆ. ಇದನ್ನು ಕಿತ್ತು ಹಾಕಲೆಂದೇ ಪ್ರಧಾನಿ ನೇತೃತ್ವದಲ್ಲಿ ಉತ್ತರದಾಯಿತ್ವ ವ್ಯವಸ್ಥೆ ತರಲಾಗುತ್ತಿದೆ’ ಎಂದರು. ‘ಭ್ರಷ್ಟಾಚಾರ ಹತ್ತಿಕ್ಕಲೆಂದೇ ಡಿಜಿಟಲ್ ವ್ಯವಹಾರ ವ್ಯವಸ್ಥೆ ತರಲಾಗುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ಭ್ರಷ್ಟಾಚಾರದ ವಿರುದ್ಧ ಮಾತನಾಡುವ ನೈತಿಕತೆಯೂ ಇಲ್ಲ. ಹೀಗಾಗಿಯೇ, ಜನರು ಆ ಪಕ್ಷವನ್ನು ಮೂಲೆಗೆ ತಳ್ಳಿದ್ದಾರೆ’ ಎಂದು ಅಶ್ವತ್ಥ ನಾರಾಯಣ ಪ್ರತಿಪಾದಿಸಿದರು.

Regional Institute of English, South India
Jnanabharathi Campus, Bengaluru-560 056.
QUOTATIONS ARE INVITED FOR SUPPLY OF STATIONERY ITEMS FOR THE YEAR 2022-23
Quotations are invited from the suppliers to supply stationery and housekeeping items for the Institute for the year 2022-23. The list of items required is available on our website (**www.riesi.ac.in**). Quotations should be sent in a sealed cover addressed to The Director, Regional Institute of English, South India, Jnanabharathi Campus, Bengaluru-560 056 so as to reach the office **on or before 25.04.2022**. For more details, call.: **080-35101131,** visit the website: **www.riesi.ac.in**
Sd/-DIRECTOR

ಎ.7ರಿಂದ ‘ಡಿಸ್ಕವರಿ ಪ್ಲಸ್’ನಲ್ಲಿ ಸಾಕ್ಷ್ಯಚಿತ್ರ ಸರಣಿ ಪ್ರಸಾರ

ಕುತೂಹಲ ತಣಿಸುವ ‘ಲೆಜೆಂಡ್ಸ್ ಆಫ್ ದಿ ರಾಮಾಯಣ’

• ಗಣಪತಿ ಶರ್ಮ

ಮುಂಬೈ: ಶ್ರೀರಾಮಚಂದ್ರನಿಗೆ ಒಬ್ಬ ಅಕ್ಕ ಇದ್ದಳಂತೆ, ನಿಜವೇ? ರಾಮ 14 ವರ್ಷ ಮಾತ್ರ ವನವಾಸ ಮಾಡಬೇಕೆಂದು ಕೈಕೇಯಿ ಹೇಳಲು ಕಾರಣವೇನು? ನಾಶಿಕ್ ನಗರಕ್ಕೆ ಹೇಗೆ ಆ ಹೆಸರು ಬಂತು?

ರಾಮಾಯಣದ ಬಗ್ಗೆ ಇಂಥ ಅನೇಕ ಪ್ರಶ್ನೆಗಳಿಗೆ ಉತ್ತರಿಸುವ ಯತ್ನವಾಗಿ ಎ.7ರಿಂದ ‘ಲೆಜೆಂಡ್ಸ್ ಆಫ್ ದಿ ರಾಮಾಯಣ ವಿದ್ ಅಮೀಶ್’ ಸಾಕ್ಷ್ಯಚಿತ್ರ ಸರಣಿ (ಡಾಕ್ಯೂ ಸೀರೀಸ್) ಪ್ರಸಾರ ಮಾಡಲಾಗುವುದು ಎಂದು ‘ಡಿಸ್ಕವರಿ ಪ್ಲಸ್’ ಒಟಿಟಿ ವೇದಿಕೆ ತಿಳಿಸಿದೆ.

ರಾಮಾಯಣದ ಪಾತ್ರಗಳು, ಅದರಲ್ಲಿ ಬರುವ ಸ್ಥಳಗಳು, ಅವುಗಳ ಐತಿಹಾಸಿಕ, ಭೌಗೋಳಿಕ ಮಹತ್ವ, ದೇಶದ ವಿವಿಧೆಡೆಗಳಲ್ಲಿ ರಾಮಾಯಣ ಆಧಾರಿತವಾಗಿ ಆಚರಣೆಯಲ್ಲಿರುವ ಸಂಸ್ಕೃತಿ ಹಾಗೂ ಇನ್ನೂ ಅನೇಕ ವಿಚಾರಗಳ ಬಗ್ಗೆ ಅಧ್ಯಯನ ನಡೆಸಿ ಸಾಕ್ಷ್ಯಚಿತ್ರ ಸರಣಿ ರೂಪಿಸಲಾಗಿದೆ.



‘ಲೆಜೆಂಡ್ಸ್ ಆಫ್ ದಿ ರಾಮಾಯಣ’ ಪೋಸ್ಟರ್ ಹಿನ್ನೆಲೆಯೊಂದಿಗೆ ಲೇಖಕ, ನಿರೂಪಕ ಅಮೀಶ್ ತ್ರಿಪಾಠಿ (ಚಿತ್ರ ಕೃಪೆ: ಡಿಸ್ಕವರಿ ಪ್ಲಸ್)

ಮುಂಬರುವ ರಾಮನವಮಿ ಪ್ರಯುಕ್ತ ಇದನ್ನು ಪ್ರಸಾರ ಮಾಡಲಾಗುತ್ತಿದೆ ಎಂದು ‘ಡಿಸ್ಕವರಿ ಪ್ಲಸ್’ ತಿಳಿಸಿದೆ.

ಲೇಖಕ ಅಮೀಶ್ ತ್ರಿಪಾಠಿ ಅವರ ನಿರ್ದೇಶನ, ನಿರೂಪಣೆಯಲ್ಲಿ ಸರಣಿ ಮೂಡಿಬರಲಿದೆ. ‘ವೈಡ್ ಆಂಗಲ್ ಫಿಲಮ್ಸ್’ ಪ್ರೊಡಕ್ಷನ್ ಹೌಸ್ ನಿರ್ಮಿಸಿರುವ ಈ ಸಾಕ್ಷ್ಯಚಿತ್ರ ಸರಣಿಗೆ ಸುಜಾತಾ ಕುಲಶ್ರೇಷ್ಠ ಹಾಗೂ ಅಭಿಮನ್ಯು ತಿವಾರಿ ಅವರ ಸಹ ನಿರ್ದೇಶನವಿದೆ.

ಒಟ್ಟು ಮೂರು ಸಂಚಿಕೆಗಳಿವೆ. ಪ್ರತಿ ಸಂಚಿಕೆ 45ರಿಂದ 50 ನಿಮಿಷ ಇರಲಿದೆ. ಅಯೋಧ್ಯೆ, ನಾಸಿಕ್, ರಾಮೇಶ್ವರ ಸೇರಿ ವಿವಿಧೆಡೆ ಹಾಗೂ ಶ್ರೀಲಂಕಾದಲ್ಲೂ ಚಿತ್ರೀಕರಣ ನಡೆದಿದೆ. ಇದಕ್ಕಾಗಿ ‘ಡಿಸ್ಕವರಿ ಪ್ಲಸ್’ ತಂಡವು 5,000 ಕಿ.ಮೀ ಹೆಚ್ಚು ಪ್ರಯಾಣ ಮಾಡಿದೆ. ಹಂಪಿಯ ಆನೆಗೊಂದಿ, ಅಂಜನಾದ್ರಿ ಬೆಟ್ಟದಲ್ಲೂ ಚಿತ್ರೀಕರಣ ನಡೆಸಲಾಗಿದೆ. ರಾಮಸೇತುವಿನ ವೈಜ್ಞಾನಿಕ ಹಿನ್ನೆಲೆ ಕುರಿತು ಭೂಗೋಳಶಾಸ್ತ್ರಜ್ಞರ ಅಧ್ಯಯನ ವರದಿ ಆಧಾರಿತ ಚಿತ್ರಣವನ್ನೂ ಕಟ್ಟಿಕೊಡಲಾಗಿದೆ ಎಂದು ‘ಡಿಸ್ಕವರಿ ಪ್ಲಸ್’ ತಂಡ ಹೇಳಿದೆ.

ಇತಿಹಾಸ, ಸಂಸ್ಕೃತಿ, ವೈಜ್ಞಾನಿಕ ತಳಹದಿಯೊಂದಿಗೆ ಮನರಂಜನೆ ಒದಗಿಸಲೂ ಯತ್ನಿಸಿದ್ದೇವೆ. ರಾಮಾಯಣದಲ್ಲಿ ಉಲ್ಲೇಖಿಸಿರುವ ಅನೇಕ ಸ್ಥಳಗಳ ನೈಜ ಚಿತ್ರಣ ಕಟ್ಟಿಕೊಡಲು ಪ್ರಯತ್ನಿಸಿದ್ದೇವೆ.

ಅಮೀಶ್ ತ್ರಿಪಾಠಿ, ಲೇಖಕ, ನಿರೂಪಕ

ಎಫ್‌ಪಿವಿ ಡ್ರೋಣ್ ಮತ್ತು ಅತ್ಯಾಧುನಿಕ ತಂತ್ರಜ್ಞಾನ ಬಳಸಿದ್ದೇವೆ. ಸಂಪೂರ್ಣ ಹೊರಾಂಗಣದಲ್ಲೇ ಚಿತ್ರೀಕರಣ ನಡೆದಿದೆ ಎಂದು ಡಿಸ್ಕವರಿ ಕಮ್ಯುನಿಕೇಷನ್ಸ್‌ನ ದಕ್ಷಿಣ ಏಷ್ಯಾ ವಿಭಾಗದ ವ್ಯವಸ್ಥಾಪಕ ನಿರ್ದೇಶಕಿ ಮೇಘಾ ಟಾಟ ಅವರು ತಿಳಿಸಿದರು.

ರಾಜಸ್ಥಾನದಲ್ಲಿ ಕೋಮು ಘರ್ಷಣೆ: ಕರ್ಫ್ಯೂ ಜಾರಿ

ಜೈಪುರ (ಪಿಟಿಐ): ರಾಜಸ್ಥಾನದ ಕರೌಲಿಯಲ್ಲಿ ಹಿಂದೂ ಹೊಸ ವರ್ಷಾಚರಣೆಯ ಅಂಗವಾಗಿ ನಡೆದ ಬೈಕ್ ರ‍್ಯಾಲಿ ವೇಳೆ ಎರಡು ಕೋಮುಗಳ ಮಧ್ಯೆ ಘರ್ಷಣೆ ಸಂಭವಿಸಿದ್ದು, ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದೆ.

ಶನಿವಾರ ಸಂಜೆ ಈ ಘಟನೆ ನಡೆದಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಕರೌಲಿ ನಗರದಲ್ಲಿ ಸೋಮವಾರದವರೆಗೆ ಕರ್ಫ್ಯೂ ಜಾರಿಗೊಳಿಸಲಾಗಿದೆ. ಜತೆಗೆ, ಭಾನುವಾರ ಮಧ್ಯರಾತ್ರಿವರೆಗೆ ಇಂಟರ್ನೆಟ್ ಸೇವೆ ನಿರ್ಬಂಧಿಸಲಾಗಿದೆ. ಜೊತೆಗೆ 650ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

ಮುಸ್ಲಿಂ ಪ್ರಾಬಲ್ಯದ ಪ್ರದೇಶದಲ್ಲಿ ಹಿಂದೂಗಳ ಬೈಕ್ ರ‍್ಯಾಲಿ ಹಾದು ಹೋಗುವ ಸಂದರ್ಭದಲ್ಲಿ ಕಲ್ಲು ತೂರಾಟ ನಡೆದಿದೆ. ಅಲ್ಲದೆ ಸ್ಥಳದಲ್ಲಿ ನಿಂತಿದ್ದ ವಾಹನಗಳು ಮತ್ತು ಅಂಗಡಿಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಈ ಘಟನೆಯಲ್ಲಿ 42 ಮಂದಿ ಗಾಯಗೊಂಡಿದ್ದು, ಈವರೆಗೆ ಹಿಂಸಾಚಾರಕ್ಕೆ ಕಾರಣರಾದ ಪೈಕಿ 36 ಮಂದಿಯನ್ನು ಬಂಧಿಸಿದ್ದೇವೆ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಹವಾ ಸಿಂಗ್ ಗುಮಾರಿಯಾ ತಿಳಿಸಿದ್ದಾರೆ.

ಈ ಘಟನೆಯ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚಿಸಿರುವ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು, 'ಜನತೆ ಶಾಂತಿ ಕಾಪಾಡಲು ಸಹಕರಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಬೈಕ್ ರ‍್ಯಾಲಿ ನಡೆಯುವ ಬಗ್ಗೆ ಆಡಳಿತ ಹೆಚ್ಚಿನ ನಿಗಾ ವಹಿಸಿದ್ದರೆ, ಈ ಘಟನೆಯನ್ನು ತಡೆಯಬಹುದಿತ್ತು. ರಾಜ್ಯದ ಸಾಮರಸ್ಯಕ್ಕೆ ಧಕ್ಕೆ ತಂದಿರುವ ಈ ಘಟನೆಗೆ ಸರ್ಕಾರ ಕೂಡ ಕಾರಣವಾಗಿದೆ' ಎಂದು ಬಿಜೆಪಿ ನಾಯಕಿ ವಸುಂಧರಾ ರಾಜೆ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ISO 9001 : 2015 CERTIFICATE NO: 2790095
ನಂ.5 ಮತ್ತು 6, ಜಲ ಭವನ, ಬಿ.ಟಿ.ಎಂ. ಲೇಔಟ್, 1ನೇ ಘಟ್ಟ, 1ನೇ ಹಂತ, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು–560 029.
ಫೋನ್ ನಂ: 080–41106532 ಇ–ಮೇಲ್: caokwb@gmail.com
ಸಂಖ್ಯೆ: ಕಜಮ/ಮುಲೆಅ/ಎಎಸ್–2/ಎ.ಎ–3/595/2021–22 ದಿನಾಂಕ: 31–03–2022
ಅಲ್ಪಾವಧಿ ಅಧಿಸೂಚನೆ
ಮಂಡಳಿಯ 2021–22ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಸಲು ರೂ. 200.00 ಕೋಟಿಗಳ ಸಾಲವನ್ನು ಐ.ಇ.ಬಿ.ಆರ್ (I.E.B.R) ಪ್ರವರ್ಗದಡಿಯಲ್ಲಿ ಸರ್ಕಾರಿ ಖಾತರಿಯೊಂದಿಗೆ ತೆಗೆದುಕೊಳ್ಳಲು ಉದ್ದೇಶಿಸಿದೆ. ಆಸಕ್ತಿಯುಳ್ಳ Public Sector Banks / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಹುಡ್ಕೋ / ಹಣಕಾಸು ಸಂಸ್ಥೆಗಳು ತಮ್ಮ ಕಡಿಮೆ ಬಡ್ಡಿ ದರದ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಿದೆ ನಿಬಂಧನೆಗಳು ಈ ಕೆಳಕಂಡಂತೆ ಇರುತ್ತದೆ.
1) ಸಾಲದ ಮರುಪಾವತಿ ಅವಧಿಯು 10 ವರ್ಷಗಳಾಗಿದ್ದು 2 ವರ್ಷಗಳ ಮೊರಟೋರಿಯಂ ಅವಧಿಯನ್ನು ಒಳಗೊಂಡಿರುತ್ತದೆ. 2) ಬಡ್ಡಿಯನ್ನು ಪ್ರತಿ ತಿಂಗಳು ಪಾವತಿಸಲಾಗುವುದು. 3) ಪ್ರತಿ ಮೂರು ತಿಂಗಳಿಗೊಮ್ಮೆ ಅಸಲನ್ನು ಪಾವತಿಸಲಾಗುವುದು 4) ಒಂದು ವರ್ಷದ ಎಂಸಿಎಲ್‌ಆರ್/ಬಾಹ್ಯ ಮಾನದಂಡ ಲಿಂಕ್ ದರ (External benchmark linked rate) 5) ಪ್ರೊಸೆಸಿಂಗ್ ಶುಲ್ಕ ಹಾಗೂ ಅವಧಿಗೆ ಮುನ್ನ ಮರುಪಾವತಿ ಶುಲ್ಕದ ಬಗ್ಗೆ ಷರತ್ತುಗಳಿದ್ದಲ್ಲಿ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವುದು. 6) ನಿಬಂಧನೆಯಲ್ಲಿ ಸಿಂಧುತ್ವದ (Validity) ಪ್ರಸ್ತಾವನೆಯನ್ನು ಸ್ಪಷ್ಟವಾಗಿ ನಮೂದಿಸುವುದು. 7) ಸರ್ಕಾರಿ ಖಾತರಿಯನ್ನು ಹೊರತುಪಡಿಸಿ ಬೇರೆ ಯಾವುದೇ ಭದ್ರತೆಯನ್ನು ನೀಡಲಾಗುವುದಿಲ್ಲ.
ತಮ್ಮ ಪ್ರಸ್ತಾವನೆಯನ್ನು ಮೊಹರಾದ ಲಕೋಟೆಯ ಮೇಲೆ ಸ್ಪಷ್ಟವಾಗಿ **ರೂ. 200.00 ಕೋಟಿಗಳ** ಸಾಲದ ಪ್ರಸ್ತಾವನೆ ಎಂದು ನಮೂದಿಸಿ ಈ ಕಚೇರಿಗೆ **ದಿನಾಂಕ: 18–04–2022 ಸಂಜೆ 4:00 ಗಂಟೆಯೊಳಗಾಗಿ** ಅಥವಾ ಅದಕ್ಕಿಂತ ಮುಂಚಿತವಾಗಿ ಮುಖ್ಯ ಲೆಕ್ಕಾಧಿಕಾರಿಗಳ ಕಚೇರಿಯಲ್ಲಿರುವ ಮುಚ್ಚಿದ ಬಾಕ್ಸ್‌ನಲ್ಲಿ ಹಾಕಲು ಕೋರಿದೆ. ಸದರಿ ಪ್ರಸ್ತಾವನೆಯನ್ನು **ದಿನಾಂಕ: 19–04–2022 ರಂದು ಸಂಜೆ 5:00 ಗಂಟೆಗೆ** ತೆರೆಯಲಾಗುವುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಮುಕ್ತವಾಗಿ ಮುಖ್ಯ ಲೆಕ್ಕಾಧಿಕಾರಿಗಳನ್ನು ದೂರವಾಣಿ **ಸಂಖ್ಯೆ: 080–41106532** ಅಥವಾ **ಮೊಬೈಲ್ ಸಂಖ್ಯೆ: 9480813105** ನಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಮುಖ್ಯ ಲೆಕ್ಕಾಧಿಕಾರಿ,
ಕನನೀಸ ಮತ್ತು ಒ.ಚ ಮಂಡಳಿ ಬೆಂಗಳೂರು
ವಾಸಾಸಂಇ/ವಾಪ್ರ/4001/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್‌–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯುಗಾದಿ ಹಬ್ಬದ ಮಾರನೆ ದಿನದ ಆಚರಣೆ • 'ಹಲಾಲ್, ಜಟ್ಕಾ' ಗೊಂದಲ ಮರೆತು ಮಾಂಸ ಖರೀದಿ

ವರ್ಷದ ತೊಡಕಿಗೆ ತೊಡಕಾಗದ ವಿವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಾಲ್ ಮತ್ತು ಜಟ್ಕಾ ಗೊಂದಲದ ನಡುವೆಯೂ ಬಾಂಧವ್ಯವನ್ನು ಯುಗಾದಿ ಹಬ್ಬ ಉಳಿಸಿದೆ. ರಾಜ್ಯದ ವಿವಿಧೆಡೆ ಮಾಂಸ ಕುರಿತಂತೆ ಇದ್ದ ಹಲಾಲ್, ಜಟ್ಕಾದ ಭಿನ್ನಾಭಿಪ್ರಾಯಗಳ ನಡುವೆಯೂ ಜನರು ಸೌಹಾರ್ದವಾಗಿ ಹಬ್ಬ ಆಚರಿಸಿದ್ದಾರೆ.

ಯುಗಾದಿ ಮಾರನೇ ದಿನದ 'ವರ್ಷದ ತೊಡಕು' ಸಂಭ್ರಮಕ್ಕೆ ಹಲಾಲ್, ಜಟ್ಕಾ ಅಷ್ಟೇನೂ ತೊಡಕಾಗಿಲ್ಲ. ಮಾಂಸದ ಗುಣಮಟ್ಟಕ್ಕೆ ಆದ್ಯತೆ ನೀಡಿ, ಹಿಂದೆ ಖರೀದಿಸುತ್ತಿದ್ದಂತೆ ಪರಿಚಿತರಲ್ಲಿಯೇ ಖರೀದಿ ಮಾಡಿರುವ ಪ್ರಕರಣಗಳು ವರದಿಯಾಗಿವೆ.

ಬೇವು ಬೆಲ್ಲ, ಹೋಳಿಗೆ ಹಂಚಿಕೆ (ಮೈಸೂರು ವರದಿ): ಸೌಹಾರ್ದ ಕರ್ನಾಟಕ ಆಶ್ರಯದಲ್ಲಿ ಶನಿವಾರ ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಸೌಹಾರ್ದ ಯುಗಾದಿ ಆಚರಿಸಲಾಯಿತು. ಮುಸ್ಲಿಂ, ಕ್ರೈಸ್ತ ಸಮುದಾಯದವರಿಗೆ ಬೇವು ಬೆಲ್ಲ, ಹೋಳಿಗೆ ಹಂಚಲಾಯಿತು.

ಸೌಹಾರ್ದ ಕರ್ನಾಟಕ ಮೈಸೂರು ವೇದಿಕೆಯ ವಿವಿಧ ಮುಖಂಡರು ಭಾಗಿಯಾಗಿದ್ದರು. ಎಚ್.ಡಿ.ಕೋಟೆ ಪಟ್ಟಣದಲ್ಲಿ ಶನಿವಾರ ಸೌಹಾರ್ದ ಭೋಜನ ಏರ್ಪಡಿಸಲಾಗಿತ್ತು. ಹಿಂದೂ, ಮುಸ್ಲಿಂ ಸ್ನೇಹಿತರು ಜೊತೆಯಲ್ಲಿ ಹೋಳಿಗೆ ಊಟ ಸವಿದರು. ಪುರಸಭೆ ಸದಸ್ಯರಾದ ನಂಜಪ್ಪ, ಆಸಿಫ್ ಇಕ್ಬಾಲ್, ಮಧು, ಮಹಮ್ಮದ್ ಶಫಿ ಸೇರಿ ಉಭಯ ಧರ್ಮದ ವಿವಿಧ ಮುಖಂಡರು ಭಾಗವಹಿಸಿದ್ದರು.

ಗುಣಮಟ್ಟದ ಮಾಂಸಕ್ಕೆ ಆದ್ಯತೆ ಮೈಸೂರು: ಯುಗಾದಿ 'ವರ್ಷದ ತೊಡಕು' ಅಂಗವಾಗಿ ಮೈಸೂರು ಭಾಗದಲ್ಲಿ ಭಾನುವಾರ ಜನರು ಗುಣಮಟ್ಟಕ್ಕೆ ಆದ್ಯತೆ ನೀಡಿ ತಮಗಿಷ್ಟವಾದ ಅಂಗಡಿಗಳಲ್ಲಿ ಮಾಂಸ ಖರೀದಿಸಿದರು.

ಹಲಾಲ್ ಮಾಂಸವನ್ನು ಹಿಂದೂಗಳು ಖರೀದಿಸಬಾರದು ಎಂದು ಬಜರಂಗದಳ ಕಾರ್ಯಕರ್ತರು ಹಲವೆಡೆ ಪ್ರಚಾರ ಮಾಡಿದ್ದರು. ಈ ವಿಚಾರಕ್ಕೆ ಗಮನ ಕೊಡದ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಭಾಗದ ಜನರು ತಾವು ಹಿಂದೆ ಖರೀದಿಸುತ್ತಿದ್ದ ಅಂಗಡಿಗಳ ಮುಂದೆ ಸರತಿ ಸಾಲಿನಲ್ಲಿ ನಿಂತು ಖರೀದಿಯಲ್ಲಿ ತೊಡಗಿದ್ದರು.

ಹಲಾಲ್ ಗೊಂದಲ ಇಲ್ಲ (ಶಿವಮೊಗ್ಗ ವರದಿ): ನಗರದಲ್ಲಿ ಚಂದ್ರದರ್ಶನ ಇಲ್ಲದ ಕಾರಣ ಕೆಲವೆಡೆ ವರ್ಷದ ತೊಡಕು ನಡೆದಿಲ್ಲ. ಇನ್ನು ಕೆಲ ಮಂದಿ ಸಂಪ್ರದಾಯದಂತೆ ಹಬ್ಬದ ಮರು ದಿನ ವರ್ಷದ ತೊಡಕು ಆಚರಿಸಿದ್ದಾರೆ.

ನಗರದ ಟ್ಯಾಂಕ್ ಮೊಹಲ್ಲಾ, ಗಾಂಧಿಬಜಾರ್, ಆರ್.ಎಂ.ಎಲ್. ನಗರ, ವಿನೋಬ ನಗರ, ಹೊಸಮನೆ, ಗೋಪಾಳ ಸೇರಿ ಹಲವು ಬಡಾವಣೆಗಳಲ್ಲಿ ಕೆಲವರು ಬೆಳಿಗ್ಗೆ ಮಟನ್, ಚಿಕನ್ ಖರೀದಿಸಿದ್ದಾರೆ. ಎಲ್ಲಿಯೂ ಹಲಾಲ್ ಗೊಂದಲದ ಬಗ್ಗೆ ವರದಿಯಾಗಿಲ್ಲ.

ವರ್ಷದ ತೊಡಕು ಸರಾಗ (ಹುಬ್ಬಳ್ಳಿ ವರದಿ): ವರ್ಷದ ತೊಡಕು ಅಂಗವಾಗಿ ಭಾನುವಾರ ಜನರು ಮುಗಿಬಿದ್ದು ಮಾಂಸ ಖರೀದಿಸಿದರು. ಹಲಾಲ್ ಕಟ್, ಜಟ್ಕಾ ಕಟ್ ಭೇದಭಾವವೂ ಕಾಣಲಿಲ್ಲ. ಎಂದಿನಂತೆ ಜನರು ತಮ್ಮಿಷ್ಟದ ಅಂಗಡಿಗಳಲ್ಲಿ ಮಾಂಸ ಖರೀದಿಸಿ ಹಬ್ಬದ ಭೋಜನ ಸವಿದರು.

ಧಾರವಾಡ, ಬೆಳಗಾವಿ, ಕಾರವಾರ, ಹಾವೇರಿ, ಗದಗ, ಬಳ್ಳಾರಿ– ವಿಜಯನಗರ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲೂ ಇದೇ ಸ್ಥಿತಿ ಇತ್ತು.

'ಗ್ರಾಹಕರು ಒಳ್ಳೆಯ ಮಾಂಸ ಯಾವ ಅಂಗಡಿಗಳಲ್ಲಿ ಸಿಗುತ್ತದೆ ಎಂದು ನೋಡಿ ಖರೀದಿಸುತ್ತಾರೆಯೇ ಹೊರತು, ಕುರಿ ಅಥವಾ ಕೋಳಿಯನ್ನು ಯಾವ ರೀತಿ ಕತ್ತರಿಸಿ ಮಾರಾಟ ಮಾಡುತ್ತಿದ್ದಾರೆ ಎನ್ನುವುದನ್ನಲ್ಲ. ಹಲಾಲ್ ಮತ್ತು ಜಟ್ಕಾ ಮಾಂಸ ಮಾರಾಟದ ಹಗ್ಗಜಗ್ಗಾಟ ನಮ್ಮೂರಲ್ಲಿಲ್ಲ' ಎಂದು ಗಣೇಶಪೇಟೆಯ ಮಾಂಸದ ವ್ಯಾಪಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ವಿವಾದಕ್ಕೆ ಕಿವಿಗೊಡದೆ ಮಾಂಸ ಖರೀದಿ

ಬೆಂಗಳೂರು: ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಯುಗಾದಿ ಮಾರನೇ ದಿನದ 'ವರ್ಷದ ತೊಡಕು' ಸಂಭ್ರಮಕ್ಕೆ ಹಲಾಲ್–ಜಟ್ಕಾ ವಿವಾದ ಅಡ್ಡಿಯಾಗಲಿಲ್ಲ.

ಭಾನುವಾರ ಬೆಳಗ್ಗೆಯಿಂದಲೇ ಮಾಂಸ ಖರೀದಿಗೆ ಮುಗಿಬಿದ್ದ ಜನರು ಹಲಾಲ್ ಕಟ್ ಮತ್ತು ಜಟ್ಕಾ ಕಟ್ ಎಂಬ ಗೊಂದಲ ಇಲ್ಲದೆಯೇ ಹಿಂದಿನಂತೆ ತಮಗೆ ಇಷ್ಟವಾದ ಅಂಗಡಿಗಳಲ್ಲಿಯೇ ಮಾಂಸ ಖರೀದಿಸಿದರು.

ಮುಸ್ಲಿಂ ಸಮುದಾಯದವರ ಮಟನ್ ಸ್ಟಾಲ್‌ಗಳ ಮುಂದೆಯೂ ಜನರ ಉದ್ದನೆಯ ಸಾಲು ಇತ್ತು. ಕೆಲವೆಡೆ 'ಹಿಂದೂ ಮೀಟ್ ಮಾರ್ಟ್', 'ಜಟ್ಕಾ ಕಟ್ ಮಟನ್ ಅಂಗಡಿ' ಎಂದು ಫ್ಲೆಕ್ಸ್ ಅಳವಡಿಸಲಾಗಿತ್ತು. ಬಜರಂಗದಳದ ಕಾರ್ಯಕರ್ತರು ಬೇವು–ಬೆಲ್ಲ ಹಂಚಿ ಹಿಂದೂ ಅಂಗಡಿಗಳಲ್ಲೇ ಜಟ್ಕಾ ಕಟ್ ಮಾಂಸ ಖರೀದಿಸಲು ಕೋರಿದರು. ಗ್ರಾಹಕರು ತಮಗೆ ಬೇಕಾದೆಡೆ ಮಾಂಸ ಖರೀದಿಸಿದರು. ಕೆಲವು ಕಡೆ ಪ್ರಗತಿಪರ ಸಂಘಟನೆಗಳು ಆಯೋಜಿಸಿದ್ದ 'ಸೌಹಾರ್ದ ಯುಗಾದಿ ಕಾರ್ಯಕ್ರಮ'ದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಸಮುದಾಯದ ಜನರು ಬೇವು ಬೆಲ್ಲ ಹಂಚಿಕೊಂಡರು.

ಮೈಸೂರಿನಲ್ಲಿ ಶನಿವಾರ ಸೌಹಾರ್ದ ಯುಗಾದಿ ಆಚರಣೆ ವೇಳೆ ಹಿಂದೂ ಹಾಗೂ ಮುಸ್ಲಿಂ ಮುಖಂಡರು ಕೈ ಜೋಡಿಸಿದ ಕ್ಷಣ. ಖಲೀಂ, ಅಮಾನುಲ್ಲಾ ಷರೀಫ್, ಡಿಎಸ್‌ಎಸ್‌ನ ಶಂಬಯ್ಯ, ಕೆ.ಬಸವರಾಜು, ಸೌಹಾರ್ದ ಕರ್ನಾಟಕ ಮೈಸೂರು ವೇದಿಕೆಯ ಜಗದೀಶ್ ಸೂರ್ಯ, ಅಪ್ಸರ್, ಲ.ಜಗನ್ನಾಥ್, ಇಸ್ಮಾಯಿಲ್, ಮೆಹಬೂಬ್ ಪಾಷಾ ಇದ್ದಾರೆ

ವಿವಾದ: ತಲೆ ಕೆಡಿಸಿಕೊಳ್ಳದ ಜನ

ಬೆಂಗಳೂರು: ರಾಜಧಾನಿಯಲ್ಲಿಯೂ ಹಲಾಲ್–ಜಟ್ಕಾ ವಿವಾದ ಪರಿಣಾಮ ಬೀರಿಲ್ಲ. ಕುರಿ, ಕೋಳಿ ಹಾಗೂ ಮೀನು ಮಾರಾಟ ಮಳಿಗೆ ಎದುರು ಭಾನುವಾರ ನಸುಕಿನಿಂದಲೇ ಜನರು ಸರದಿಯಲ್ಲಿ ನಿಂತಿದ್ದರು. ಮುಸ್ಲಿಂ ಹಾಗೂ ಹಿಂದೂ ಎಂಬ ಭೇದಬಾವವಿಲ್ಲದೇ, ಮಾಂಸ ಖರೀದಿಸಿಕೊಂಡು ಹೋದರು. 'ಹಲಾಲ್ ಮಾಂಸ ತಿರಸ್ಕರಿಸಿ, ಜಟ್ಕಾ ಮಾಂಸ ಖರೀದಿಸಿ' ಎಂಬುದಾಗಿ ಬಜರಂಗದಳದ ಕಾರ್ಯಕರ್ತರು ಅಭಿಯಾನ ನಡೆಸುತ್ತಿದ್ದರು. ಆದರೆ, ಬಹುತೇಕ ಅಂಗಡಿಗಳಲ್ಲಿ ಯಾರೊಬ್ಬರೂ ಹಲಾಲ್ ಹಾಗೂ ಜಟ್ಕಾ ಬಗ್ಗೆ ವಿಚಾರಿಸಲಿಲ್ಲ. ಕಾಯಂ ಅಂಗಡಿಯಾಗಿದ್ದರಿಂದ, ಗುಣಮಟ್ಟದ ಮಾಂಸವನ್ನಷ್ಟೇ ಕೇಳಿ ಪಡೆದರು.

ಬೆಂಗಳೂರಿನ ಶ್ರೀರಾಮಪುರ ವ್ಯಾಪಾರಿ ಅಯೂಬ್, 'ನಮ್ಮ ಅಂಗಡಿಗೆ ಕಾಯಂ ಗ್ರಾಹಕರು ಹೆಚ್ಚು. ಕಳೆದ ವರ್ಷ 1,300 ಕೆ.ಜಿ ಮಾಂಸ ಮಾರಿದ್ದೆವು. ಈ ವರ್ಷದ 1,500 ಕೆ.ಜಿ ಮಾಂಸ ಖರೀದಿಸಿದ್ದಾರೆ. ಹಲಾಲ್–ಜಟ್ಕಾ ಪ್ರಶ್ನೆಯೇ ಬಂದಿಲ್ಲ' ಎಂದರು.

'ಪಾಪಣ್ಣ ಮಾಂಸದಂಗಡಿ ಮಾಲೀಕ ಸಂತೋಷ್, 'ಹಲಾಲ್– ಜಟ್ಕಾ ಬಗ್ಗೆ ಗ್ರಾಹಕರು ಕೇಳಿಲ್ಲ. ಯಾರಾದರೂ ಕೇಳಿದರೆ, ಅವರಿಗೆ ಬೇಕಾದ ರೀತಿಯಲ್ಲಿ ಮಾಂಸ ಕತ್ತರಿಸಿ ಕೊಡುತ್ತೇವೆ' ಎಂದರು. ಬೆಂಗಳೂರಿನ ಉಲ್ಲಾಳದ 'ಹಿಂದವೀ ಮೀಟ್ ಮಾರ್ಟ್ ಜಟ್ಕಾ' ಅಂಗಡಿಯಲ್ಲೂ ಜನರು ಸರದಿಯಲ್ಲಿ ನಿಂತಿದ್ದು ಕಂಡುಬಂತು.

ಮೈಸೂರಿನಲ್ಲಿ ಮುಸ್ಲಿಮರ ಮಳಿಗೆಗಳಲ್ಲೇ ಖರೀದಿ

ಮುಸ್ಲಿಂ ವ್ಯಾಪಾರಿಗಳ ಅಂಗಡಿಗಳಲ್ಲಿ ಮಾಂಸ ಖರೀದಿಸಿ ಶಾಂತಿ ಸೌಹಾರ್ದ, ಸಹಬಾಳ್ವೆ ಸಂದೇಶ ಸಾರುವ ಉದ್ದೇಶದಿಂದ ಮೈಸೂರಿನ ಶಾಂತಿ ನಗರದಲ್ಲಿ (ಮಹದೇವಪುರ ರಿಂಗ್ ರಸ್ತೆ) ಭಾನುವಾರ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಕಲೆಂಟು ಜಾತಿ ಸಹಬಾಳ್ವೆ ಸಂಘ, ರಾಜ್ಯ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಾಹಿತಿ ದೇವನೂರು ಮಹದೇವ, ಹೋರಾಟಗಾರರಾದ ಪ. ಮಲ್ಲೇಶ್, ಬಡಗಲಪುರ ನಾಗೇಂದ್ರ, ಗುರುಪ್ರಸಾದ್ ಕೆರಗೋಡು, ಆಲಗೂಡು ಶಿವಕುಮಾರ್, ಶಂಭುಲಿಂಗಸ್ವಾಮಿ, ಪಿ.ಮರಂಕಯ್ಯ, ಬಸವರಾಜು, ಕಲ್ಲಹಳ್ಳಿ ಕುಮಾರ ಅವರು ಅಜೀಜ್ ಸೇಠ್ ಮುಖ್ಯ ರಸ್ತೆಯಲ್ಲಿರುವ ಸೈಯ್ಯದ್ ರಿಜ್ವಾನ್ ಅವರ 'ಕರ್ನಾಟಕ ಮಟನ್ ಆ್ಯಂಡ್ ಚಿಕನ್ ಸ್ಟಾಲ್'ನಲ್ಲಿ ಮಾಂಸ ಖರೀದಿಸಿದರು. 'ಕೋಮುವಾದ ಅಳಿಯಲಿ ಕರ್ನಾಟಕ ಉಳಿಯಲಿ' ಎಂಬ ಘೋಷಣೆ ಕೂಗಿದರು.

ಸುದ್ದಿ 2 ನಿಮಿಷ

'ಅನ್ಯ ಧರ್ಮದ ಮೇಲೆ ಕಟ್ಟುಪಾಡು ಹೇರಿಕೆ ಸಲ್ಲದು'

ಉಡುಪಿ: 'ಆರ್ಯ ಈಡಿಗ ಸಮುದಾಯದ ಯುವಕರು ಗಲಭೆಗಳಲ್ಲಿ ಭಾಗಿಯಾಗಬಾರದು' ಎಂದು ಆರ್ಯ ಈಡಿಗ ಮಹಾ ಮಂಡಳಿಯ ರಾಷ್ಟ್ರೀಯ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಭಾನುವಾರ ಕಿವಿಮಾತು ಹೇಳಿದರು.

ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ಅವರು, 'ರಾಜಕೀಯ ಪಕ್ಷಗಳ ಸಿದ್ಧಾಂತ ಒಪ್ಪಿಕೊಂಡರೂ ಮತ್ತೊಂದು ಜನಾಂಗಕ್ಕೆ ನೋವುಂಟು ಮಾಡಬಾರದು. ಪಕ್ಷಗಳ ಸಿದ್ಧಾಂತಕ್ಕೆ ಶರಣಾಗಿ ಶೋಷಣೆಗೆ ಒಳಗಾಗಬಾರದು. ಸಮುದಾಯಕ್ಕೆ ಸ್ಪಷ್ಟವಾದ ಗುರಿಯಿದೆ. ಅದರೆಡೆಗೆ ಮುನ್ನುಗ್ಗಬೇಕು. ಶಿಕ್ಷಣ, ವ್ಯಾಪಾರಕ್ಕೆ ಒತ್ತು ಕೊಡಬೇಕು' ಎಂದು ಸಲಹೆ ನೀಡಿದರು.

'ಸರ್ವ ಜನಾಂಗದ ಶಾಂತಿಯ ತೋಟವಾದ ಕರ್ನಾಟಕದಲ್ಲಿ ಸದಾ ಶಾಂತಿ ನೆಲೆಸಬೇಕು. ಧರ್ಮಗಳ ಮಧ್ಯೆ ಘರ್ಷಣೆ ನಡೆಯಬಾರದು. ಆಚಾರ, ವಿಚಾರಗಳು ಅವರವರ ಧರ್ಮಕ್ಕೆ ಸೀಮಿತವಾಗಿರಲಿ. ಒಂದು ಧರ್ಮದ ಕಟ್ಟು-ಪಾಡುಗಳನ್ನು ಮತ್ತೊಂದು ಧರ್ಮದ ಮೇಲೆ ಹೇರುವುದು ಸಲ್ಲದು. ಸಂವಿಧಾನವೇ ಎಲ್ಲರ ದೇವರಾಗಿದ್ದು ಒಪ್ಪಿಕೊಂಡು ಪಾಲಿಸಬೇಕು' ಎಂದರು.

'ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವ, ಸಿದ್ಧಾಂತಗಳನ್ನು ಎಲ್ಲರೂ ಪಾಲಿಸಬೇಕು. ಒಂದೇ ಜಾತಿ, ಧರ್ಮ, ದೇವರು ಎಂಬ ಗುರುಗಳ ತತ್ವವನ್ನು ಅರಿಯಬೇಕು ಎಂದು ಸಲಹೆ ನೀಡಿದರು.

'ಅಂತರರಾಷ್ಟ್ರೀಯ ತಾಣಗಳಿಗೆ ವಿಮಾನ ಸಂಪರ್ಕ ಹೆಚ್ಚಳ'

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಪ್ರತಿ ದಿನ ಈಗ 25 ಅಂತರರಾಷ್ಟ್ರೀಯ ವಿಮಾನಗಳು ಹಾರಾಟ ನಡೆಸುತ್ತಿವೆ. ಇದರಿಂದಾಗಿ ಕೋವಿಡ್ ಪೂರ್ವ ಕಾಲಕ್ಕೆ ಹೋಲಿಸಿದರೆ ಈಗ ಶೇ 90ರಷ್ಟು ವಿಮಾನಗಳ ಹಾರಾಟ ಪುನರಾರಂಭವಾದಂತಾಗಿದೆ.

ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ವಿಮಾನಗಳ ಹಾರಾಟ ಆರಂಭವಾಗಿರುವುದರಿಂದ ಬೆಂಗಳೂರು ವಿಮಾನ ನಿಲ್ದಾಣದ ಮಾರ್ಗದಲ್ಲೂ ದಟ್ಟಣೆ ಹೆಚ್ಚಾಗುತ್ತಿದೆ.

ಪ್ರಸ್ತುತ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 17 ದೇಶಗಳಲ್ಲಿನ 21 ಸ್ಥಳಗಳ ಜತೆ ಸಂಪರ್ಕ ಹೊಂದಿದ್ದು, 24 ವಿಮಾನಯಾನ ಸಂಸ್ಥೆಗಳು ಕಾರ್ಯಾಚರಣೆ ನಡೆಸುತ್ತಿವೆ. ಈ ವರ್ಷದ ಅಂತ್ಯದ ಒಳಗೆ ಹಲವು ಹೊಸ ಮಾರ್ಗಗಳಿಗೂ ಸಂಪರ್ಕ ಕಲ್ಪಿಸಲಿದೆ.

ವಿಮಾನ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿರುವುದರಿಂದ ಮತ್ತಷ್ಟು ಸೌಲಭ್ಯಗಳನ್ನು ಕಲ್ಪಿಸಲು ಕ್ರಮಕೈಗೊಳ್ಳಲಾಗುತ್ತಿದೆ. ದಕ್ಷಿಣ ಭಾರತದಲ್ಲೇ ಅತಿ ದೊಡ್ಡ ಸಂಪರ್ಕ ಜಾಲದ ತಾಣವಾಗಿ ಬೆಂಗಳೂರು ವಿಮಾನ ನಿಲ್ದಾಣ ಹೊರಹೊಮ್ಮಿದೆ. ದೇಶದ 74 ಸ್ಥಳಗಳಿಗೆ ಇಲ್ಲಿಂದ ಸಂಪರ್ಕ ಕಲ್ಪಿಸಲಾಗಿದೆ' ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಬಿಐಎಎಲ್) ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರಿ ಮರಾರ್ ತಿಳಿಸಿದ್ದಾರೆ.

ನರಬಲಿ ಕೇಳುತ್ತಿರುವ ಸರ್ಕಾರ: ದೇವನೂರ ಕಿಡಿ

ಒಂದನೇ ಪುಟದಿಂದ

ಸಕಲೆಂಟು ಜಾತಿ ಸಹಬಾಳ್ವೆ ಸಂಘ, ರಾಜ್ಯ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು.

'ಬಿಜೆಪಿಯು ಮತ್ತೆ ಅಧಿಕಾರಕ್ಕೆ ಬರಲು ವೋಟ್ ಬ್ಯಾಂಕ್‌ಗಾಗಿ ಜನರನ್ನು ಒಡೆದು, ದ್ವೇಷವನ್ನು ಎಲ್ಲೆಡೆ ಹಬ್ಬಿಸಲಾಗುತ್ತಿದೆ. ದ್ವೇಷವೇ ಸರ್ಕಾರಕ್ಕೆ ಎನರ್ಜಿ ಡ್ರಿಂಕ್ಸ್ ಆಗಿದೆ' ಎಂದರು.

'ವಿರೋಧಪಕ್ಷಗಳುಮಂಕಾಗಿಕುಳಿತಿರುವ ಈ ಹೊತ್ತಿನಲ್ಲಿ ಎಲ್ಲ ಹದಿನೆಂಟು ಜಾತಿಗಳಲ್ಲೂ ವಿವೇಕ ಇರುವವರು ಮಾತನಾಡಬೇಕು, ಕ್ರಿಯಾಶೀಲರಾಗಬೇಕು' ಎಂದು ಕರೆ ನೀಡಿದರು.

'ಹಳೆ ಪೇಪರ್, ಖಾಲಿ ಸೀಸ ಕೊಳ್ಳುತ್ತಿದ್ದ ಹೊಟ್ಟೆಪಾಡಿನ ಜನರಿಂದ ಪರಿಸರ ಉಳಿಯುತಿತ್ತು. ಈಗ ನೆಲೆಸಿರುವ ಕಲುಷಿತ ವಾತಾರಣಕ್ಕೆ ಹೆದರಿ ಅವರು ಹೊರಗಡೆ ಕಾಣಿಸುತ್ತಿಲ್ಲ. ಮಠಗಳಲ್ಲಿರುವ ಮರಿಗಳು (ಶಿಷ್ಯಂದಿರು) ಅವರ ಕೆಲಸ ಮಾಡಲಿ. ಕನಿಷ್ಠ ದೇಶಸೇವೆಯಾದರೂ ಆಗುತ್ತದೆ' ಎಂದರು.

'ಜಾತ್ರೆಗಳಲ್ಲಿ ಮುಸ್ಲಿಮರನ್ನು ನಿಷೇಧಿಸುವ ಮೂಲಕ ಬಡವರ ಹೊಟ್ಟೆಗೆ ಒಡೆಯಲಾಗಿದೆ. ಧರ್ಮದ ಮುಖವಾಡದಲ್ಲಿ ಅಧರ್ಮವೇ ನಿರ್ಲಜ್ಜವಾಗಿ ಕುಣಿದು ಕುಪ್ಪಳಿಸುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮಾಂಸ ತಿನ್ನದವರೇ ಮಾಂಸ ಕತ್ತರಿಸುವುದರ ಬಗ್ಗೆ ಹೆಚ್ಚು ಯಕ್ಷಗಾನ ಮಾಡುತ್ತಿದ್ದಾರೆ. ಹಾಗೆ ಕತ್ತರಿಸಬಾರದು ಹೀಗೆ ಕತ್ತರಿಸಬಾರದು ಎಂದು ಅಪ್ಪಣೆ ಕೊಡಿಸಲು ಇವರು ಯಾರು' ಎಂದು ಪ್ರಶ್ನಿಸಿದ ಅವರು, 'ತಿನ್ನೋದೆ ಪ್ರಾಣಿ ವಧೆ ಮಾಡಿ, ಮಾನವತೆ ಪ್ರಶ್ನೆ ಎಲ್ಲಿ' ಎಂದರು.

'ಹಿಜಾಬ್ ಕುರಿತ ತೀರ್ಪಿಗೆ ವಿರುದ್ಧವಾಗಿ ಈಚೆಗೆ ಮುಸ್ಲಿಂ ಸಂಘಟನೆಗಳ ಒಕ್ಕೂಟ ಮಾಡಿದ ಬಂದ್ ನಾಡಿಗೆ ಮಾದರಿಯಾಗಿತ್ತು' ಎಂದು ಹೇಳಿದರು. ಕೆ.ಜಿ.ಕೊಪ್ಪಲು, ವಿವಿಧೆಡೆ ಇರುವ ಮುಸ್ಲಿಂ ಸಮುದಾಯದ ವರ್ತಕರಿಂದ ಹಲವರು ಮಾಂಸ ಖರೀದಿಸಿದರು.

ರಥೋತ್ಸವ ಯುಗಾದಿ ದಿನ ಶನಿವಾರ ಆಂಧ್ರಪ್ರದೇಶದ ನಂದ್ಯಾಲ ಜಿಲ್ಲೆಯ ಶ್ರೀಶೈಲದಲ್ಲಿ ನಡೆದ ಮಲ್ಲಿಕಾರ್ಜುನಸ್ವಾಮಿ ರಥೋತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು

ಹಿಂದೂ- ಮುಸ್ಲಿಂ ಜೊತೆಗೂಡಿ ಆಚರಣೆ

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ): ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಮುಂಭಾಗ ಹಿಂದೂ ಮತ್ತು ಮುಸ್ಲಿಮರು ಜೊತೆಗೂಡಿ ಬೇವು -ಬೆಲ್ಲ ಮತ್ತು ಹೋಳಿಗೆ ಹಂಚಿ ಯುಗಾದಿ ಹಬ್ಬವನ್ನು ಆಚರಿಸಿದರು.

ಪ್ರಗತಿಪರ ಸಂಘಟನೆಗಳು 'ಸಹಬಾಳ್ವೆ ಸಂಭ್ರಮಿಸೋಣ, ಸೌಹಾರ್ದ ಯುಗಾದಿ ಆಚರಿಸೋಣ' ಕಾರ್ಯಕ್ರಮ ಆಯೋಜಿಸಿದ್ದವು.

'ಮುಸ್ಲಿಂ ಸಮುದಾಯದ ಮುಖಂಡರಿಗೆ ಹಿಂದೂ ಸಮಾಜದ ಮುಖಂಡರು ಬೇವು,ಬೆಲ್ಲ ಮತ್ತು ಹೋಳಿಗೆ ತಿನ್ನಿಸಿ 'ನಮ್ಮಲ್ಲಿ ಭೇದ ಭಾವ ಇಲ್ಲ, ನಾವೆಲ್ಲ ಭಾರತೀಯರು' ಎಂದು ಘೋಷಣೆ ಕೂಗಿದರು.

'ಸಮಾಜದಲ್ಲಿ ಧರ್ಮಗಳ ನಡುವೆ ವಿಷಬೀಜ ಬಿತ್ತಿ ಕೋಮು ಸೌಹಾರ್ದ ಕೆಡಿಸುವ ಕಿಡಿಗೇಡಿಗಳಿಂದ ದೂರ ಇರಬೇಕು' ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ದೇವಿ ಸಲಹೆ ನೀಡಿದರು.

ಮಳವಳ್ಳಿ ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಮುಂಭಾದಲ್ಲಿ ಹಿಂದೂಮುಸ್ಲಿಂ ಮುಖಂಡರು ಹಮ್ಮಿಕೊಂಡಿದ್ದ 'ಸಹಬಾಳ್ವೆಯನ್ನು ಸಂಭ್ರಮಿಸೋಣ ಸೌಹಾರ್ದ ಯುಗಾದಿ ಆಚರಿಸೋಣ' ಕಾರ್ಯಕ್ರಮದಲ್ಲಿ ಮುಸ್ಲಿಂ ಮುಖಂಡರಿಗೆ ಹಿಂದೂ ಮುಖಂಡರು ಬೇವು ಬೆಲ್ಲ ಮತ್ತು ಹೋಳಿಗೆ ನೀಡಿದರು

ಜಾತ್ರೆಯಲ್ಲಿ ಹಿಂದೂ–ಮುಸ್ಲಿಂ ಸೌಹಾರ್ದ

ಹೊಳೆಹೊನ್ನೂರು: ಯುಗಾದಿ ಹಬ್ಬದಿಂದ ಮೂರು ದಿನಗಳ ಕಾಲ ನಡೆಯುವ ಸಮೀಪದ ಕೂಡ್ಲಿಯ ಸಂಗಮೇಶ್ವರ ಜಾತ್ರೆಯಲ್ಲಿ ಮುಸ್ಲಿಮರಿಗೆ ಅಂಗಡಿ ಹಾಕಲು ಅವಕಾಶ ನೀಡಲಾಗಿದೆ.

ಜಾತ್ರೆ ನಡೆಯುವ ಸ್ಥಳದಲ್ಲಿನ ಪಾರ್ಕಿಂಗ್ ಜಾಗ ಮುಸ್ಲಿಮರಿಗೆ ಸೇರಿದ್ದು, ಜಾತ್ರೆಗಾಗಿ ಪಾರ್ಕಿಂಗ್ ಜಾಗವನ್ನು ಬಿಟ್ಟುಕೊಟ್ಟು ಮುಸ್ಲಿಮರು ಸೌಹಾರ್ದ ಮೆರೆದಿದ್ದಾರೆ.

ಮೊದಲು ಜಾತ್ರೆಯಲ್ಲಿ ಅಂಗಡಿ ಹಾಕಲು ಮುಸ್ಲಿಮರಿಗೆ ಅವಕಾಶ ನಿರಾಕರಿಸಲಾಗಿತ್ತು. ಬಳಿಕ ಎರಡೂ ಸಮುದಾಯಗಳ ಮುಖಂಡರು ಪರಸ್ಪರ ಮಾತುಕತೆ ನಡೆಸಿ ವಿವಾದ ಬಗೆಹರಿಸಿಕೊಂಡಿದ್ದಾರೆ.

ಮುಸ್ಲಿಮರು ಪಾರ್ಕಿಂಗ್ ಜಾಗ ಬಿಟ್ಟುಕೊಟ್ಟರೆ, ಜಾತ್ರೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ವ್ಯಾಪಾರಕ್ಕೆ ಅವಕಾಶ ನೀಡಿ ಸೌಹಾರ್ದ ಮೆರೆಯಲಾಗಿದೆ.

'ಹಿಂದೂ ಸಂಘಟನೆ ಮಾಡ್ತಿರೋದು ಸರಿ ಇದೆ'

ನಿಪ್ಪಾಣಿ (ಬೆಳಗಾವಿ ಜಿಲ್ಲೆ): 'ಹಲಾಲ್ ಮತ್ತು ಜಟ್ಕಾ ಕಟ್ ಕುರಿತು ನನಗೆ ಅಷ್ಟೊಂದು ಗೊತ್ತಿಲ್ಲ. ಆ ಬಗ್ಗೆ ತಿಳಿದುಕೊಂಡು ನಂತರ ಮುಖ್ಯಮಂತ್ರಿ ಜೊತೆಗೆ ಚರ್ಚಿಸುವೆ' ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹಲಾಲ್ ಕಟ್ ಮುಸ್ಲಿಂ ದೇವರಿಗೆ ಅರ್ಪಣೆ ಮಾಡುತ್ತಾರೆ ಎಂದು ನಮಗೆ ಗೊತ್ತಾಗಿದೆ. ಹಿಂದೂಪರ ಸಂಘಟನೆಗಳು ಮಾಡ್ತಿರೋದು ಸರಿ ಇದೆ' ಎಂದು ಪ್ರತಿಕ್ರಿಯಿಸಿದರು. 'ವಿಶ್ವ ಹಿಂದೂ ಪರಿಷತ್ ಸೇರಿದಂತೆ ಕೆಲ ಹಿಂದೂ ಸಂಘಟನೆಗಳು ಹಲಾಲ್ ಕಟ್ ನಿಷೇಧಿಸಲು ಒತ್ತಾಯಿಸುತ್ತಿವೆ. ಮುಖ್ಯಮಂತ್ರಿ ಹಾಗೂ ಹಿರಿಯ ಸಚಿವರು ಆ ಕುರಿತು ಚರ್ಚಿಸುವರು. ಹಿಂದೂಪರ ಸಂಘಟನೆಗಳು ಒತ್ತಾಯಿಸುತ್ತಿರುವ ಜಟ್ಕಾ ಕಟ್ ಜಾರಿಗೆ ತರುವ ನಿಟ್ಟಿನಲ್ಲಿ ಚಿಂತಿಸಲಾಗುವುದು' ಎಂದರು.

'ಮುಸ್ಲಿಂ ಪ್ರಧಾನಿಯಾದರೆ ಶೇ 50 ಹಿಂದೂಗಳು ಇಸ್ಲಾಂಗೆ'

ನವದೆಹಲಿ (ಪಿಟಿಐ): 'ದೇಶದಲ್ಲಿ ಒಂದು ವೇಳೆ ಮುಸ್ಲಿಂ ವ್ಯಕ್ತಿ ಪ್ರಧಾನಿಯಾದರೆ ಮುಂದಿನ 20 ವರ್ಷಗಳಲ್ಲಿ ದೇಶದ ಶೇ 50ರಷ್ಟು ಹಿಂದೂಗಳು ಮುಸ್ಲಿಮರಾಗಿ ಮತಾಂತರಗೊಳ್ಳಲಿದ್ದಾರೆ' ಎಂದು ದಾಸ್ನಾ ದೇವಿ ದೇವಸ್ಥಾನದ ಪ್ರಧಾನ ಅರ್ಚಕ ಯತಿ ನರಸಿಂಗಾನಂದ ಭಾನುವಾರ ಹೇಳಿಕೆ ನೀಡಿ, ಹೊಸ ವಿವಾದ ಹುಟ್ಟುಹಾಕಿದ್ದಾರೆ.

ದೆಹಲಿ ಆಡಳಿತದ ಅನುಮತಿ ಪಡೆಯದ 'ಹಿಂದೂ ಮಹಾಪಂಚಾಯತ್' ಅನ್ನು ಉದ್ದೇಶಿಸಿ ಮಾತನಾಡಿದ ಅವರು, ಹಿಂದೂಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಡಲು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳಬೇಕೆಂದು ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ.

ಈ ಹಿಂದೆ ಹರಿದ್ವಾರ ಮತ್ತು ದೆಹಲಿಯ ಜಂತರ್ ಮಂತರ್‌ನಲ್ಲಿ ಮುಸ್ಲಿಂ ವಿರೋಧಿ ಘೋಷಣೆಗಳನ್ನು ಕೂಗಿದ್ದ ಗುಂಪು ಇಲ್ಲಿನ ಬುರಾರಿ ಮೈದಾನದಲ್ಲಿ ಮಹಾಪಂಚಾಯತ್ ಅನ್ನು ಆಯೋಜಿಸಿತ್ತು. ಹಲವು ಮಂದಿ ಹಿಂದೂ ಪ್ರಮುಖ ನಾಯಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನರಸಿಂಹಾನಂದ ಅವರು ಹರಿದ್ವಾರದಲ್ಲಿ ದ್ವೇಷ ಭಾಷಣ ಮಾಡಿದ ಪ್ರಕರಣದಲ್ಲಿ ಆರೋಪಿಯಾಗಿದ್ದು, ಸದ್ಯ ಜಾಮೀನಿನ ಮೇಲೆ ಹೊರಗಿದ್ದಾರೆ.

'2029 ಅಥವಾ 2034 ಅಥವಾ 2039ರಲ್ಲಿ ಮುಸ್ಲಿಂ ವ್ಯಕ್ತಿ ಪ್ರಧಾನಿಯಾಗಲಿದ್ದಾರೆ. ಒಮ್ಮೆ ಮುಸ್ಲಿಂ ಪ್ರಧಾನಿಯಾದರೆ, ಶೇ 50 ಹಿಂದೂಗಳು ಇಸ್ಲಾಂಗೆ ಮತಾಂತರವಾಗಲಿದ್ದಾರೆ. ಶೇ 40ರಷ್ಟು ಜನರು ಕೊಲ್ಲಲ್ಪಡಲಿದ್ದಾರೆ. ಉಳಿದ ಶೇ 10ರಷ್ಟು ಜನರು ಮುಂದಿನ 20 ವರ್ಷಗಳಲ್ಲಿ ನಿರಾಶ್ರಿತರ ಶಿಬಿರಗಳಲ್ಲಿ ಅಥವಾ ಪಾಶ್ಚಾತ್ಯ ದೇಶಗಳನ್ನು ಸೇರಿಕೊಳ್ಳಲಿದ್ದಾರೆ' ಎಂದು ನರಸಿಂಗಾನಂದ ಹೇಳಿದ್ದಾರೆ.

ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಶನಿವಾರ ಅಹಮದಾಬಾದ್‌ನಲ್ಲಿ ರೋಡ್ ಷೋ ನಡೆಸಿದರು

–ಎಎಫ್‌ಪಿ ಚಿತ್ರ

ಗುಜರಾತ್‌ನಲ್ಲಿ ಎಎಪಿ ರೋಡ್ ಷೋ ಒಂದು ಅವಕಾಶ ಕೊಡಿ: ಕೇಜ್ರಿವಾಲ್

ಅಹಮದಾಬಾದ್ (ಪಿಟಿಐ): ಪಂಜಾಬ್‌ನಲ್ಲಿ ಯಶಸ್ವಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಆಮ್ ಆದ್ಮಿ ಪಕ್ಷ (ಎಎಪಿ) ಈಗ ಗುಜರಾತ್ ಅನ್ನು ಮುಂದಿನ ಗುರಿಯಾಗಿಸಿಕೊಂಡಿದೆ. 'ಎಎಪಿಗೆ ಒಂದು ಅವಕಾಶ ಕೊಡಿ' ಎಂದು ಗುಜರಾತ್ ಜನರಿಗೆ ಮನವಿ ಮಾಡಿದೆ.

ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಶನಿವಾರ ಅಹಮದಾಬಾದ್‌ನಲ್ಲಿ 'ತಿರಂಗಾ ಗೌರ್ ಯಾತ್ರಾ' ಹೆಸರಿನಲ್ಲಿ ರೋಡ್ ಷೋ ನಡೆಸುವ ಮೂಲಕ ಚುನಾವಣಾ ಸಿದ್ಧತೆಗೆ ಚಾಲನೆ ನೀಡಿದರು.

ಬಿಜೆಪಿ ವಿರುದ್ಧ ಹರಿಹಾಯ್ದ ಅವರು, ಪ್ರಧಾನಿ ಮೋದಿ ತವರು ರಾಜ್ಯವಾದ ಗುಜರಾತ್‌ನಲ್ಲಿ ಭ್ರಷ್ಟಾಚಾರಕ್ಕೆ ಅಂತ್ಯವಾಡುವ ವಾಗ್ದಾನ ಮಾಡಿದರು. 'ನಾವು ಇಲ್ಲಿಗೆ ಬಿಜೆಪಿ ಅಥವಾ ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಬಂದಿಲ್ಲ. ರಾಜ್ಯದಲ್ಲಿ ಭ್ರಷ್ಟಾಚಾರವನ್ನು ಕೊನೆಗಾಣಿಸಬೇಕು ಮತ್ತು ಇಲ್ಲಿನ ಜನರನ್ನು ಗೆಲ್ಲಿಸಬೇಕು ಎಂದು ಬಂದಿದ್ದೇವೆ' ಎಂದು ಕೇಜ್ರಿವಾಲ್ ಹೇಳಿದರು.

'ಬಿಜೆಪಿಗೆ 25 ವರ್ಷ ಸಮಯ ಕೊಟ್ಟಿದ್ದೀರಿ. ಈಗ ನಮಗೆ ಒಂದು ಅವಕಾಶ ಕೊಡಿ. ದೆಹಲಿ, ಪಂಜಾಬ್‌ನಲ್ಲಿ ಅವಕಾಶ ನೀಡಿದ್ದೀರಿ. ಈಗ ಗುಜರಾತ್‌ನಲ್ಲೂ ಕೊಡಿ. ರಾಜ್ಯದ 6.5 ಕೋಟಿ ಜನರು ಒಟ್ಟುಗೂಡಿ ರಾಜ್ಯವನ್ನು ಮುನ್ನಡೆಸೋಣ' ಎಂದು ಕರೆ ನೀಡಿದರು.

ರಾಜ್ಯದಲ್ಲಿ ಬಿಜೆಪಿ 25 ವರ್ಷದಿಂದ ಅಧಿಕಾರದಲ್ಲಿದೆ. ಅದು, ಸಾಕಷ್ಟು ದೀರ್ಘ ಅವಧಿ. ಆದರೆ, ಭ್ರಷ್ಟಾಚಾರ ಕೊನೆಗೊಂಡಿಲ್ಲ. ಬಿಜೆಪಿಯ ಅಹಂಕಾರ ಹೆಚ್ಚಿದೆ. ಈಗ ಎಎಪಿಗೆ ಒಂದು ಅವಕಾಶ ಕೊಡಿ. ಇಷ್ಟವಾಗದಿದ್ದರೆ, ಬದಲಿಸಿ ಎಂದು ಕೋರಿದರು.

ನನಗೆ ರಾಜಕೀಯ ಗೊತ್ತಿಲ್ಲ. ಆದರೆ, ಭ್ರಷ್ಟಾಚಾರ ಕೊನೆಗಾಣಿಸುವುದು ಗೊತ್ತಿದೆ. ದೆಹಲಿಯಲ್ಲಿ ಭ್ರಷ್ಟಾಚಾರ ಅಂತ್ಯವಾಗಿದೆ, ಉಚಿತವಾಗಿ ವಿದ್ಯುತ್ ಸಿಗುತ್ತಿದೆ. ಪಂಜಾಬ್‌ನಲ್ಲಿ ಸರ್ಕಾರ ರಚನೆಯಾದ 10 ದಿನದಲ್ಲಿಯೇ ಈ ಯತ್ನ ಆರಂಭವಾಗಿದೆ ಎಂದರು.

'ಅಣ್ಣಾಮಲೈ ವಿವಿ ದೂರಶಿಕ್ಷಣದ ಕೋರ್ಸ್‌ಗಳಿಗೆ ಸೇರಬೇಡಿ'

ನವದೆಹಲಿ (ಪಿಟಿಐ): ದೂರಶಿಕ್ಷಣ ಕೋರ್ಸ್‌ಗಳಿಗೆ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅನುಮೋದನೆ ಪಡೆಯದ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದ ದೂರಶಿಕ್ಷಣದ ಯಾವುದೇ ಕೋರ್ಸ್‌ಗಳಿಗೆ ಸೇರಬೇಡಿ ಎಂದು ಆಯೋಗವು ಮತ್ತೊಮ್ಮೆ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದೆ.

ತನ್ನಲ್ಲಿನ ದೂರಶಿಕ್ಷಣ ಮಾದರಿಯ ಕೋರ್ಸ್‌ಗಳಿಗೆ ಯುಜಿಸಿ ಅನುಮೋದನೆಯ ಯಾವುದೇ ಅವಶ್ಯಕತೆ ಇಲ್ಲ ಎಂದು ವಿಶ್ವವಿದ್ಯಾಲಯ ಹೇಳುತ್ತಿದೆ. ಆದರೆ ಯುಜಿಸಿ ಅನುಮೋದನೆ ಇಲ್ಲದೆ ಪಡೆಯುವ ಕೋರ್ಸ್‌ಗಳಿಗೆ ಯಾವುದೇ ಮಾನ್ಯತೆ ಇಲ್ಲ ಎಂದು ಅದು ಪುನರುಚ್ಚರಿಸಿದೆ.

'ಅಣ್ಣಾಮಲೈ ವಿಶ್ವವಿದ್ಯಾಲಯವು ಯುಜಿಸಿಯು ಮುಕ್ತ ಮತ್ತು ದೂರಶಿಕ್ಷಣದ 2017 ಮತ್ತು 2020ರ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿದ ಎಲ್ಲಾ ಷರತ್ತುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಯಾವುದೇ ಅನುಮೋದನೆಯಿಲ್ಲದೆ ದೂರ ಶಿಕ್ಷಣ ಕೋರ್ಸ್‌ಗಳನ್ನು ನೀಡುತ್ತಿದೆ. ಮುಕ್ತ ಮತ್ತು ದೂರಶಿಕ್ಷಣ (ಒಡಿಎಲ್) ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಹೇಳಿದರು.

ನಿಯಮಗಳ ಪ್ರಕಾರ, ಆಯೋಗ ಮಾನ್ಯತೆ ನೀಡದ ಹೊರತು ಯಾವುದೇ ಉನ್ನತ ಶಿಕ್ಷಣ ಸಂಸ್ಥೆಯು ದೂರ ಶಿಕ್ಷಣದ ಕೋರ್ಸ್‌ಗಳನ್ನು ನೀಡಲು ಸಾಧ್ಯವಿಲ್ಲ ಹಾಗೂ ವಿದ್ಯಾರ್ಥಿಗಳಿಗೆ ಕೋರ್ಸ್‌ಗಳ ಪ್ರವೇಶಾತಿ ನೀಡುವಂತಿಲ್ಲ.

'ಅಣ್ಣಾಮಲೈ ವಿಶ್ವವಿದ್ಯಾಲಯಕ್ಕೆ 2014–15ರ ಶೈಕ್ಷಣಿಕ ವರ್ಷದವರೆಗೆ ಮಾತ್ರ ದೂರಶಿಕ್ಷಣಕ್ಕೆ ಮಾನ್ಯತೆ ನೀಡಲಾಗಿತ್ತು. ನಂತರದಲ್ಲಿ ಈ ಹಂತದಲ್ಲಿ ಯಾವುದೇ ಕೋರ್ಸ್‌ಗಳನ್ನು ನೀಡಲು ಯುಜಿಸಿ ಮಾನ್ಯತೆ ನೀಡಿಲ್ಲ. ಈ ಕೋರ್ಸ್‌ಗಳನ್ನು ಪಡೆದ ವಿದ್ಯಾರ್ಥಿಗಳು ಎದುರಿಸುವ ಯಾವುದೇ ಸಮಸ್ಯೆಗಳಿಗೆ ವಿಶ್ವವಿದ್ಯಾಲಯ ಜವಾಬ್ದಾರಿಯಾಗಿದೆ' ಎಂದು ರಜನೀಶ್ ಹೇಳಿದರು.

ಯುಪಿಎ ಅಥವಾ ಬಿಜೆಪಿ ವಿರೋಧಿ ರಂಗದ ನೇತೃತ್ವ ಬೇಡ –ಶರದ್ ಪವಾರ್

'ಬಿಜೆಪಿಗೆ ಪರ್ಯಾಯ –ಕಾಂಗ್ರೆಸ್ ಕೈಬಿಡಲಾಗದು'

ಪುಣೆ (ಪಿಟಿಐ): 'ಬಿಜೆಪಿಗೆ ವಿರುದ್ಧವಾದ ಯಾವುದೇ ರಂಗವನ್ನು ಮುನ್ನಡೆಸುವುದಿಲ್ಲ. ಸಂಯುಕ್ತ ಪ್ರಗತಿಪರ ಮೈತ್ರಿಕೂಟದ (ಯುಪಿಎ) ಅಧ್ಯಕ್ಷರಾಗುವ ಉದ್ದೇಶವೂ ಇಲ್ಲ' ಎಂದು ಹಿರಿಯ ಮುಖಂಡ, ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.



ಶರದ್ ಪವಾರ್

ಭಾನುವಾರ ಕೊಲ್ಹಾಪುರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಬಿಜೆಪಿಗೆ ಪರ್ಯಾಯವಾಗಿ ಕೇಂದ್ರದಲ್ಲಿ ರಚನೆಯಾಗುವ ಯಾವುದೇ ರಂಗದಿಂದ ಕಾಂಗ್ರೆಸ್ ಪಕ್ಷವನ್ನು ಕೈಬಿಡಲಾಗದು' ಎಂದು ಪ್ರತಿಪಾದಿಸಿದರು.

'ಬಿಜೆಪಿಗೆ ವಿರುದ್ಧವಾಗಿ ವಿವಿಧ ಪಕ್ಷಗಳನ್ನು ಒಳಗೊಂಡ ಯಾವುದೇ ರಂಗದ ನೇತೃತ್ವವನ್ನು ನಾನು ವಹಿಸುವುದಿಲ್ಲ. ಯುಪಿಎ ಅಧ್ಯಕ್ಷ ಆಗಬೇಕು ಎಂದು ಈಚೆಗೆ ಪಕ್ಷದ ಯುವ ಘಟಕ ನಿರ್ಣಯ ಅಂಗೀಕರಿಸಿದೆ. ನನಗೆ ಆ ಬಗ್ಗೆ ಆಸಕ್ತಿ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಆದರೆ, ಬಿಜೆಪಿಗೆ ಪರ್ಯಾಯವಾಗಿ ಯಾವುದೇ ರಂಗ ಸ್ಥಾಪಿಸುವ, ಬೆಳೆಸುವ ಯತ್ನಕ್ಕೆ ಪೂರ್ಣ ಸಹಕಾರ, ಬೆಂಬಲ ಇರಲಿದೆ. ಈಗಿನ ಸಂದರ್ಭದಲ್ಲಿ ವಿರೋಧ ಪಕ್ಷಗಳು ಒಗ್ಗೂಡಬೇಕಿದೆ. ಅದೇ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಕಡೆಗಣಿಸಬೇಕಿದೆ' ಎಂದು ಹೇಳಿದರು.

ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸದ್ಯ ಪಶ್ಚಿಮ ಬಂಗಾಳದಲ್ಲಿ ಪ್ರಬಲವಾಗಿದೆ. ಪ್ರಾದೇಶಿಕ ಪಕ್ಷಗಳು ಕೂಡಾ ಆಯಾಯ ರಾಜ್ಯಗಳಲ್ಲಿ ಪ್ರಬಲವಾಗಿವೆ. ಕಾಂಗ್ರೆಸ್ ಪಕ್ಷ ಪ್ರಸ್ತುತ ಅಧಿಕಾರದಲ್ಲಿ ಇಲ್ಲದಿದ್ದರೂ ದೇಶವ್ಯಾಪಿ ಅಸ್ತಿತ್ವವನ್ನು ಹೊಂದಿದೆ. ಹೀಗಾಗಿ, ಪರ್ಯಾಯವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಆ ಪಕ್ಷವನ್ನು ಪರಿಗಣಿಸಬೇಕು ಎಂದು ಪ್ರತಿಪಾದಿಸಿದರು.

'ಆರೋಗ್ಯಯುತ ಪ್ರಜಾಪ್ರಭುತ್ವಕ್ಕಾಗಿ ಪ್ರಬಲವಾದ ವಿರೋಧಪಕ್ಷವೂ ಅಗತ್ಯ. ಒಂದೇ ಪಕ್ಷ ಬಲಶಾಲಿಯಾಗಿದ್ದರೆ ಅದು ಪುಟಿನ್‌ನಂತೆ (ರಷ್ಯಾದ ಅಧ್ಯಕ್ಷ) ಆಗುತ್ತದೆ. ಪುಟಿನ್ ಮತ್ತು ಚೀನಾ ಅಧ್ಯಕ್ಷ ತಾವು ಜೀವಂತವಾಗಿ ಇರುವವರೆಗೂ ಆಯಾಯ ದೇಶವನ್ನು ಮುನ್ನಡೆಸುವರು. ಭಾರತವು ಅಂತಹ ಪುಟಿನ್ ಹೊಂದುವುದಿಲ್ಲ ಎಂದು ಭಾವಿಸುತ್ತೇನೆ' ಎಂದು ಪವಾರ್ ಹೇಳಿದರು.

'ತನಿಖಾ ಸಂಸ್ಥೆಗಳ ದುರ್ಬಳಕೆ ಆಗುತ್ತಿದೆ ಎಂಬ ಬಗ್ಗೆ ಕೇಂದ್ರ ಸರ್ಕಾರ ಉತ್ತರಿಸಬೇಕಿದೆ' ಎಂದು ಒತ್ತಾಯಿಸಿದ ಅವರು, 'ಹಣದುಬ್ಬರ ಸದ್ಯ ದೇಶದ ಮುಂದಿರುವ ದೊಡ್ಡ ಸಮಸ್ಯೆ. ಬಿಜೆಪಿ ಆಡಳಿತದಲ್ಲಿ ದಿನಬಿಟ್ಟು ದಿನ ಇಂಧನ ದರ ಏರಿಕೆಯಾಗುತ್ತಿದೆ. ಇದರ ಪರಿಣಾಮ ಜನಸಾಮಾನ್ಯರ ಮೇಲಾಗುತ್ತಿದೆ. ಹಿಂದೆ, ಇಂಧನ ದರ ಏರಿಕೆ ಆಗುತ್ತಿರಲಿಲ್ಲ ಎಂದಲ್ಲ. ಈಗ ನಿತ್ಯವೂ ಆಗುತ್ತಿದೆ' ಎಂದರು.

'ಗುಜರಾತ್‌ನ ಸ್ಥಿತಿ ಕೆಟ್ಟದಾಗಿತ್ತು'

ಪುಣೆ (ಪಿಟಿಐ): 'ಕಾಶ್ಮೀರ್ ಫೈಲ್ಸ್' ಚಲನಚಿತ್ರವು ವಾಸ್ತವಾಂಶಗಳನ್ನು ಆಧರಿಸಿದ್ದಲ್ಲ. ಆದರೆ, ಅದು ದ್ವೇಷ ಮತ್ತು ವರ್ಣಭೇದಕ್ಕೆ ಪ್ರಚೋದನೆ ನೀಡುತ್ತಿದೆ. ದೇಶ ಮುನ್ನಡೆಸುವರೇ ಚಿತ್ರ ಬೆಂಬಲಿಸುತ್ತಾರೆ, ಅವರ ಪಕ್ಷದವರೇ ಉಚಿತವಾಗಿ ಟಿಕೆಟ್ ಹಂಚುತ್ತಾರೆ ಎಂದರೆ ಅದರ ಉದ್ದೇಶ, ಜನರ ವಿಭಜನೆ ಮತ್ತು ರಾಜಕೀಯ ಲಾಭ ಪಡೆಯುವುದೇ ಆಗಿದೆ' ಎಂದು ಶರದ್ ಪವಾರ್ ಟೀಕಿಸಿದರು.

ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರ ಹೆಸರನ್ನು ಉಲ್ಲೇಖಿಸದೆಯೇ ಅವರು, 'ಗುಜರಾತ್ ರಾಜ್ಯದಲ್ಲಿನ ಪರಿಸ್ಥಿತಿಯು ಆಗ ಕಾಶ್ಮೀರ ಕಣಿವೆಯದಕ್ಕಿಂತಲೂ ಕೆಟ್ಟದಾಗಿತ್ತು. ಆ ಸಂದರ್ಭದಲ್ಲಿ (ಗೋಧ್ರಾ ಗಲಭೆ) ಅನೇಕ ಮಂದಿ ಪ್ರಾಣ ಕಳೆದುಕೊಂಡರು. ಆಗ ಗುಜರಾತ್ ಸರ್ಕಾರದ ಮುಖ್ಯಸ್ಥರಾಗಿದ್ದವರು ಇದಕ್ಕೆ ವಿವರಣೆ ನೀಡಿದ್ದನ್ನು ನಾನಂತೂ ಕೇಳಿಲ್ಲ' ಎಂದು ಪ್ರತಿಕ್ರಿಯಿಸಿದರು.

ಅಪಘಾತ, ನ್ಯಾಯಾಧೀಶ ಸಾವು

ಛತ್ತರ್‌ಪುರ(ಮಧ್ಯ ಪ್ರದೇಶ): ಇಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಜಿಲ್ಲಾ ನ್ಯಾಯಾಧೀಶರೊಬ್ಬರು ಮೃತಪಟ್ಟಿದ್ದಾರೆ. ಅವರ ಜತೆಗಿದ್ದ ಮತ್ತೊಬ್ಬ ನ್ಯಾಯಾಧೀಶ ಮತ್ತು ಕಾರು ಚಾಲಕ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಛತ್ತರ್‌ಪುರಕ್ಕೆ ಜಿಲ್ಲಾ ನ್ಯಾಯಾಧೀಶರಾಗಿ ನಿಯೋಜನೆಗೊಂಡಿದ್ದ ರಿಷಿ ತಿವಾರಿ ಮೃತರು. ನ್ಯಾಯಾಧೀಶ ತಿವಾರಿ ಹಾಗೂ ಗಾಯಗೊಂಡಿರುವ ಸಹೋದ್ಯೋಗಿ ನ್ಯಾಯಾಧೀಶ ಆಶಿಸ್ ಮಥೋರಿಯಾ ಅವರು ಕಾರಿನಲ್ಲಿ ಪ್ರಯಾಣಿಸುತ್ತಿದ್ದರು.

ಸಾಮೂಹಿಕ ಅತ್ಯಾಚಾರ–ಬಾಲಕಿ ಆತ್ಮಹತ್ಯೆ

ಚಾಕ್ರಿದಾದ್ರಿ (ಹರಿಯಾಣ): ಇಲ್ಲಿನ ಗ್ರಾಮವೊಂದರಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ 17 ವರ್ಷದ ಬಾಲಕಿಯೊಬ್ಬಳು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ ಈ ಬಾಲಕಿ 12ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಆಕೆ ಮನೆಯಲ್ಲಿ ಏಕಾಂಗಿಯಾಗಿ ಇರುವ ವೇಳೆ ಪಕ್ಕದ ಮನೆಯ ಯುವಕ ಮತ್ತು ಅದೇ ಊರಿನ ಇಬ್ಬರು ಆರೋಪಿಗಳೊಂದಿಗೆ ಅಕೆಯನ್ನು ಅಪಹರಿಸಿ ಅತ್ಯಾಚಾರ ಎಸಗಿದ್ದಾನೆ. ಇದಾದ ಒಂದು ಗಂಟೆ ಬಳಿಕ ಆಕೆ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾರಿಸ್ಕಾ: ಮತ್ತೆ ಕಾಳ್ಗಿಚ್ಚು

ಜೈಪುರ (ಪಿಟಿಐ): ರಾಜಸ್ಥಾನದ ಸಾರಿಸ್ಕಾ ಹುಲಿ ಸಂರಕ್ಷಿತ ಅರಣ್ಯದಲ್ಲಿ ಭಾನುವಾರ ಸಂಜೆ ಮತ್ತೊಮ್ಮೆ ಕಾಳ್ಗಿಚ್ಚು ಕಾಣಿಸಿಕೊಂಡಿದೆ. ಅರಣ್ಯದ ತೆಹ್ಲಾ ಪ್ರದೇಶದಲ್ಲಿ ಬೆಂಕಿ ಕಾಣಿಸಿದೆ ಎಂದು ಅಲ್ವಾರ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಶಿಕ್ಷಣದಿಂದ ಜ್ಞಾನಿಯಾಗಬೇಕೇ ಹೊರತು ಅಹಂಕಾರಿಯಾಗಲ್ಲ

ವಿದ್ಯಾರ್ಥಿ ವೇತನ ಕೈಪಿಡಿ

ಎಐಸಿಟಿಇ ವರ್ಚುವಲ್ ಇಂಟರ್ನ್‌ಶಿಪ್ 2022

ಎಐಸಿಟಿಇ ವರ್ಚುವಲ್ ಇಂಟರ್ನ್‌ಶಿಪ್ 2022, ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್ (ಎಐಸಿಟಿಇ)ಯ ಉಪಕ್ರಮವಾಗಿದೆ. ಸಿಸ್ಕೊ ನೆಟ್‌ವರ್ಕಿಂಗ್ ಅಕಾಡೆಮಿ ಕಾರ್ಯಕ್ರಮದ ಮೂಲಕ ಸೈಬರ್ ಸುರಕ್ಷತೆ ಕುರಿತು 20,000 ಮಂದಿಗೆ ವರ್ಚುವಲ್ ಇಂಟರ್ನ್‌ಶಿಪ್ ಅವಕಾಶ ಕಲ್ಪಿಸುತ್ತಿದೆ.

ಅರ್ಹತೆ: ಬಿ.ಟೆಕ್ / ಬಿ.ಇ ಪದವಿ ಮತ್ತು ಯಾವುದೇ ಸಂಬಂಧಿತ ಕೌಶಲ ಮತ್ತು ಆಸಕ್ತಿಗಳೊಂದಿಗೆ ವಿಶೇಷತೆ ಹೊಂದಿರುವ ಅಭ್ಯರ್ಥಿಗಳಿಗೆ ಮುಕ್ತವಾಗಿದೆ. ಸಿಸ್ಕೊ ನೆಟ್‌ವರ್ಕಿಂಗ್ ಅಕಾಡೆಮಿಯಾಗಿರುವ ಯಾವುದೇ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವ 2ನೇ ಮತ್ತು 3ನೇ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳೂ ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ₹10,000 ಹಾಗೂ ವರ್ಚುವಲ್ ಪ್ರಮಾಣಪತ್ರ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 23, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/AEV7

ಎನ್‌ಎಎಸ್‌ಐ- ಯಂಗ್ ಸೈಂಟಿಸ್ಟ್ ಪ್ಲಾಟಿನಮ್ ಜುಬಿಲಿ ಅವಾರ್ಡ್ಸ್ 2022

ವಿವರ: ಎನ್‌ಎಎಸ್‌ಐ- ಯಂಗ್ ಸೈಂಟಿಸ್ಟ್ ಪ್ಲಾಟಿನಮ್ ಜುಬಿಲಿ ಅವಾರ್ಡ್ಸ್ 2022, 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಭಾರತೀಯ/ಸಾಗರೋತ್ತರ ಭಾರತದ ನಾಗರಿಕರಿಗೆ ನೀಡುವ ವಿದ್ಯಾರ್ಥಿವೇತನವಾಗಿದೆ.

ಅರ್ಹತೆ: ಭಾರತದಲ್ಲಿ ನಡೆಸಿದ ಸಂಶೋಧನೆಯ ಆಧಾರದ ಮೇಲೆ ಎನ್‌ಎಎಸ್‌ಐನಿಂದ ಗುರುತಿಸಲ್ಪಟ್ಟ ಎಸ್ ಅಂಡ್ ಟಿಯ ಯಾವುದೇ ಶಾಖೆಗಳಲ್ಲಿ ಗಮನಾರ್ಹ ಕೊಡುಗೆಗಳನ್ನು ನೀಡಿರುವ ಅಭ್ಯರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು. ಏಪ್ರಿಲ್ 15, 2022ಕ್ಕೆ ಅನುಗುಣವಾಗುವಂತೆ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಈ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 15, 2022

ಅರ್ಜಿ ಸಲ್ಲಿಕೆ ವಿಧಾನ: ಇ-ಮೇಲ್ ಮತ್ತು ಪೋಸ್ಟ್ ಮೂಲಕ. ವಿಳಾಸ: ಲಜಪತ್ ರಾಯ್ ರಸ್ತೆ, ಮುಮ್‌ಫರ್ಡ್‌ಗಂಜ್, ಪ್ರಯಾಗರಾಜ್, ಉತ್ತರ ಪ್ರದೇಶ- 211002 ಇ-ಮೇಲ್: nasi.allahabad1@gmail.com.

ಹೆಚ್ಚಿನ ಮಾಹಿತಿಗೆ: www.b4s.in/praja/NIY4

ಕೋರ್ಸ್ ಕಾರ್ನರ್

ಪಶುಸಂಗೋಪನಾ ಡಿಪ್ಲೊಮಾ

ಬೇದ್ರೆ ಮಂಜುನಾಥ

ಪಶುವೈದ್ಯರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಮತ್ತು ಪಶುಸಂಗೋಪನೆಯಲ್ಲಿ ನೆರವಾಗಲು ತಾಂತ್ರಿಕ ಕೌಶಲಯುಕ್ತ ಸಿಬ್ಬಂದಿ ರೂಪಿಸುವುದಕ್ಕಾಗಿ ಕೆಲವು ವರ್ಷಗಳ ಹಿಂದೆ ರಾಜ್ಯದ ವಿವಿಧ ಕಡೆಗಳಲ್ಲಿ ಪಶುಸಂಗೋಪನಾ (ಪಶುವೈದ್ಯಕೀಯ) ಡಿಪ್ಲೊಮಾ ಕೋರ್ಸ್ ಆರಂಭಿಸಲಾಗಿದೆ. ಇತ್ತೀಚೆಗೆ ಈ ಕೋರ್ಸ್‌ಗೆ ಬೇಡಿಕೆ ಹೆಚ್ಚುತ್ತಿದೆ.

ರಾಜ್ಯದ ಐದು ಕಡೆಗಳಲ್ಲಿರುವ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳಲ್ಲಿ ಈ ಡಿಪ್ಲೊಮಾ ಕೋರ್ಸ್ ಇದೆ. ಪ್ರತಿ ಪಾಲಿಟೆಕ್ನಿಕ್ ತನ್ನದೇ ಸಂಶೋಧನಾ ಕೇಂದ್ರವನ್ನು ಹೊಂದಿದೆ. ಪಶುಸಂಗೋಪನೆಯಲ್ಲಿ ಹೊಸ ತಳಿಗಳ ಸಂಶೋಧನೆ ಮತ್ತು ಪರಂಪರಾಗತ ತಳಿಗಳ ಅಭಿವೃದ್ಧಿಯಲ್ಲಿ ತೊಡಗಿಕೊಂಡಿವೆ.

ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ ತೇರ್ಗಡೆಯಾಗಿರುವ, 1 ರಿಂದ 10 ತರಗತಿವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರುವ 20 ವರ್ಷ ವಯೋಮಿತಿ ಮೀರಿರದ ಅಭ್ಯರ್ಥಿಗಳು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು.

ಎರಡು ವರ್ಷ ಅವಧಿ: ಈ ಪಶುಸಂಗೋಪನಾ ಡಿಪ್ಲೊಮಾ ಕೋರ್ಸ್ ಅವಧಿ ಎರಡು ವರ್ಷ. ಬೀದರ್‌ನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳು, ತಿಪಟೂರು ತಾಲ್ಲೂಕಿನ ಕೊನೆಹಳ್ಳಿ, ಶಿಗ್ಗಾಂವ ತಾಲ್ಲೂಕಿನ ಕುನ್ನೂರು, ಹಾಸನ ತಾಲ್ಲೂಕು ಕೋರವಂಗಲ ಕ್ರಾಸ್, ಗುಂಡ್ಲುಪೇಟೆ ತಾಲ್ಲೂಕು ಬರಗಿ ಹಾಗೂ ಶಹಾಪುರ ತಾಲ್ಲೂಕು ದೋರನಹಳ್ಳಿಯ ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಪಶುಸಂಗೋಪನಾ ಡಿಪ್ಲೊಮಾ ಕೋರ್ಸ್ ಕಲಿಸಲಾಗುತ್ತಿದೆ. ಪ್ರತಿ ಪಾಲಿಟೆಕ್ನಿಕ್‌ನಲ್ಲಿ 50 ಸೀಟುಗಳಿರುತ್ತವೆ.

ಮೆರಿಟ್-ಕಂ-ರೋಸ್ಟರ್ ಪದ್ಧತಿ ಆಧಾರದಲ್ಲಿ ನೇರ ಮೌಖಿಕ ಸಂದರ್ಶನವನ್ನು ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ನಡೆಸಲಾಗುತ್ತದೆ. ಪ್ರವೇಶ ಪಡೆದ ಎಲ್ಲಾ ಅಭ್ಯರ್ಥಿಗಳಿಗೆ ಮಾಸಿಕ ₹1000 ಶಿಷ್ಯವೇತನ ನೀಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ https://www.kvafsu.edu.in/kannada/course_diploma_ka.html ಜಾಲತಾಣ ಭೇಟಿ ಮಾಡಿ.

ಸಿಬಿಎಸ್‌ಇ – ಐಸಿಎಸ್‌ಇ ವ್ಯತ್ಯಾಸವೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್

1. ಐಸಿಎಸ್‌ಇ ಮತ್ತು ಸಿಬಿಎಸ್‌ಇ ಪಠ್ಯಕ್ರಮಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ. ನಮ್ಮ ಸಂಬಂಧಿಕರ ಹುಡುಗನೊಬ್ಬ 6 ನೇ ತರಗತಿಯವರೆಗೂ ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಓದಿದ್ದು, ಕಾರಣಾಂತರಗಳಿಂದ ಬೇರೆ ಸ್ಥಳಕ್ಕೆ ಹೋಗಬೇಕಾಗಿದೆ. ಅಲ್ಲಿರುವುದು ಐಸಿಎಸ್‌ಇ ಶಾಲೆ ಮಾತ್ರ. ಇವನನ್ನು ಐಸಿಎಸ್‌ಇ ಶಾಲೆಗೆ ಸೇರಿಸುವುದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಸಮಸ್ಯೆ ಆಗುತ್ತದೆಯೇ?.

ಹೆಸರು, ಊರು ತಿಳಿಸಿಲ್ಲ.

ಪೋಷಕರು ಪದೇ ಪದೇ ವರ್ಗಾವಣೆಯಾಗುವ ವೃತ್ತಿಯಲ್ಲಿದ್ದರೆ, ಅಂಥವರು ತಮ್ಮ ಮಕ್ಕಳನ್ನು ರಾಜ್ಯ ಪಠ್ಯಕ್ರಮದ ಬದಲು ಐಸಿಎಸ್‌ಇ(ಇಂಡಿಯನ್ ಕೌನ್ಸಿಲ್ ಆಫ್ ಸೆಕೆಂಡರಿ ಎಜುಕೇಷನ್) ಅಥವಾ ಸಿಬಿಎಸ್‌ಇ (ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ) ಹೆಚ್ಚು ಸಮಂಜಸವೆನಿಸುತ್ತದೆ. ರಾಜ್ಯ/ಸಿಬಿಎಸ್‌ಇ ಪಠ್ಯಕ್ರಮಗಳಿಗೆ ಹೋಲಿಸಿದರೆ ಐಸಿಎಸ್‌ಇ ಪಠ್ಯಕ್ರಮದಲ್ಲಿ ಗಣಿತ, ವಿಜ್ಞಾನದ ವಿಷಯಗಳ ಜೊತೆ ಭಾಷೆ, ಚರಿತ್ರೆ, ಭೂಗೋಳ, ಸಮಾಜ ವಿಜ್ಞಾನ, ಕಲೆ, ಸಾಹಿತ್ಯದಂತಹ ವಿಷಯಗಳಿಗೂ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ನೃತ್ಯ, ಸಂಗೀತ ಇತ್ಯಾದಿಯನ್ನೂ ಕಲಿಯುವ ಅವಕಾಶವಿರುತ್ತದೆ. ಈ ಕಾರಣಗಳಿಂದ, ಐಸಿಎಸ್‌ಇ ಹೆಚ್ಚು ಸಮಗ್ರ ಮತ್ತು ಪ್ರಾಯೋಗಿಕವೆನಿಸುತ್ತದೆ. ವಿದ್ಯಾರ್ಥಿಗಳು ರಾಜ್ಯ/ಸಿಬಿಎಸ್‌ಇ ಶಿಕ್ಷಣದಲ್ಲಿ ಪಡೆದಷ್ಟು ಅಂಕಗಳನ್ನು ಐಸಿಎಸ್‌ಇ ಪದ್ಧತಿಯಲ್ಲಿ ಪಡೆಯುವುದು ಕಷ್ಟ.

ಇನ್ನು, ಸಿಬಿಎಸ್‌ಇಯಲ್ಲಿ ಓದಿದವರು ಐಸಿಎಸ್‌ಇನಲ್ಲಿ ಮುಂದುವರಿಸುವ ಕುರಿತು ಕೇಳಿದ್ದೀರಿ. ಇದರಿಂದ ಯಾವುದೇ ಸಮಸ್ಯೆ ಆಗುವುದಿಲ್ಲ; ಆದರೆ, ಮುಂದಿನ ಶಿಕ್ಷಣದ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ಆ ವಿದ್ಯಾರ್ಥಿಗೆ ಹೆಚ್ಚುವರಿ ಬೋಧನೆಯ ಅಗತ್ಯವಿದೆಯೇ ಎಂದು ಪರಿಶೀಲಿಸುವುದು ಸೂಕ್ತ. ವಿದೇಶದಲ್ಲಿ ಐಸಿಎಸ್‌ಇ ಶಿಕ್ಷಣಕ್ಕೆ ಹೆಚ್ಚು ಮನ್ನಣೆ ಇದೆ. ಹಾಗಾಗಿ, ವಿದೇಶದಲ್ಲಿ ಉನ್ನತ ಶಿಕ್ಷಣವನ್ನು ಬಯಸುವ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಅನುಕೂಲಕರವಾಗಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.catalyzecenter.com/blog/2018/april/differences-between-CBSE-and-ICSE-curricula.html

2. ನಾನು ಬಿಎಸ್‌ಸಿ (ಬಯೋಟೆಕ್ನಾಲಜಿ) ಓದಿದ್ದೇನೆ. ಮುಂದೇನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಎಂಎಸ್‌ಸಿ ಮಾಡಿದರೆ ಉಪಯೋಗವಿದೆಯೇ? ಬೇರೆ ಏನಾದರೂ ಆಯ್ಕೆಗಳಿವೆಯೇ? ದಯವಿಟ್ಟು ಸಲಹೆ ಕೊಡಿ.

ಹೆಸರು, ಊರು ತಿಳಿಸಿಲ್ಲ.

ಒಂದು ನಿರ್ದಿಷ್ಟವಾದ ವೃತ್ತಿ ಮತ್ತು ಅದಕ್ಕೆ ಅನುಗುಣವಾಗಿ ಶಿಕ್ಷಣದ ಯೋಜನೆಯಿಲ್ಲದೆ ಕೋರ್ಸ್ ಮಾಡಿದರೆ ಇಂತಹ ಗೊಂದಲಗಳು ಸಾಮಾನ್ಯ. ಈಗಲೂ, ನಿಮ್ಮ ಆಸಕ್ತಿ, ಅಭಿರುಚಿಯಂತೆ ವೃತ್ತಿ ಯೋಜನೆಯನ್ನು ಮಾಡಿದರೆ ಈಗಿರುವ ಗೊಂದಲ ನಿವಾರಣೆಯಾಗುತ್ತದೆ.

ಬಿಎಸ್‌ಸಿ ನಂತರ ನೇರವಾಗಿ ಕೆಲಸಕ್ಕೆ ಸೇರುವುದಾದರೆ, ಸರ್ಕಾರಿ ಮತ್ತು ಖಾಸಗೀ ವಲಯದ ಬಯೋಟೆಕ್ನಾಲಜಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಆಸ್ಪತ್ರೆಗಳು, ಔಷಧ, ಆಹಾರ, ರಸಗೊಬ್ಬರ, ಕಾಸ್ಮೆಟಿಕ್ಸ್ ಮತ್ತಿತರ ತಯಾರಿಕ ಸಂಸ್ಥೆಗಳು, ಪ್ರಯೋಗಾಲಯಗಳಂತಹ ಕ್ಷೇತ್ರಗಳಲ್ಲಿ ವೃತ್ತಿಯನ್ನು ಹುಡುಕಿಕೊಳ್ಳಬಹುದು.

ಹೆಚ್ಚಿನ ತಜ್ಞತೆಗಾಗಿ ಎಂಎಸ್‌ಸಿ (ಬಯೋಟೆಕ್ನಾಲಜಿ, ಬಯೋಕೆಮಿಸ್ಟ್ರಿ, ಮೈಕ್ರೊಬಯಾಲಜಿ, ಫುಡ್ ಸೈನ್ಸ್ ಮತ್ತು ನ್ಯೂಟ್ರಿಷನ್, ಫೊರೆನ್ಸಿಕ್ ಸೈನ್ಸ್, ಲೈಫ್ ಸೈನ್ಸ್, ಜೆನೆಟಿಕ್ಸ್, ಕ್ಲಿನಿಕಲ್ ರಿಸರ್ಚ್ ಇತ್ಯಾದಿ) ಕೋರ್ಸ್ ಅನ್ನು ರೆಗ್ಯುಲರ್ ಅಥವಾ ಕೆಲಸದಲ್ಲಿದ್ದುಕೊಂಡು ದೂರಶಿಕ್ಷಣದ ಮುಖಾಂತರವೂ ಮಾಡಬಹುದು. ಜೊತೆಗೆ, ಮಾರ್ಕೆಟಿಂಗ್‌ನಲ್ಲಿ ಆಸಕ್ತಿಯಿದ್ದರೆ ಎಂಬಿಎ (ಬಯೋಟೆಕ್ನಾಲಜಿ), ಸಂಶೋಧನೆಯಲ್ಲಿ ಆಸಕ್ತಿಯಿದ್ದರೆ ಪಿಎಚ್‌.ಡಿ ಮಾಡಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಬ್ರೂಸ್ಟರ್‌ನ ನಿಯಮ

ಭೌತಶಾಸ್ತ್ರ

46) ಯಂಗ್ ದ್ವಿ ಸೀಳು-ಗಂಡಿ ಪ್ರಯೋಗದಲ್ಲಿನ ವ್ಯತಿಕರಣ ಪಟ್ಟಿಯಲ್ಲಿ ಕೆಳಗಿನ ಪ್ರತಿಯೊಂದು ಕ್ರಿಯೆ ಉಂಟಾಗುವ ಪರಿಣಾಮವೇನು?

(a) ಸೀಳುಗಂಡಿಯ ಸಮತಲದಿಂದ ಪರದೆಯನ್ನು ದೂರಕ್ಕೆ ತೆಗೆದುಕೊಂಡು ಹೋದಾಗ.

(b) ಒಂದು ಆಕರ(ಏಕವರ್ಣೀಯ)ವನ್ನು ಇನ್ನೊಂದು ಕಡಿಮೆ ತರಂಗಾಂತರ ಆಕರ (ಏಕವರ್ಣೀಯ) ದಿಂದ ಬದಲಾಯಿಸಿದಾಗ.

(c) ಎರಡು ಸೀಳು ಗಂಡಿಗಳ ಅಂತರವನ್ನು ಹೆಚ್ಚಿಸಿದಾಗ

(d) ಆಕರ ಗಂಡಿಯನ್ನು ದ್ವಿ ಸಮತಲ ಗಂಡಿಯ ಹತ್ತಿರ ತಂದಾಗ

(e) ಆಕರ ಗಂಡಿಯ ಅಗಲವನ್ನು ಹೆಚ್ಚಿಸಿದಾಗ

(f) ಏಕವರ್ಣೀಯ ಬೆಳಕಿನ ಆಕರವನ್ನು ಬಿಳಿಯ ಬಣ್ಣದ ಆಕರವಾಗಿ ಬದಲಾಯಿಸಿದಾಗ

(ಪ್ರತಿಯೊಂದು ಘಟನೆಯಲ್ಲಿಯೂ ಬದಲಾಗದೇ ಇರುವ, ನಿರ್ದಿಷ್ಟವಾಗಿ ಹೇಳಿದ ಪಾರಾ ಮೀಟರ್‌ನ್ನು ಹೊರತುಪಡಿಸಿ ಎಲ್ಲಾ ಪಾರಾಮೀಟರ್‌ಗಳನ್ನು ತೆಗೆದುಕೊಳ್ಳಿ)

ಉತ್ತರ: a) ಫ್ರಿಂಜ್‌ಗಳ ಕೊನೆಯ ಅಂತರವು ಸ್ಥಿರವಾಗಿರುತ್ತದೆ.

$s/S \le \lambda/d$ ನಿಜವಾದ ಫ್ರಿಂಜ್‌ಗಳ ಅಂತರವು ದ್ವಿ-ಸೀಳುಗಂಡಿಗಳ ಸಮತಲದಿಂದ ಪರದೆಗೆ ಇರುವ ದೂರಕ್ಕೆ ಅನುಪಾತವಾಗಿ ಹೆಚ್ಚಾಗುತ್ತದೆ.

(b) ಫ್ರಿಂಜ್‌ಗಳ ಅಂತರವು (ಕೋನೀಯ ಅಂತರ ಕೂಡಾ) ಕಡಿಮೆಯಾಗುತ್ತದೆ.

(c) ಫ್ರಿಂಜ್‌ಗಳ ಅಂತರವು(ಕೋನೀಯ ಅಂತರ ಕೂಡಾ) ಕಡಿಮೆಯಾಗುತ್ತದೆ.

(d) ಆಕರದ ಗಾತ್ರವಾಗಿರಲಿ ಮತ್ತು S ದ್ವಿ ಸೀಳು ಗಂಡಿಗಳ ಸಮತಲದಿಂದ ಅದಕ್ಕಿರುವ ದೂರ ವ್ಯತಿಕರಣ ಪಟ್ಟಿಯು ಕಂಡುಬರಲು $s/S \le \lambda/d$ ಆಗಿರಬೇಕು ಅಥವಾ ಆಕರದ ಬೇರೆ ಬೇರೆ ಭಾಗದಿಂದ ಉಂಟಾದ ವ್ಯತಿಕರಣ ಪಟ್ಟೆಯು ಅಧಿ ವ್ಯಾಪಿಸಿದರೆ ಪ್ರಿಂಜ್‌ಗಳು ಕಂಡುಬರುವುದಿಲ್ಲ. ಈ ರೀತಿಯಾಗಿ S ಕಡಿಮೆಯಾದಂತೆ (ಅಂದರೆ ಆಕರಗಂಡಿ ಹತ್ತಿರ ತಂದಂತೆ) ವ್ಯತಿಕರಣ ಪಟ್ಟೆಗಳು ಕಡಿಮೆಯಾಗಿ ಕಡಿಮೆ ಶಾರ್ಪ್ ಆಗುತ್ತದೆ. ಮತ್ತು ಆಕರವನ್ನು ತುಂಬಾ ಹತ್ತಿರ ತಂದಾಗ ಫ್ರಿಂಜ್‌ಗಳು ಮಾಯವಾಗುತ್ತವೆ. ಇದು ಆಗುವವರೆಗೆ ಫ್ರಿಂಜ್-ಅಂತರ ಸ್ಥಿರವಾಗಿರುತ್ತದೆ.

(e) ಆಕರಗಂಡಿಯ ಅಗಲ ಹೆಚ್ಚಾದಂತೆ ಫ್ರಿಂಜ್ ವಿನ್ಯಾಸ ಕಡಿಮೆ ಶಾರ್ಪ್ ಹೊಂದುತ್ತದೆ. ಯಾವಾಗ ಆಕರ ಸರಳಿನ ಅಗಲ ಎಷ್ಟು ದೊಡ್ಡದೆಂದರೆ ಅದು ನಿರ್ಬಂಧನೆ $s/S \le \lambda/d$ ಯನ್ನು ತೃಪ್ತಿಪಡಿಸದಿದ್ದರೆ ವ್ಯತಿಕರಣ ಪಟ್ಟೆಯು ಮಾಯವಾಗುತ್ತದೆ.

(f) ಬೇರೆ ಬೇರೆ ಬಿಳಿಯ ಬಣ್ಣದ ಘಟಕಗಳು ವ್ಯತಿಕರಣ ಪಟ್ಟಿಯಲ್ಲಿ ಅಧಿ ವ್ಯಾಪಿಸುತ್ತದೆ. (ಅಸಂಸಕ್ತವಾಗಿ) ಬೇರೆ ಬೇರೆ ಬಣ್ಣದಿಂದ ಉಂಟಾಗುವ ಕೇಂದ್ರ ಪ್ರಕಾಶ ಫ್ರಿಂಜ್ ಅದೇ ಸ್ಥಾನದಲ್ಲಿರುತ್ತದೆ. ಆದುದರಿಂದ ಕೇಂದ್ರದ ಫ್ರಿಂಜ್ ಬಿಳಿಯಾಗಿರುತ್ತದೆ.

P ಬಿಂದುವಿಗೆ

$$S_2P - S_1P = \lambda b/2, \text{ ಇಲ್ಲಿ } \lambda b\ (\approx 4000\ Å)$$

ನೀಲಿ ಬಣ್ಣದ ಘಟಕವು ಇಲ್ಲದಾಗ ಫ್ರಿಂಜ್ ಕೆಂಪು ಬಣ್ಣವಾಗಿ ಕಂಡುಬರುತ್ತದೆ. ಸ್ವಲ್ಪ ಮಟ್ಟಿಗೆ ಮುಂದುವರಿದರೆ

$$S_2Q - S_1Q = \lambda b = \lambda r/2 \text{ ಇಲ್ಲಿ } \lambda r\ (\approx 8000\ Å)$$

ಕೆಂಪು ಬಣ್ಣದ ತರಂಗಾಂತರ ಫ್ರಿಂಜ್ ಪ್ರಭಾವವಾಗಿ ನೀಲಿಯಾಗಿರುತ್ತದೆ.

ಈ ರೀತಿಯಾಗಿ ಕೇಂದ್ರದ ಬಿಳಿ ಪ್ರಿಂಜ್‌ಗೆ ಹತ್ತಿರವಾಗಿ ಎರಡೂ ಬದಿಗೆ ಕೆಂಪು ಫ್ರಿಂಜ್ ಮತ್ತು ಇನ್ನೊಂದು ಬದಿ ನೀಲಿಯಾಗಿ ಕಂಡುಬರುತ್ತದೆ. ಕೆಲವು ಪ್ರಿಂಜ್‌ಗಳ ನಂತರ ಯಾವುದೇ ಫ್ರಿಂಜ್ ವಿನ್ಯಾಸ ಕಂಡುಬರುವುದಿಲ್ಲ.

47) ಬ್ರೂಸ್ಟರ್‌ನ ನಿಯಮದ ಬಗ್ಗೆ ಬರೆಯಿರಿ

ಉತ್ತರ: ಎರಡು ಪಾರದರ್ಶಕ ಮಾಧ್ಯಮಗಳ ನಡುವಿನ ಸೀಮೆಯ ಮೇಲೆ ಅಧ್ರುವೀಕೃತ ಬೆಳಕು ಆಪಾತವಾದಾಗ, ಪ್ರತಿಫಲಿತ ಬೆಳಕು ಧ್ರುವೀಕರಣ ಹೊಂದಿ ಅದರ ವಿದ್ಯುತ್‌ಸದಿಶವು ವಕ್ರೀಭವಿತ ಮತ್ತು ಪ್ರತಿಫಲಿತ ಕಿರಣಗಳು ಪರಸ್ಪರ ಲಂಬವಾಗಿರುವಾಗ, ಅಪಾತ ಸಮತಲಕ್ಕೆ ಲಂಬವಾಗಿರುವುದು. ಪ್ರತಿಫಲಿತ ತರಂಗವು ವಕ್ರೀಭವಿತ ತರಂಗಕ್ಕೆ ಲಂಬವಾಗಿರುವಾಗ, ಪ್ರತಿಫಲಿತ ತರಂಗವು ಪೂರ್ಣವಾಗಿ ಧ್ರುವೀಕರಣಗೊಂಡ ತರಂಗವಾಗಿರುತ್ತದೆ. ಈ ಸಂದರ್ಭದಲ್ಲಿನ ಆಪಾತಕೋನವನ್ನು ಬ್ರೂಸ್ಟರನ ಕೋನ ಎನ್ನುವರು, ಇದನ್ನು i_B ಎಂದು ಬರೆಯುವರು. i_B ಯು ಸಾಂದ್ರ ಮಾಧ್ಯಮದ ವಕ್ರೀಭವನಾಂಶದೊಂದಿಗೆ ಸಂಬಂಧಿತವಾಗಿದೆ. $i_B + r = \pi/2$ ಆಗಿರುವುದರಿಂದ, ಸ್ನೆಲ್ಲನ ನಿಯಮಾನುಸಾರವಾಗಿ.

$$n = \frac{\sin i_B}{\sin r} = \frac{\sin i_B}{\sin(\pi/2 - i_B)}$$

$$= \frac{\sin i_B}{\cos i_B} = \tan i_B$$

ಇದನ್ನು ಬ್ರೂಸ್ಟರ್‌ನ ನಿಯಮ ಎನ್ನುವರು.

48) ಯಾವುದನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು?

ಉತ್ತರ:- ವಿದ್ಯುತ್ ಕ್ಷೇತ್ರದ ಎರಡು ಲಂಬ ಘಟಕಗಳಲ್ಲಿ ಒಂದು ಶೂನ್ಯವಾಗಿರುತ್ತದೆ. ಬೇರೆ ಕೋನಗಳಲ್ಲಿ ಎರಡು ಘಟಕಗಳೂ ಇರುತ್ತವೆ. ಆದರೆ ಒಂದು ಇನ್ನೊಂದಕ್ಕಿಂತ ಪ್ರಬಲವಾಗಿರುತ್ತದೆ. ಅಧ್ರುವೀಕೃತ ಪುಂಜದ ಎರಡು ಲಂಬಘಟಕಗಳಿಂದ ಇವುಗಳನ್ನು ಪಡೆದುಕೊಂಡಿರುವುದರಿಂದಾಗಿ ಈ ಎರಡು ಲಂಬ ಘಟಕಗಳ ನಡುವೆ ಸ್ಥಿರವಾದ ಪ್ರಾವಸ್ಥಾ ಸಂಬಂಧವಿರುವುದಿಲ್ಲ. ತಿರುಗುತ್ತಿರುವ ವಿಶ್ಲೇಷಕದಿಂದ ಅಂತಹ ಬೆಳಕನ್ನು ವೀಕ್ಷಿಸಿದಾಗ, ವೀಕ್ಷಕನು ಗರಿಷ್ಠ ಮತ್ತು ಕನಿಷ್ಠ ತೀವ್ರತೆಯನ್ನು ಕಾಣುತ್ತಾನೆ. ಆದರೆ ಪೂರ್ಣ ಕತ್ತಲನ್ನಲ್ಲ. ಇಂತಹ ಬೆಳಕನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು.

49) ಯಾವುದಕ್ಕೆ ಸಮತಲ ಧ್ರುವೀಕೃತ ಬೆಳಕು ಎನ್ನುವರು?

ಉತ್ತರ: ಸ್ವಾಭಾವಿಕ ಬೆಳಕು, ಉದಾಹರಣೆಗೆ ಸೂರ್ಯನ ಬೆಳಕು, ಅಧ್ರುವೀಕೃತ. ಇದರರ್ಥ ಅಡ್ಡ ಸಮತಲದಲ್ಲಿ ವಿದ್ಯುತ್ ಸದಿಶಗಳು ಎಲ್ಲಾ ಸಾಧ್ಯ ದಿಕ್ಕುಗಳನ್ನು ವೇಗವಾಗಿ ಮತ್ತು ಯಾದೃಚ್ಛಿಕವಾಗಿ ಹೊಂದುತ್ತವೆ. ಪೋಲರಾಯಿಡ್ ಕೇವಲ ಒಂದು ಘಟಕವನ್ನು (ವಿಶೇಷ ಅಕ್ಷಕ್ಕೆ ಸಮಾಂತರವಾದ) ರವಾನಿಸುತ್ತದೆ. ಈ ಬೆಳಕನ್ನು ರೇಖೀಯವಾಗಿ ಧ್ರುವೀಕರಣಗೊಂಡ ಅಥವಾ ಸಮತಲ ಧ್ರುವೀಕೃತ ಬೆಳಕು ಎನ್ನುವರು.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿಮ್ಮ ಮೇಲೆ ನೀವು ಅವಲಂಬಿತರಾಗಿರಿ. ಆಗ ನೀವು ನಿರಾಸೆಗೆ ಒಳಗಾಗುವುದಿಲ್ಲ.

–ಮಾಧುರಿ ದೀಕ್ಷಿತ್

ಬಿಬಿಎಂಪಿ ಬಜೆಟ್: ರಾತ್ರೋರಾತ್ರಿ ಪ್ರಕಟಿಸುವ ದುಃಸ್ಥಿತಿ ತಂದುಕೊಂಡಿದ್ದೇಕೆ?

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 2022–23ನೇ ಸಾಲಿನ ಬಜೆಟ್, ನಗರದ 1.30 ಕೋಟಿಗೂ ಅಧಿಕ ನಿವಾಸಿಗಳ ಆಶೋತ್ತರಗಳ ಪ್ರತಿಬಿಂಬದಂತಿರಬೇಕಿತ್ತು. ಆದರೆ, ಬಜೆಟ್ ಮಂಡನೆ ವಿಚಾರದಲ್ಲಿ ಬಿಬಿಎಂಪಿಯು ನಡೆದುಕೊಂಡ ರೀತಿ ಅದರ ಘನತೆಗೆ ತಕ್ಕುದಾಗಿರಲಿಲ್ಲ. ಬಿಬಿಎಂಪಿ ಕೇಂದ್ರ ಕಚೇರಿಯ ಕೆಂಪೇಗೌಡ ಪೌರ ಸಭಾಂಗಣದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಬಜೆಟ್ ಮಂಡಿಸುವುದು ವಾಡಿಕೆ. ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಇಲ್ಲದ ಕಾರಣ, ಹಣಕಾಸು ವಿಭಾಗದ ವಿಶೇಷ ಆಯುಕ್ತರು ಇದೇ ಪೌರ ಸಭಾಂಗಣದಲ್ಲಿ 2021–22ನೇ ಸಾಲಿನ ಬಜೆಟ್ ಮಂಡಿಸಿದ್ದರು. ಈ ವರ್ಷ ಈ ಔಪಚಾರಿಕತೆಯನ್ನೂ ಕೈಬಿಡಲಾಗಿದೆ. ಬಿಬಿಎಂಪಿ ಆಡಳಿತಕ್ಕೆ ಕಾಯಕಲ್ಪ ನೀಡುವ ಉದ್ದೇಶದಿಂದ ಬಿಜೆಪಿ ನೇತೃತ್ವದ ಈಗಿನ ಸರ್ಕಾರವು 2020ರ ಬಿಬಿಎಂಪಿ ಕಾಯ್ದೆಯನ್ನು ಜಾರಿಗೊಳಿಸಿದೆ. ಇದರ ಸೆಕ್ಷನ್ 194ರ ಪ್ರಕಾರ, ಮುಖ್ಯ ಆಯುಕ್ತರು ಕಳುಹಿಸುವ ಬಜೆಟ್ ಅಂದಾಜು ಮತ್ತು ಪ್ರಸ್ತಾವನೆಗಳನ್ನು ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯು ಪರಿಶೀಲಿಸಬೇಕು. ಇತರ ಸ್ಥಾಯಿ ಸಮಿತಿಗಳ ಪ್ರಸ್ತಾವನೆಗಳನ್ನೂ ಪಡೆದು ಬಜೆಟ್ ಅಂದಾಜನ್ನು ಸಿದ್ಧಪಡಿಸಬೇಕು. ಸೆಕ್ಷನ್ 196ರ ಪ್ರಕಾರ ಬಿಬಿಎಂಪಿ ಬಜೆಟ್, ಹೊಸ ಆರ್ಥಿಕ ವರ್ಷಾರಂಭಕ್ಕಿಂತ ಕನಿಷ್ಠ ಮೂರು ವಾರಗಳ ಮುಂಚೆ ಅಂಗೀಕಾರಗೊಳ್ಳಬೇಕು.



ಬಜೆಟ್ ರೂಪಿಸುವ ವಿಚಾರದಲ್ಲಿ ಅಧಿಕಾರಿಗಳು ತೋರಿದ ಅಸಡ್ಡೆಯು ಅದರ ಅನುಷ್ಠಾನದ ವೇಳೆಯೂ ಮುಂದುವರಿಯಬಾರದು

ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದ ಕಾರಣ ಮೇಯರ್ ಹಾಗೂ ಸ್ಥಾಯಿ ಸಮಿತಿಗಳ ಕಾರ್ಯಭಾರದ ಹೊಣೆ ಆಡಳಿತಾಧಿಕಾರಿಯದು. ಯಾವತ್ತು ಬಜೆಟ್ ಮಂಡಿಸಬೇಕು ಎಂಬ ಬಗ್ಗೆ ಆರ್ಥಿಕ ವರ್ಷ ಮುಗಿಯುವ ಕೊನೆಯ ದಿನದವರೆಗೂ ನಿರ್ಧಾರ ತಳೆಯಲು ಅವರಿಗೆ ಸಾಧ್ಯವಾಗದಿರುವುದು ಅಚ್ಚರಿಯ ವಿಷಯ. ಇಂತಹ ದುಃಸ್ಥಿತಿಯನ್ನು ಪಾಲಿಕೆ ತಂದುಕೊಂಡಿದ್ದೇಕೆ? ಮಾರ್ಚ್ 31ರಂದು ರಾತ್ರೋರಾತ್ರಿ ಬಿಬಿಎಂಪಿಯ ವೆಬ್‌ಸೈಟ್‌ನಲ್ಲಿ ಪಾಲಿಕೆ ಬಜೆಟ್‌ನ ಪ್ರತಿಯನ್ನು ಅಪ್‌ಲೋಡ್ ಮಾಡಲಾಗಿದೆ. ಬಿಬಿಎಂಪಿ ಆಡಳಿತವು ಬಜೆಟ್ ಅನ್ನು ಈ ರೀತಿ ಕದ್ದುಮುಚ್ಚಿ ಪ್ರಕಟಿಸಿದ್ದರ ಉದ್ದೇಶವೇನೆಂಬುದೇ ಅರ್ಥವಾಗುತ್ತಿಲ್ಲ. ಬಿಬಿಎಂಪಿ ಅಧಿಕಾರಿಗಳಿಗೆ ನಗರದ ಅಭಿವೃದ್ಧಿ ಕುರಿತು ನಿಜವಾದ ಕಾಳಜಿ ಇದ್ದಿದ್ದರೆ, ಅವರು ಬಜೆಟ್ ಅನ್ನು ಶ್ರದ್ಧೆಯಿಂದ ರೂಪಿಸುತ್ತಿದ್ದರು. ಹಾಗಾಗದಿರುವುದು ನಗರದ ಜನರ ದೌರ್ಭಾಗ್ಯವೇ ಸರಿ.

ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್‌ನ ಆಡಳಿತ ಇಲ್ಲದ ಕಾರಣ ಬೆಂಗಳೂರು ನಗರದ ಅಭಿವೃದ್ಧಿ ಖಾತೆಯ ಉಸ್ತುವಾರಿ ಹೊತ್ತವರ ಜವಾಬ್ದಾರಿ ಮತ್ತಷ್ಟು ಹೆಚ್ಚಿರುತ್ತದೆ. ಸದ್ಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಈ ಖಾತೆಯನ್ನು ನಿಭಾಯಿಸುತ್ತಿದ್ದಾರೆ. ಬಜೆಟ್ ಮಂಡನೆ ವಿಚಾರದಲ್ಲಿ ಬಿಬಿಎಂಪಿ ಕಾಯ್ದೆಯ ಆಶಯಗಳು ಪಾಲನೆಯಾಗದ ಬಗ್ಗೆ ಮಾಧ್ಯಮಗಳು ಬೆಳಕು ಚೆಲ್ಲಿದ ಬಳಿಕವೂ ಅವರು ತಪ್ಪನ್ನು ಸರಿಪಡಿಸುವುದಕ್ಕೆ ಆಸಕ್ತಿ ವಹಿಸಿದಂತೆ ತೋರುತ್ತಿಲ್ಲ. ಸರ್ಕಾರಕ್ಕೆ ಈ ನಗರದಿಂದ ಬೊಕ್ಕಸ ಸೇರುವ ವರಮಾನದ ಮೇಲಿರುವಷ್ಟು ಕಾಳಜಿ, ಇಲ್ಲಿನ ಆಡಳಿತ ವ್ಯವಸ್ಥೆಯ ಮೇಲೆ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಪಾಲಿಕೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾದ ಬಜೆಟ್ ಪ್ರತಿಯಲ್ಲೂ ನಗರದ ಅಭಿವೃದ್ಧಿ ಕುರಿತ ಒಳನೋಟಗಳಿಲ್ಲ. ಸರ್ಕಾರವು ಬಿಬಿಎಂಪಿಗೂ 'ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ವಿತ್ತೀಯ ಹೊಣೆಗಾರಿಕೆ ಕಾಯ್ದೆ– 2003' ಹಾಗೂ 'ಬಿಬಿಎಂಪಿ (ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ) ನಿಯಮಗಳು– 2021' ಅನ್ನು ಈ ವರ್ಷದ ಮಾರ್ಚ್ 10ರಿಂದ ಜಾರಿಗೊಳಿಸಿದೆ. ಅದರ ಪ್ರಕಾರ ಬಜೆಟ್ ಗಾತ್ರವು ವಾಸ್ತವಕ್ಕೆ ಹತ್ತಿರವಾಗಿರುವಂತೆ ನೋಡಿಕೊಳ್ಳಬೇಕು. ಇತ್ತೀಚಿನ ನಾಲ್ಕು ವರ್ಷಗಳ ಸಂಯುಕ್ತ ವಾರ್ಷಿಕ ಬೆಳವಣಿಗೆ ದರದ (ಸಿಎಜಿಆರ್) ಆಧಾರದಲ್ಲಿ ಬಿಬಿಎಂಪಿ ಬಜೆಟ್ ಗಾತ್ರವನ್ನು ನಿರ್ಧರಿಸಬೇಕಾಗುತ್ತದೆ. 2021–22ನೇ ಸಾಲಿನಲ್ಲಿ ಬಿಬಿಎಂಪಿಯು ತೆರಿಗೆ ಮತ್ತು ಕರಗಳಿಂದ ₹ 4,253.20 ಕೋಟಿ ವರಮಾನ ನಿರೀಕ್ಷಿಸಿ ಬಜೆಟ್ ಮಂಡಿಸಿತ್ತು. ಪರಿಷ್ಕೃತ ಬಜೆಟ್‌ನಲ್ಲಿ ಇದನ್ನು ₹ 2,828.60 ಕೋಟಿಗೆ ಕಡಿತಗೊಳಿಸಲಾಗಿದೆ. ನಿರೀಕ್ಷೆಗೂ ವಾಸ್ತವಕ್ಕೂ ಇರುವ ವ್ಯತ್ಯಾಸವನ್ನು ಬಜೆಟ್‌ನಲ್ಲೇ ನೀಡಿರುವ ಈ ಅಂಕಿ ಅಂಶಗಳು ಹೇಳುತ್ತಿವೆ. ಇಷ್ಟಾಗಿಯೂ 2022– 23ನೇ ಸಾಲಿನ ಬಜೆಟ್‌ನಲ್ಲಿ ತೆರಿಗೆ ಮತ್ತು ಕರಗಳಿಂದ ₹ 3,680.15 ಕೋಟಿ ವರಮಾನ ನಿರೀಕ್ಷಿಸಿ ಬಜೆಟ್ ಗಾತ್ರವನ್ನು ₹ 10,484.28 ಕೋಟಿಗೆ ನಿಗದಿಪಡಿಸಲಾಗಿದೆ. ಈ ಸಲದ ಬಜೆಟ್ ಅನ್ನೂ ಸಿಎಜಿಆರ್‌ಗೆ ಅನುಗುಣವಾಗಿ ರೂಪಿಸಿಲ್ಲ ಎಂಬುದು ಅದರ ಗಾತ್ರವನ್ನು ನೋಡಿದಾಗಲೇ ಮನದಟ್ಟಾಗುತ್ತದೆ. ನಗರದ ಸ್ವತ್ತುಗಳ ಬಿ–ಖಾತಾಗಳನ್ನು ಕ್ರಮಬದ್ಧಗೊಳಿಸಲಾಗುತ್ತದೆ ಎಂದು ಈ ಹಿಂದಿನ ಬಜೆಟ್‌ಗಳಲ್ಲೂ ಪ್ರಸ್ತಾಪಿಸಲಾಗಿತ್ತು. ಆದರೆ ಇದುವರೆಗೂ ಅದು ಜಾರಿಗೆ ಬಂದಿಲ್ಲ. ಈ ಸಲದ ಬಜೆಟ್‌ನಲ್ಲಿ ಇದನ್ನು ಮತ್ತೊಮ್ಮೆ ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲ, ಅದರಿಂದ ₹ 1 ಸಾವಿರ ಕೋಟಿ ವರಮಾನವನ್ನೂ ನಿರೀಕ್ಷಿಸಲಾಗಿದೆ. ಬಜೆಟ್‌ನಲ್ಲಿ ಕಂದಾಯ ಸ್ವೀಕೃತಿಯ ನಿರೀಕ್ಷೆಗಳು ವಾಸ್ತವಕ್ಕೆ ಹತ್ತಿರದಲ್ಲಿ ಇಲ್ಲದಿದ್ದಾಗ ವರಮಾನ ಮತ್ತು ವೆಚ್ಚದ ಲೆಕ್ಕ ಸರಿದೂಗಿಸಲು ಅಂಕಿ–ಅಂಶಗಳಲ್ಲಿ ಇಂತಹ ಕಸರತ್ತುಗಳನ್ನು ಮಾಡಬೇಕಾಗುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಬಜೆಟ್ ರೂಪಿಸುವ ವಿಚಾರದಲ್ಲಿ ಅಧಿಕಾರಿಗಳು ತೋರಿದ ಅಸಡ್ಡೆಯು ಅದರ ಅನುಷ್ಠಾನದ ವೇಳೆಯೂ ಮುಂದುವರಿಯಬಾರದು. ಬಜೆಟ್ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಅನುಷ್ಠಾನಗೊಳಿಸಬೇಕು. ಬಿಬಿಎಂಪಿ ಕುರಿತು ಸರ್ಕಾರ ಅಸಡ್ಡೆ ತೋರುವುದನ್ನು ಬಿಟ್ಟು ಇನ್ನು ಮುಂದಾದರೂ ರಾಜ್ಯದ ಆರ್ಥಿಕ ಶಕ್ತಿಕೇಂದ್ರವಾದ ಬೆಂಗಳೂರು ನಗರದ ಆಡಳಿತವನ್ನು ಸರಿದಾರಿಗೆ ತರುವುದಕ್ಕೆ ಕ್ರಮ ವಹಿಸಬೇಕು.

ದಿನದ ಟ್ವೀಟ್

ನಗರ ಸ್ವಚ್ಛವಾಗಬೇಕೆಂದರೆ...

ಸಮುದಾಯ ತಂಡಗಳು ನಿಮ್ಮ ಬಡಾವಣೆಯಲ್ಲಿ ಸಕ್ರಿಯವಾಗಿ ಇರುವಂತೆ ನೋಡಿಕೊಳ್ಳಬೇಕಾದುದು, ನಗರವನ್ನು ಸ್ವಚ್ಛವಾಗಿ ಇಡುವ ದಿಸೆಯಲ್ಲಿ ಇರಿಸಬೇಕಾದ ಮೊದಲ ಹೆಜ್ಜೆ. ಖಾಸಗಿ ವಾಣಿಜ್ಯ ಸಂಸ್ಥೆಗಳು ಎಲ್ಲೆಂದರಲ್ಲಿ ಕಸ ಚೆಲ್ಲದಂತೆ ನೋಡಿಕೊಳ್ಳಲು ಸ್ವಲ್ಪ ಸಮಯ ವ್ಯಯಿಸಬೇಕಾಗುತ್ತದೆ. ಜೊತೆಗೆ, ಆಯಾ ವಸತಿ ಪ್ರದೇಶದ ಸ್ವಚ್ಛತೆಗಾಗಿ ನೀವೇನು ಮಾಡಿದ್ದೀರಿ ಎಂದು ಸ್ಥಳೀಯ ಜನಪ್ರತಿನಿಧಿಗಳನ್ನು ಕೇಳಿ.

ಡಾ. ಸುಧೀರ್ ಮೆಹ್ತಾ, ಉದ್ಯಮಿ

ಕಿಡಿನುಡಿ

ಕೇಂದ್ರ ಸರ್ಕಾರವು ಎಪಿಎಂಸಿ ಕಾಯ್ದೆಯನ್ನು ವಾಪಸ್ ಪಡೆದುಕೊಂಡರೂ ರಾಜ್ಯದಲ್ಲಿ ಕಾಯ್ದೆ ಏಕೆ ವಾಪಸ್ ಪಡೆದಿಲ್ಲ? ವರ್ಷಕ್ಕೆ ರೂ. 600 ಕೋಟಿ ಆದಾಯ ಗಳಿಸುತ್ತಿದ್ದ ರಾಜ್ಯದ ಎಪಿಎಂಸಿಗಳು ಇಂದು ಆದಾಯವಿಲ್ಲದೆ ಶಾಶ್ವತವಾಗಿ ಬಾಗಿಲು ಮುಚ್ಚಲು ಸಿದ್ಧವಾಗಿವೆ. ಇದಕ್ಕೆ ಹೊಣೆ ಯಾರು? #PriceHike

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 4-4-1997

• ರಂಗ– ಕಾಂಗ್ರೆಸ್ ನಾಯಕರ ಮಾತುಕತೆ ಇಂದು ಸಂಭವ

ನವದೆಹಲಿ, ಏ. 3– ಸಂಯುಕ್ತ ರಂಗ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಂಡಿರುವ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕೆಂದು ಕಾಂಗ್ರೆಸ್ಸಿಗೆ ರಂಗ ಚಾಲನಾ ಸಮಿತಿಯು ಮಾಡಿರುವ ಮನವಿಯ ನಿರ್ಣಯವನ್ನು ಪಕ್ಷಕ್ಕೆ ಇಂದು ಅಧಿಕೃತವಾಗಿ ತಲುಪಿಸಲಾಗಿದ್ದು ನಾಳೆಯಿಂದ ಉಭಯ ಪಕ್ಷಗಳ ನಡುವಣ ಅಧಿಕೃತ ಮಾತುಕತೆಗಳಿಗೆ ದಿಕ್ಸೂಚಿಯಾಗುವ ಸಂಭವ ಇದೆ.

ಈ ಮಧ್ಯೆ ಕಾಂಗ್ರೆಸ್ ಸರ್ಕಾರ ರಚಿಸುವ ಪರಿಸ್ಥಿತಿ ಬಂದರೆ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಪ್ರಧಾನಿ ಸ್ಥಾನಕ್ಕೆ ಅಭ್ಯರ್ಥಿಯಲ್ಲ ಎಂಬುದಾಗಿ ಪಕ್ಷದ ನಂಬಲರ್ಹ ಮೂಲಗಳು ಸ್ಪಷ್ಟಪಡಿಸಿವೆ. ಆದರೆ ಸಂಯುಕ್ತ ರಂಗದ ನಾಯಕರೊಡನೆ ಮಾತುಕತೆ ನಡೆದರೂ, ನಾಯಕತ್ವ ಬದಲಾವಣೆ ವಿಷಯದಲ್ಲಿ ಕಾಂಗ್ರೆಸ್ ನಿಲುವಿನಲ್ಲಿ ಬದಲಾವಣೆ ಇಲ್ಲ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 4-4-1972

• ಕುಡಿಯುವ ನೀರಿಗೆ ಪ್ರಸ್ತುತ ಬೇಸಿಗೆಯಲ್ಲಿ ಕಳವಳ ಅನಗತ್ಯ: ನಗರದ ಜನತೆಗೆ ಆಶ್ವಾಸನೆ

ಬೆಂಗಳೂರು, ಏ. 3– ನಗರದ ಪೌರರು ಈ ವರ್ಷವೂ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಕಳವಳ ಪಡಬೇಕಾಗಿಲ್ಲ. ನಗರಕ್ಕೆ ನೀರು ಸರಬರಾಜು ಮಾಡುತ್ತಿರುವ ತಿಪ್ಪಗೊಂಡನ ಹಳ್ಳಿ ಮತ್ತು ಹೆಸರಘಟ್ಟ ಜಲಾಶಯಗಳಲ್ಲಿ 400 ದಿನಗಳಿಗೆ ಆಗುವಷ್ಟು ನೀರು ದಾಸ್ತಾನಿದೆ.

ನಗರದ ನೀರು ಸರಬರಾಜು ಪರಿಸ್ಥಿತಿಯನ್ನು ಇಂದು ಇಲ್ಲಿ ಸುದ್ದಿಗಾರರಿಗೆ ವಿವರಿಸಿದ ಜಲಮಂಡಳಿ ಅಧ್ಯಕ್ಷ ಐ.ಎಂ.ಮುಗ್ದುಂ ಅವರು, 'ನಮಗೆ ಇರುವ ಒಂದು ತೊಂದರೆ ಎಂದರೆ ನೀರನ್ನು ನಗರಕ್ಕೆ ಪಂಪ್ ಮಾಡುವ ಮಿತಿ' ಎಂದರು.

• ಭೂ ಸುಧಾರಣೆ: ಕೇಂದ್ರ ಶಾಸನ ಅಸಾಧ್ಯ– ಶಿಂಧೆ

ನವದೆಹಲಿ, ಏ. 3– ಭೂ ಸುಧಾರಣೆಗೆ ಸಂಬಂಧಿಸಿದಂತೆ ಸಮಗ್ರ ರಾಷ್ಟ್ರಕ್ಕೆ ಅನ್ವಯವಾಗುವಂಥ ಯಾವುದೇ ಕಾನೂನನ್ನು ಸಂಸತ್ ಅಂಗೀಕರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಕೇಂದ್ರ ಆಹಾರ ಖಾತೆ ಸ್ಟೇಟ್ ಸಚಿವ ಶ್ರೀ ಎ.ಪಿ.ಶಿಂಧೆ ಅವರು ಇಂದು ಲೋಕಸಭೆಗೆ ತಿಳಿಸಿದರು.

ಈ ವಿಷಯವು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಪ್ರಶ್ನೆ. ಭೂ– ಪರಿಮಿತಿಯನ್ನು ತಗ್ಗಿಸುವ ಬಗ್ಗೆ ನಾನಾ ರಾಜ್ಯಗಳು ಈಗಾಗಲೇ ಕಾನೂನು ಅಂಗೀಕರಿಸಿವೆ ಅಥವಾ ಅಂಗೀಕರಿಸುವ ಹಾದಿಯಲ್ಲಿವೆ ಎಂದೂ ಅವರು ಶ್ರೀ ಎಚ್.ಸಿ.ಕಚವಾಯಿ ಅವರಿಗೆ ಹೇಳಿದರು.

ಮಾಲಿನ್ಯದ ತಾಪ ಎಲ್ಲರಿಗೂ ತಟ್ಟುತ್ತಿದೆ, ಪರಿಹಾರ ಮಾತ್ರ ಕಾಣದಾಗಿದೆ

ನಗರಗಳಿಗೆ ವಾಯುಮಾಲಿನ್ಯದ 'ಕಿರೀಟ'

ವಿಶ್ಲೇಷಣೆ

ಟಿ.ಆರ್.ಅನಂತರಾಮು

ಯಾವುದಾದರೂ ಪ್ರತಿಷ್ಠಿತ ಪ್ರಶಸ್ತಿ ಘೋಷಣೆ ಆದೊಡನೆ ಸಾಮಾನ್ಯವಾಗಿ ನಮ್ಮ ಕಣ್ಣುಗಳು ಚುರುಕಾಗುತ್ತವೆ. ನಮ್ಮ ನಟರಿಗೋ ಸಿನಿಮಾಕ್ಕೋ ನಮ್ಮ ಸಾಹಿತಿಗಳಿಗೋ ವಿಜ್ಞಾನಿಗಳಿಗೋ ಈ ಪಟ್ಟಿಯಲ್ಲಿ ಸ್ಥಾನ ಇರಬಹುದೇ ಎಂದು ಕುತೂಹಲ ತಳೆಯುತ್ತೇವೆ. ಅಲ್ಲಿ ಕಾತರವಿರುತ್ತದೆ, ನಿರೀಕ್ಷೆ ಇರುತ್ತದೆ.

ಪ್ರತಿವರ್ಷವೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಡುಗಡೆಯಾಗುವ ಬೇರೊಂದು ಪಟ್ಟಿ ಇದೆ. ಅದನ್ನು ನೋಡುವಾಗ ಕಾತರವಿರುವುದಿಲ್ಲ, ಕುತೂಹಲವಿರುವುದಿಲ್ಲ, ಬದಲು ಭಯ, ಆತಂಕ, ದುಮ್ಮಾನವಿರುತ್ತದೆ. ಎಲ್ಲಿ ನಮ್ಮ ದೇಶದ ಅಥವಾ ನಗರಗಳ ಹೆಸರು ಬಂದುಬಿಟ್ಟಿದೆಯೋ ಎಂಬ ಆತಂಕ ಕಾಡುತ್ತದೆ. ಈ ಆತಂಕವನ್ನು ನಿಜಮಾಡುವಂತೆ ಕಳೆದ ನಾಲ್ಕು ವರ್ಷಗಳಿಂದ ನಮ್ಮ ದೇಶದ ಹೆಸರು ಇದ್ದೇ ಇರುತ್ತದೆ. ಹಾಗೆಯೇ ನಮ್ಮ ನಗರಗಳೂ ಸ್ಥಾನ ಗಿಟ್ಟಿಸಿರುತ್ತವೆ. ಏನಿಲ್ಲದಿದ್ದರೂ ನಮ್ಮ ರಾಜಧಾನಿ ದೆಹಲಿ ಹೆಸರಂತೂ ಗ್ಯಾರಂಟಿ.

ಈ ವರದಿಯನ್ನು ಬಿಡುಗಡೆ ಮಾಡುವುದು ಒಂದು ಜವಾಬ್ದಾರಿಯುತ ಸಂಸ್ಥೆ. ಅದರ ಹೆಸರು ಐಕ್ಯುಏರ್. ಸ್ವಿಟ್ಜರ್ಲೆಂಡಿನ ಈ ಸಂಸ್ಥೆಯು ವಾಯುಮಾಲಿನ್ಯದಲ್ಲಿ ಹೈಜಂಪ್ ಮಾಡುತ್ತಲೇ ಬಂದಿರುವ ಜಗತ್ತಿನ ದೇಶಗಳು, ನಗರಗಳ ಪಟ್ಟಿಯನ್ನು ಪ್ರತಿವರ್ಷದಂತೆ ಈ ವರ್ಷವೂ ಬಿಡುಗಡೆ ಮಾಡಿದೆ. ಈಗಲೂ ರಾಜಧಾನಿಗಳ ಪೈಕಿ ದೆಹಲಿಗೇ ಮಾಲಿನ್ಯದ 'ಕಿರೀಟ'. ದೇಶಗಳ ಶ್ರೇಯಾಂಕ ಪಟ್ಟಿಯಲ್ಲಿ ಬಾಂಗ್ಲಾ ದೇಶ, ಛಾಡ್, ಪಾಕಿಸ್ತಾನ, ಕಜಕಿಸ್ತಾನ ಆನಂತರ ಭಾರತ ವಿಜೃಂಭಿಸುತ್ತಿವೆ. ನಗರಗಳ ಪ್ರಶ್ನೆ ಬಂದಾಗ, ಮೊದಲ 50 ಅತಿ ವಾಯು ಕಲುಷಿತ ನಗರಗಳಲ್ಲಿ 35 ಭಾರತದಲ್ಲೇ ಇವೆ. ಇದೂ ಒಂದು 'ರೆಕಾರ್ಡ್'. ರಾಜಸ್ಥಾನದ ಭಿವಾಡದಲ್ಲಿ ನಿಗದಿತ ಪ್ರಮಾಣಕ್ಕಿಂತ 38 ಪಟ್ಟು ಹೆಚ್ಚು ದೂಳುಮಾಲಿನ್ಯ. ವಾಯುಮಾಲಿನ್ಯದಲ್ಲಿ ಇದಕ್ಕೆ 'ಚಿನ್ನದ ಪ್ರಶಸ್ತಿ'.

ಜಗತ್ತಿನ ವಾಯುಮಾಲಿನ್ಯ ಎಷ್ಟು ಅಧ್ವಾನವಾಗಿದೆಯೆಂದರೆ, ಕಳೆದ ವರ್ಷ ವಿಶ್ವಸಂಸ್ಥೆ ಒಂದು ಸೂಚಿಯನ್ನು ಬಿಡುಗಡೆ ಮಾಡಿ ಎಲ್ಲ ದೇಶಗಳಿಗೂ ರವಾನೆ ಮಾಡಿತ್ತು. ನಿಮ್ಮ ನಗರದ ಗಾಳಿಯಲ್ಲಿ ಪ್ರತಿ ಘನ ಮೀಟರು ಗಾಳಿಯಲ್ಲಿ 5 ಮೈಕ್ರೊ ಗ್ರಾಂಗಿಂತ ಹೆಚ್ಚು ಮಾಲಿನ್ಯ ಕಣಗಳು ಇಲ್ಲದಂತೆ ನೋಡಿಕೊಳ್ಳಿ. ಎಚ್ಚರವಿರಲಿ, 2.5 ಮೈಕ್ರೊ ಮೀಟರ್ ಗಾತ್ರಕ್ಕಿಂತ ಸಣ್ಣ ಕಣ್ಣಗಳು ದಟ್ಟೈಸದಂತೆ ನೋಡಿಕೊಳ್ಳುವುದು ನಿಮ್ಮ ಹೊಣೆ ಎಂದಿತ್ತು. ಆದರೆ ಯಾವ ದೇಶವೂ ಇದಕ್ಕೆ ಕವಡೆ ಕಿಮ್ಮತ್ತನ್ನೂ ಕೊಟ್ಟಂತೆ ಕಾಣುವುದಿಲ್ಲ. ನಮ್ಮ ದೇಶದ 35 ನಗರಗಳಲ್ಲಿ ವಿಶ್ವಸಂಸ್ಥೆ ನಿಗದಿಪಡಿಸಿದ್ದಕ್ಕಿಂತ 10 ಪಟ್ಟು ಹೆಚ್ಚು ಮಾಲಿನ್ಯಕಾರಕಗಳು ದಟ್ಟೈಸಿವೆ. ಐಕ್ಯುಏರ್ ಸಂಸ್ಥೆ ಈ ಫಲಿತಾಂಶವನ್ನೇ ನಮ್ಮ ಮುಖದ ಮೇಲೆ ಹಿಡಿದಿರುವುದು.

ಈ ಸಂಸ್ಥೆ ಬೇಕಾಬಿಟ್ಟಿಯಾಗಿ, ಯಾವುದೋ ದೇಶವನ್ನು ಹೀಗಳೆಯಲು ಮಾಡಿದ ಹುನ್ನಾರ ಇದಲ್ಲ. ಜಗತ್ತಿನಾದ್ಯಂತ 117 ದೇಶಗಳಲ್ಲಿ ಸ್ಥಾಪಿಸಿರುವ 6,475 ಮಾಲಿನ್ಯ ನಿಗಾ ಕೇಂದ್ರಗಳ ಮಾಹಿತಿಗಳನ್ನು ಹೆಕ್ಕಿ ಈ ಫಲಿತಾಂಶವನ್ನು ಪ್ರಕಟಿಸಿದೆ. ಅನೇಕ ನಗರಗಳ ಮೇಲೆ ದೂಳಿನ ಕಣಗಳ ಜೊತೆ ಹೊಗೆ, ಮಂಜು ಬೆರೆತು ಇಡೀ ನಗರಗಳೇ ಮಸುಕಾಗಿರುವುದನ್ನು ಉಪಗ್ರಹಗಳ ಛಾಯಾಚಿತ್ರಗಳ ಸಮೇತ ಇದು ಮುಂದಿಟ್ಟಿದೆ.

ವಿಶ್ವಸಂಸ್ಥೆಯ ಪರಿಸರ ವಿಭಾಗದಲ್ಲಿ ಪ್ರತೀ ಕ್ಷಣದಲ್ಲೂ ಯಾವ ನಗರದ ವಾಯುಮಾಲಿನ್ಯ ಎಷ್ಟು ಹದಗೆಟ್ಟಿದೆ ಎಂಬುದನ್ನು ವಿವರಿಸುವ ನಕ್ಷೆಗಳನ್ನು ಪ್ರದರ್ಶಿಸಲಾಗಿದೆ. ಈಗಲೂ ಕಂಪ್ಯೂಟರ್‌ನಲ್ಲಿ ಆ ನಕ್ಷೆಯ ಮೇಲೆ ಕರ್ಸರ್ (ಬಾಣ) ಇಟ್ಟರೆ ನಮ್ಮ ನಗರಗಳ ಬಂಡವಾಳವೆಲ್ಲ ಬಯಲು.

ಈ ಸಮೀಕ್ಷಾ ಸಂಸ್ಥೆಯು 2021ರ ವರದಿ ಬಿಡುಗಡೆ ಮಾಡುವಾಗ, ಅತ್ಯಂತ ಬೇಸರಪಟ್ಟಿತ್ತು. ಏಕೆಂದರೆ ಜಗತ್ತಿನ ಯಾವೊಂದು ದೇಶವೂ ವಿಶ್ವಸಂಸ್ಥೆ ನಿಗದಿಪಡಿಸಿದ ಮಿತಿಯನ್ನು ಅನುಸರಿಸಿಲ್ಲ ಎಂದು. 2.5 ಮೈಕ್ರೊ ಮೀಟರ್ ಗಾತ್ರದ ತೇಲುಕಣಗಳ ಬಗ್ಗೆ ಏಕೆ ಇಷ್ಟೊಂದು ತಲೆ ಕೆಡಿಸಿಕೊಳ್ಳಬೇಕು? ಕಾರಣವಿದೆ. ಈ ಕಣಗಳು ನಮ್ಮ ಕೂದಲಿನ ಗಾತ್ರಕ್ಕಿಂತಲೂ 70 ಪಟ್ಟು ಸಣ್ಣ; ಕಣ್ಣಿಗೆ ಕಾಣಿಸುವುದಿಲ್ಲ. ಸೂಕ್ಷ್ಮದರ್ಶಕಗಳಿಂದ ಮಾತ್ರ ನೋಡಬಹುದು. ಉಸಿರಾಟದ ಮೂಲಕ ನೇರವಾಗಿ ಶ್ವಾಸಕೋಶಕ್ಕೆ 'ಎಂಟ್ರಿ' ಕೊಡುತ್ತವೆ. ಇದಕ್ಕಿಂತ ದೊಡ್ಡ ಗಾತ್ರದ ಕಣಗಳನ್ನು ಮೂಗಿನ ರೋಮ ಮತ್ತು ಲೋಳೆ ಪಟ್ಟೆಂದು ಹಿಡಿದು ಕೂಡಿಸುತ್ತವೆ ಒಳ ಪ್ರವೇಶಿಸದಂತೆ. ಒಂದರ್ಥದಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ. ಸೀನಿದರಾಯಿತು, ಹೊರಕ್ಕೆ ಅಟ್ಟಬಹುದು. ಸಣ್ಣ ಕಣಗಳು ಶ್ವಾಸಕೋಶಕ್ಕೆ ಹೋಗಿ ಕೆಮ್ಮು, ದಮ್ಮು ಸೃಷ್ಟಿಸುತ್ತವೆ. ಇದಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದರೆ ಸೀದಾ ನಮ್ಮ ರಕ್ತನಾಳಗಳಲ್ಲಿ ತೂರಿಬಿಡುತ್ತವೆ. ಮಿದುಳನ್ನು ಹಾನಿಗೊಳಿಸಿದರೂ ಆಶ್ಚರ್ಯವಿಲ್ಲ. ಹೀಗಾಗಿಯೇ 2.5 ಮೈಕ್ರೊ ಮೀಟರ್ ಗಾತ್ರದ ಕಣಗಳು ಅತ್ಯಂತ ಅಪಾಯಕಾರಿ.

ವಾಯುಮಾಲಿನ್ಯದಿಂದಾಗುವ ಸಾವು ನೋವು ಬೇಗ ಜಗತ್ತಿನ ಗಮನಕ್ಕೆ ಬರುವುದಿಲ್ಲ. ಆದರೂ ವಿಶ್ವ ಆರೋಗ್ಯ ಸಂಸ್ಥೆ ಲೆಕ್ಕ ಇಟ್ಟಿದೆ. ಜಗತ್ತಿನಲ್ಲಿ ಪ್ರತಿವರ್ಷ ಏಳು ಲಕ್ಷ ಮಂದಿ ಅಶುದ್ಧ ಗಾಳಿ ಸೇವಿಸಿ ಸಾಯುತ್ತಿದ್ದಾರೆ. ಕೋವಿಡ್ ಬಂದ ಸಮಯದಲ್ಲೂ ವಿಶೇಷವಾಗಿ, 2021ರಲ್ಲಿ 40,000 ಮಕ್ಕಳು ಮಾಲಿನ್ಯಕಾರಕ ಗಾಳಿ ಸೇವಿಸಿಯೇ ಸತ್ತಿದ್ದಾರೆ ಎಂಬುದು ಈಗ ಬಹಿರಂಗವಾಗಿದೆ. ಏಕೆ ಇಡೀ ಜಗತ್ತು ಗಾಳಿಮಾಲಿನ್ಯದಿಂದ ಬಸವಳಿದಿದೆ ಎಂಬುದನ್ನು ಹೊಸದಾಗಿ ಸಂಶೋಧನೆ ಮಾಡಿ ಹೇಳಬೇಕಾದ್ದೇನೂ ಇಲ್ಲ. ವಿಶೇಷವಾಗಿ ಶ್ವಾಸಕೋಶ ಸೇರುವ ಸಣ್ಣ ಕಣಗಳು ಡೀಸೆಲ್ ಎಂಜಿನ್ನಿನಿಂದ ಹೊರಬೀಳುತ್ತವೆ. ಮನೆ ಕಟ್ಟುವಾಗ ಏಳುವ ದೂಳು ವಾಯುಗೋಳ ಸೇರುತ್ತದೆ. ಫ್ಯಾಕ್ಟರಿ ಹೊಗೆ, ಗಿಡಗಳ ಸೂಕ್ಷ್ಮಬೀಜಗಳು, ಇದ್ದಕ್ಕಿದ್ದಂತೆ ಸಣ್ಣ ಕಣಗಳನ್ನು ಮರಳುಗಾಡಿನಿಂದ ಎತ್ತಿ ತರುವ ಗಾಳಿ, ಕಾಳ್ಗಿಚ್ಚು ಇಲ್ಲೆಲ್ಲ ಕೆಲಸ ಮಾಡುತ್ತವೆ.

ಇವೆರಡಕ್ಕಿಂತ ಹೆಚ್ಚು ಅಪಾಯಕಾರಿಯಾದ ಎರಡು ಮೂಲಗಳಿವೆ. ಕೃಷಿ ತ್ಯಾಜ್ಯವನ್ನು ಹೊಲ, ಗದ್ದೆಗಳಲ್ಲೇ ಉರಿಸುವುದು ಮತ್ತು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉರಿಸುವ ಕಲ್ಲಿದ್ದಲು. ಭಾರತದಲ್ಲಿ ವಾರ್ಷಿಕ 6,000 ಲಕ್ಷ ಟನ್ನು ಕೃಷಿ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ಪೈಕಿ ಉತ್ತರಪ್ರದೇಶದ ಕೊಡುಗೆಯೇ 1,300 ಲಕ್ಷ ಟನ್ನು. ಮಸಿ ಸಮೇತ ಈ ಕಣಗಳು ದೆಹಲಿಯನ್ನು ಕಂಗೆಡಿಸಿರುವುದು ಹೊಸ ಸುದ್ದಿಯೇ ಅಲ್ಲ. ಇನ್ನು ಶಕ್ತಿಯ ಮೂಲವಾಗಿ ಭಾರತದಲ್ಲಿ ಶೇ 60ರಷ್ಟು ಭಾಗ ಅವಲಂಬನೆ ಉಷ್ಣ ಸ್ಥಾವರದ ಮೇಲಿದೆ. 2030ರ ಹೊತ್ತಿಗೆ ಈ ಅವಲಂಬನೆ ಶೇ 50 ಭಾಗ ಇಳಿಯಬಹುದು ಎಂಬುದು ನೀತಿ ಆಯೋಗದ ಅಂದಾಜು. ಅಲ್ಲಿಯವರೆಗೆ ಕಲ್ಲಿದ್ದಲ ವ್ಯಾಪಕ ದಹನ ನಡೆದೇ ಇರುತ್ತದೆ. ಕಾರ್ಬನ್ ಕಣಗಳ ತೇಲಾಟ– ಮೇಲಾಟ– ಉಸಿರಾಟ ಅನಿವಾರ್ಯ.

ಹಾಗೆಂದು ಸಂಶೋಧನಾ ಸಂಸ್ಥೆಗಳೇನೂ ಕೈಕಟ್ಟಿ ಕುಳಿತಿಲ್ಲ. ರಾಷ್ಟ್ರೀಯ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ, ಸಿ.ಎಸ್.ಐ.ಆರ್. ಮುಂಬೈನ ಐ.ಐ.ಟಿ.ಯು ಮಾಲಿನ್ಯ ಹೀರುವ ಯಂತ್ರಗಳನ್ನು ಸೃಷ್ಟಿಸಿವೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ 'ವಾಯು' ಎಂಬ ಉಪಕರಣವನ್ನು ದೆಹಲಿಯಲ್ಲಿ ಅಳವಡಿಸಿದೆ. ಆದರೆ ಉತ್ಸರ್ಜಿಸುವ ಮಾಲಿನ್ಯವನ್ನು ಸಂಪೂರ್ಣವಾಗಿ ಹೀರುವ ಸಾಮರ್ಥ್ಯ ಇದಕ್ಕಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎರಡು ವರ್ಷಗಳ ಹಿಂದೆ, ಇಡೀ ನಗರದಲ್ಲಿ ವಾಯುಮಾಲಿನ್ಯ ಹೀರುವ ಸುಮಾರು 500 ಉಪಕರಣಗಳ ಸ್ಥಾಪನೆಗೆ ಮುಂದಾಗಿತ್ತು. ಅದು ಸುದ್ದಿಯಾಯಿತು ಅಷ್ಟೇ. ಈಗಲೂ ದೇಶದಾದ್ಯಂತ 804 ವಾಯುಮಾಲಿನ್ಯ ವೀಕ್ಷಣಾ ಕೇಂದ್ರಗಳು ಸತತ 24 ಗಂಟೆಯೂ ಕೆಲಸ ಮಾಡುತ್ತಿವೆ. ಇವು ನಮ್ಮ ಮಾಲಿನ್ಯದ ಪಾಪವನ್ನು ಕರಾರುವಾಕ್ಕಾಗಿ ಬೊಟ್ಟು ಮಾಡಿ ತೋರಿಸುತ್ತವೆ ಅಷ್ಟೇ. ಪರಿಹಾರಕ್ಕಾಗಿ ಹುಡುಕಾಟ ಇನ್ನೂ ನಡೆದೇ ಇದೆ.

ಚುರುಮುರಿ



ಮಾರ್ಜಾಲ ಶುಭವಾಣಿ!

• ಸುಮಂಗಲಾ

'ಶುಭಕೃತು ಸಂವತ್ಸರದಾಗೆ ಏನೇನ್ ಹೊಸ ಪ್ಲಾನ್ ಹಾಕೀಯಲೇ?' ಎಂದು ಬೆಕ್ಕಣ್ಣನಿಗೆ ಕೇಳಿದೆ. 'ಶುಭಕೃತು ಈಗ ಬಂದಿದ್ದಲ್ಲ... ಇದ್ ಬಂದು ಭಾಳ ವರ್ಸಗಳೇ ಆದುವಲ್ಲ' ಎನ್ನುತ್ತ ಬೆರಳು ಎಣಿಸತೊಡಗಿತು.

'ಮಂಗ್ಯಾನಂಥವನೇ... ಪ್ರತಿಯೊಂದು ಸಂವತ್ಸರನೂ ಅರವತ್ ವರ್ಷಕ್ಕೊಂದ್ಸಲ ಬರತೈತಿ, ಪ್ರತಿವರ್ಷ ಬ್ಯಾರೆ ಬ್ಯಾರೆ ಸಂವತ್ಸರ ಇರತಾವು' ನಾನು ವಿವರಿಸಲು ಪ್ರಯತ್ನಿಸಿದೆ.

ಬೆರಳು ಎಣಿಸಿ ಮುಗಿಸಿದ ಬೆಕ್ಕಣ್ಣ 'ನಮೋಯುಗ ಶುರುವಾಗಿ ಎಂಟು ವರ್ಸಾತಲ್ಲ, ಆವಾಗಿನಿಂದ ಶುಭಕೃತು ಸಂವತ್ಸರನೇ ಐತಿ. ಸಬ್ಕಾ ವಿಕಾಸ್ ಜೊತಿಗಿ ಸಬ್ಕಾ ಪ್ರಯಾಸ್ ಸೇರಿ ದೇಶ ಎಷ್ಟ್ ಪ್ರಗತಿಯಾಗೈತಿ. ಈಗಂತೂ ಪೆಟ್ರೋಲು, ಡೀಸೆಲು, ಎಲ್‌ಪಿಜಿ, ಎಣ್ಣೆ, ಹಿಂಗ ಎಷ್ಟ್ ಸಾಮಗ್ರಿ ಬೆಲೆ ಗಗನಮುಖಿಯಾಗೈತಿ... ಅಂದ್ರ ಪ್ರಗತಿ ಗ್ರಾಫ್ ಮ್ಯಾಲೆ ಹೋಗಾಕಹತ್ತೈತಿ. ಇದೇ ಎಂಟು ವರ್ಸದಾಗೆ 'ಅ'ದಿಂದ 'ಅಂ' ಅಂತ ಹೊಸಾದೊಂದು ಶ್ರೀಮಂತರ ವರ್ಣಮಾಲೆ ಶುರುವಾಗೇದ. ನಮ್ಮ ಅದಾನಿ, ಅಂಬಾನಿಗಳು ಹಗಲೂರಾತ್ರಿ ದುಡಿದೂ ದುಡಿದೂ ಶತಕೋಟಿಗಟ್ಟಲೆ ರೊಕ್ಕ ಗಳಿಸ್ಯಾರ. ಅವರೆಲ್ಲರಿಗೂ ಶುಭಕೃತು ಬಂದೇ ಭಾಳ ವರ್ಸಾಗೈತಿ. ಶ್ರೀಸಾಮಾನ್ಯರಿಗೆ ಯಾವ ಸಂವತ್ಸರ ಬಂದ್ರೇನಾತು, ಗೋಳು ತಪ್ಪಿದ್ದಲ್ಲ' ಎಂದು ಅಣಕಿಸಿ ಹೊರಗೋಡಿತು.

ಅರ್ಧಗಂಟೆಯಲ್ಲೇ ಪುಟಾಣಿ ಇಲಿಯೊಂದನ್ನು ಹಿಡಿದುಕೊಂಡು ಓಡಿಬಂತು. 'ಅಲ್ಲೇ ತಿಂದುಬರೂದು ಬಿಟ್ ಇಲ್ಲಿಗ್ಯಾಕೆ ತಂದೀಯಲೇ... ಈಗೇನ್ ಅದನ್ನ ಹಲಾಲ್ ಕಟ್ ಮಾಡತೀಯೋ ಅಥವಾ ಜಟ್ಕಾ ಕಟ್ ಮಾಡಿ ತಿಂತೀಯೋ' ಬೈಯುತ್ತಲೇ ಕುತೂಹಲದಿಂದ ಕೇಳಿದೆ.

'ಎರಡೂ ಅಲ್ಲ, ನಾ ಮಾರ್ಜಾಲ ಕಟ್ ಮಾಡತೀನಿ' ಎನ್ನುವಷ್ಟರಲ್ಲಿ ಬೆಕ್ಕಣ್ಣನಿಂದ ಬಿಡಿಸಿಕೊಂಡ ಇಲಿ ಚಂಗನೆ ಹೊರಗೆ ಜಿಗಿಯಿತು! ಕೋಪ ನೆತ್ತಿಗೇರಿದ ಬೆಕ್ಕಣ್ಣ, 'ನನ್ ವರ್ಷತೊಡಕು ಊಟಕ್ಕೂ ಕಲ್ಲು ಹಾಕಿದಿ ನೀ. ಎಲ್ಲಾರೂ ಅವರವರ ಪದ್ಧತಿ ಹಂಗ ಕಟ್ ಮಾಡಿ ತಿಂತಾರ. ನೀವು ಮನಷ್ಯಾರು ಜಗಳ, ದ್ವೇಷ ಮಾಡೂದು ಬಿಟ್ಟರೆ ಈ ಸಂವತ್ಸರ ಶುಭವಾಗತೈತಿ' ಎಂದು ಗುರುಗುಡುತ್ತಲೇ ಕಣಿ ಹೇಳಿತು!

ಸಂಗತ

ಪೂರ್ವಗ್ರಹವೆಂಬ ಮುಳ್ಳುತಂತಿ ಚುಚ್ಚೀತು

ನಮಗೇ ಅರಿವಾಗದಂತೆ ನಮ್ಮ ವ್ಯಕ್ತಿತ್ವವನ್ನು ಬದಲಾಯಿಸಿಬಿಡುವ ಪೂರ್ವಗ್ರಹಗಳನ್ನು ಮೀರುವುದೇ ಈಗ ನಮ್ಮ ಮುಂದಿರುವ ದೊಡ್ಡ ಸವಾಲು

• ದೀಪಾ ಹಿರೇಗುತ್ತಿ

ಪೂರ್ವಗ್ರಹಗಳು ಬಹಳಷ್ಟು ಸಲ ನಮ್ಮ ಭಾವನೆಗಳನ್ನು, ಚಿಂತನೆಗಳನ್ನು, ವರ್ತನೆಗಳನ್ನು ಮಾತ್ರವಲ್ಲದೆ ನಮ್ಮ ಬದುಕನ್ನು ಕೂಡ ನಿರ್ದೇಶಿಸುತ್ತವೆ. ಅಷ್ಟೇ ಅಲ್ಲ, ದೇಶವೊಂದು ಊಹಿಸಲಾಗದಂತಹ ಸಂಕಷ್ಟದ ಪಾತಾಳದತ್ತ ಜಾರಲು ಈ ಅಡಿಪಾಯ ಇಲ್ಲದ ಕಲ್ಪನೆಗಳು ಕಾರಣವಾಗಬಲ್ಲವು.

ತತ್ವಜ್ಞಾನಿ ವಿಲಿಯಂ ಹ್ಯಾಝ್ಲಿಟ್ ಹೇಳಿದ ಹಾಗೆ, ಅಜ್ಞಾನದ ಕೂಸು ಈ ಪೂರ್ವಗ್ರಹ. ಮಾನವ ಜಗತ್ತಿನಲ್ಲಿ ಹಿಂದಿನಿಂದಲೂ ನಡೆದ ಅನಾಹುತಗಳಿಗೆ, ರಕ್ತಪಾತಗಳಿಗೆ ಕಾರಣವಾದ ಮುಖ್ಯ ಅಂಶಗಳಲ್ಲಿ ಈ ಪೂರ್ವಗ್ರಹವೂ ಒಂದು. ತಾವೇ ಶ್ರೇಷ್ಠ, ತಮ್ಮ ನಂಬಿಕೆಗಳೇ ಅತ್ಯುತ್ತಮ ಎಂಬ ಮೂರ್ಖತನವು ಪೂರ್ವಗ್ರಹ ಜಗತ್ತಿನಲ್ಲಿ ಮಾಡಿರುವ ಅನಾಹುತಗಳಿಗೆ ಲೆಕ್ಕವಿದೆಯೇ? ಜರ್ಮನಿಯ ಬೀಭತ್ಸ ಹೋಲೋಕಾಸ್ಟ್ (holocaust) ಇರಬಹುದು, ಮನುಷ್ಯನನ್ನೇ ಮನುಷ್ಯನೆಂದು ಗುರುತಿಸಲು ಹಿಂಜರಿಯುತ್ತಿರುವ ಭಾರತದ ಜಾತಿವ್ಯವಸ್ಥೆ ಇರಬಹುದು, ಜಗತ್ತಿನ ಹಲವೆಡೆ ಜನಾಂಗೀಯ ಕಲಹಗಳು ಹರಿಸಿದ ರಕ್ತ ಇರಬಹುದು. ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ಪೂರ್ವಗ್ರಹದ ಕಹಿ ಪರಿಣಾಮವನ್ನು ಇಂದಿಗೂ ಜಗತ್ತಿನಾದ್ಯಂತ ಹೆಣ್ಣುಮಕ್ಕಳು ಅನುಭವಿಸುತ್ತಿದ್ದಾರೆ!

ಈಗ ನಾವೇ ನೋಡುತ್ತಿರುವ ಹಾಗೆ ಉಡುಗೆ ತೊಡುಗೆ, ಆಹಾರ, ಆಚಾರ ವಿಚಾರಗಳನ್ನಿಟ್ಟುಕೊಂಡು ಧರ್ಮಗಳ ನಡುವೆ ಯಾರಾದರೂ ಸಣ್ಣ ಬಿರುಕನ್ನುಂಟು ಮಾಡಿದರೂ ಸಾಕು, ಅದು ಕಂದಕವಾಗಿಬಿಡಲು ಮುಖ್ಯ ಕಾರಣ ಜನರ ಮನಸ್ಸಿನಲ್ಲಿರುವ ಈ ಪೂರ್ವಗ್ರಹ!

ಜನಾಂಗ, ಸಂಸ್ಕೃತಿ, ಧರ್ಮ ಮಾತ್ರವಲ್ಲ, ಪೂರ್ವಗ್ರಹದ ಬೇರುಗಳು ನಾವು ತಿಳಿದುಕೊಂಡಿದ್ದಕ್ಕಿಂತಲೂ ಬಹಳ ಆಳವಾಗಿವೆ! ವಾಸ್ತವದ ಅಗತ್ಯವೇ ಇಲ್ಲದೆ ಕ್ಷಣಾರ್ಧದಲ್ಲಿ ಅಭಿಪ್ರಾಯಗಳನ್ನು ರೂಪಿಸುವ ತಾಕತ್ತು ಪೂರ್ವಗ್ರಹಕ್ಕಲ್ಲದೇ ಬೇರೆ ಯಾವುದಕ್ಕಿದೆ? ಸಾಕ್ಷಿಯಿಲ್ಲದೇ ತೀರ್ಪು ನೀಡುವ ನ್ಯಾಯಾಧೀಶನ ಇನ್ನೊಂದು ಹೆಸರೇ ಪೂರ್ವಗ್ರಹ. ಮುಂಗುಸಿಯ ಬಾಯಲ್ಲಿ ರಕ್ತದ ಕಲೆಯನ್ನು ನೋಡಿ, ಇದೇ ತನ್ನ ಮಗುವನ್ನು ಕೊಂದಿದೆ ಎಂದು ಅದನ್ನು ಸಾಯಿಸಿದ ಗಂಗಮ್ಮನ ಪಾಡು ನಮ್ಮದು.

ವಸಾಹತುಶಾಹಿಯ ಉದ್ದೇಶವನ್ನೇ ಮರೆಮಾಚುವ 'ವೈಟ್ ಮ್ಯಾನ್ಸ್ ಬರ್ಡನ್' ಸಿದ್ಧಾಂತ ಹುಟ್ಟಿಕೊಂಡಿದ್ದು ಇದೇ ಪೂರ್ವಗ್ರಹದಿಂದ. ತಾನಾಳುವ ದೇಶಗಳ ರಕ್ತ ಹೀರಿದರೂ ತಾನು ಆ ದೇಶಗಳಿಗೆ ಉಪಕಾರ ಮಾಡುತ್ತಿದ್ದೇನೆಂಬ ಪೂರ್ವಗ್ರಹವನ್ನು ಲಂಡನ್ ಹೊಂದಿತ್ತು! ಗುಲಾಮಗಿರಿಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದ ದಕ್ಷಿಣ ಅಮೆರಿಕದ ಜನರು ತನ್ಮೂಲಕ ತಾವು ಗುಲಾಮರಿಗೆ ಅನ್ನ ಹಾಕಿ ಬಹುದೊಡ್ಡ ಉಪಕಾರ ಮಾಡುತ್ತಿದ್ದೇವೆ ಎಂದೇ ನಂಬಿದ್ದರು. ವಾಸ್ತವದಲ್ಲಿ ಈ ಶ್ರೀಮಂತ ಪ್ಲಾಂಟರುಗಳ ಐಷಾರಾಮಿ ಬದುಕಿನ ಹಿಂದೆ ಗುಲಾಮರು ಹರಿಸಿದ ಬೆವರು, ರಕ್ತವಿತ್ತು. ಹಿಂದೆಲ್ಲ ಭಾರತದಲ್ಲೂ ದೊಡ್ಡದೊಡ್ಡ ಭೂಮಾಲೀಕರು ತಾವು ಹೊಟ್ಟೆಬಟ್ಟೆಗೆ ಕೊಟ್ಟು ಕಾಪಾಡುತ್ತಿದ್ದೇವೆ ಎಂದು ಮಕ್ಕಳನ್ನು ಜೀತಕ್ಕೆ ಇಟ್ಟುಕೊಳ್ಳುವುದನ್ನು ಸಮರ್ಥಿಸಿಕೊಳ್ಳುತ್ತಿದ್ದರು! ಈಗಲೂ ಈ ಮನೋಭಾವವನ್ನು ಹೊಂದಿರುವ ವ್ಯಕ್ತಿಗಳು ಬೇಕಾದಷ್ಟು ಜನ ಸಿಕ್ಕುತ್ತಾರೆ.

ನಮ್ಮ ಪೂರ್ವಗ್ರಹವನ್ನು ಮತ್ತೊಬ್ಬರಿಗೆ ಹಂಚುವುದು ತಪ್ಪು. ಅದನ್ನು ನಂಬಿ ಏನಾದರೂ ಮೂರ್ಖತನದ ಕಾರ್ಯಕ್ಕೆಳಸುವುದು ಮತ್ತೂ ಅಪಾಯಕಾರಿ. ನಿರ್ದಿಷ್ಟ ಧರ್ಮ, ಜಾತಿ ಗುಂಪಿನ ಜನರು ಒಂದೆಡೆ ಸೇರಿದಾಗ, ವಿದ್ಯಾವಂತರೆನಿಸಿಕೊಂಡ ಕೆಲವರು ಆಡುವ ಮಾತುಗಳನ್ನು ಕೇಳಿದರೆ ಆಘಾತವಾಗುತ್ತದೆ. ಅಂದು ನಾಲ್ಕು ಗೋಡೆಯ ನಡುವೆ ಇರುತ್ತಿದ್ದ ಇಂತಹ ಮಾತುಗಳು ಯಾವುದೇ ಹಿಂಜರಿಕೆ ಇಲ್ಲದೇ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗುವುದು ಕೂಡ ಆಘಾತಕಾರಿ ಬೆಳವಣಿಗೆ. ಅತಿಯಾದಾಗ ಪೂರ್ವಗ್ರಹವು ಮಾನಸಿಕ ಕಾಯಿಲೆಯಾಗಿಬಿಡುವುದು ಹೀಗೆ.

ಯಾವುದೇ ಆಹ್ವಾನವಿಲ್ಲದೆ, ನಮಗೇ ಅರಿವಾಗದಂತೆ ನಮ್ಮ ಮಿದುಳೊಳಗೆ ಸೇರಿಕೊಂಡು ನಮ್ಮ ವ್ಯಕ್ತಿತ್ವವನ್ನು ಬದಲಾಯಿಸಿಬಿಡುವ ಈ ಪೂರ್ವಗ್ರಹಗಳನ್ನು ಮೀರುವುದೇ ನಮ್ಮ ದೊಡ್ಡ ಸವಾಲು. ಯಾವುದೇ ವಿಷಯದ ಬಗ್ಗೆ ನಮ್ಮ ಪೂರ್ವಗ್ರಹಿಕೆಗಳು ಸ್ವತಃ ಬೆಳೆಯುವುದರಿಂದ ನಮ್ಮನ್ನು ತಡೆಯಬಲ್ಲವು. ಪ್ರಯತ್ನದ ಕೊರತೆಯಿಂದಲೋ ಅಥವಾ ಮಾನವಸಹಜ ತಪ್ಪುಗಳಿಂದಲೋ ಆಗುವುದಕ್ಕಿಂತ ಹೆಚ್ಚಿನ ಅಪಾಯ ಈ ಸ್ವಕಲ್ಪಿತ ಗ್ರಹಿಕೆಗಳಿಂದ ಆಗುತ್ತದೆ.

ಜ್ಞಾನದ ಬಾಗಿಲಿಗೆ ತಡೆಯಾಗಿರುವ ಪೂರ್ವಗ್ರಹವು ಪರಸ್ಪರರನ್ನು ಬೇರ್ಪಡಿಸುವ ಮುಳ್ಳುತಂತಿಯೂ ಹೌದು. ಈ ಮುಳ್ಳುತಂತಿಯನ್ನು ಕತ್ತರಿಸಿಹಾಕದಿದ್ದರೆ ಮನುಷ್ಯ ಮನುಷ್ಯನಾಗಿ ಬದುಕಲು ಬೇಕಾದುದಕ್ಕಿಂತ ಹೆಚ್ಚಿನ ಮಹತ್ವವನ್ನು ಇವರು ಚರ್ಮದ ಬಣ್ಣಕ್ಕೆ, ಹುಟ್ಟಿದ ಧರ್ಮ, ಜಾತಿಗೆ ಕೊಟ್ಟುಬಿಟ್ಟಿದ್ದರಲ್ಲ ಎಂದು ಮುಂದೊಂದು ದಿನ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಬೈದುಕೊಳ್ಳುವುದಂತೂ ಗ್ಯಾರಂಟಿ. ಇಂದು ತಮ್ಮ ಕಣ್ಣಿನಿಂದ ನೋಡುವ, ನೋಡಿದ್ದನ್ನು ಪರಿಶೀಲಿಸುವ ಮತ್ತು ಹೃದಯದಿಂದ ಯೋಚಿಸುವ ಜನರ ಸಂಖ್ಯೆ ಅತ್ಯಂತ ಕಡಿಮೆ ಇದೆ. ಹಾಗಾಗಿಯೇ ಜಗತ್ತು ಪೂರ್ವಗ್ರಹಪೀಡಿತವಾಗಿದೆ. ಒಬ್ಬರ ಜತೆ ಒಡನಾಡದೇ ಅವರ ಬಗ್ಗೆ ದ್ವೇಷ ಬೆಳೆಸಿಕೊಳ್ಳುವ ಈ ಪ್ರವೃತ್ತಿ ಅತ್ಯಂತ ನೀಚತನದ್ದು.

ಬಿಗಿದ ಮುಷ್ಟಿಯಿಂದ ನಾವು ಯಾರ ಕೈಯ್ಯನ್ನೂ ಕುಲುಕಲಾರೆವು. ಎದುರಿಗಿರುವ ನಮ್ಮದೇ ಮಗುವಿನ ಕೆನ್ನೆಯನ್ನೂ ಸವರಲಾರೆವೆಂಬ ಅರಿವು ಮೂಡಬೇಕಾಗಿರುವುದು ಸದ್ಯದ ತುರ್ತು.

ವಾಚಕರ ವಾಣಿ

ಬಿಬಿಎಂಪಿ ಕಾರ್ಯವೈಖರಿಗೆ ದಿಕ್ಸೂಚಿ?

ಬಿಬಿಎಂಪಿ 'ಗುಪ್ತ' ಬಜೆಟ್ ಸುದ್ದಿ (ಪ್ರ.ವಾ., ಏ. 1) ಓದಿ ಒಂದು ರೀತಿಯ ಅಸಹಾಯಕತೆ ಆವರಿಸಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಯಾವುದೂ ಸುಸೂತ್ರವಿಲ್ಲ. ಯಾರ ನಿಯಂತ್ರಣವೂ ಇಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಉಸ್ತುವಾರಿಯೂ ಹೆಸರಿಗಷ್ಟೇ. ಸಮಸ್ಯೆಗಳ ಸರಮಾಲೆಯನ್ನೇ ಹೊತ್ತ ಬೆಂಗಳೂರನ್ನು ಸಮರ್ಥವಾಗಿ ಮುನ್ನಡೆಸಬೇಕಾದ ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದಿರುವುದು ಅಧಿಕಾರಿಗಳಿಗೆ ವರದಾನವಾಗಿ ಪರಿಣಮಿಸಿದೆ.

ರಾಜ್ಯ ಸರ್ಕಾರವು ಬಿಬಿಎಂಪಿಯ ಬಜೆಟ್ ಅನ್ನು ಕಾಟಾಚಾರಕ್ಕೆ ಎಂಬಂತೆ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅನುಮತಿಸಿರುವುದು ಮುಂದಿನ ಒಂದು ವರ್ಷದ ಬಿಬಿಎಂಪಿಯ ಕಾರ್ಯವೈಖರಿಯ ದಿಕ್ಸೂಚಿಯಂತಿದೆ! ವಿವರಣೆಯೇ ಇಲ್ಲದ ಮೊದಲ ಸವ್ಯಸಾಚಿ ಬಜೆಟ್ ಬಹುಶಃ ಇದಾಗಿರಬೇಕು. ಬೇಲಿಗೆ ಓತಿಕ್ಯಾತ ಸಾಕ್ಷಿ ಎಂಬಂತೆ, ವ್ಯವಸ್ಥೆಗಳೆಲ್ಲ ದುಃಸ್ಥಿತಿಗೆ ತಲುಪಿ, ಸುಧಾರಣೆಗಳೆಲ್ಲ ಗೌಣವಾಗಿ ಲೂಟಿಯೇ ಮೇಲುಗೈ ಪಡೆಯುತ್ತಿದೆ.

ರಿಪ್ಪನ್‌ಪೇಟೆ ನಟರಾಜ್, ಬೆಂಗಳೂರು

ತಟಸ್ಥ ನಿಲುವು ತಂದ ಲಾಭ

ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾದಾಗ ಪಶ್ಚಿಮದ ರಾಷ್ಟ್ರಗಳು ಭಾರತದ ನಿಲುವನ್ನು ಸ್ಪಷ್ಟಪಡಿಸಲು ಒತ್ತಡ ಹೇರಿದ್ದವು. ಭಾರತ ಮಾತ್ರ ತಟಸ್ಥ ನಿಲುವನ್ನು ವ್ಯಕ್ತಪಡಿಸಿದಾಗ, ನಮ್ಮೊಳಗಿನ ಒಂದಷ್ಟು ಜನ ಕೂಡ ಸರ್ಕಾರದ ನಿಲುವನ್ನು ಟೀಕಿಸಿದ್ದರು. ಹಿಂದೆ ಬಲಿಷ್ಠ ರಾಷ್ಟ್ರಗಳ ನೆರವು ಕೇಳುತ್ತಿದ್ದ ಭಾರತ ಈಗ ಬೆಳೆದು ನಿಂತಿರುವ ಪರಿ ನೋಡಿದರೆ, ನಮ್ಮ ನೆರವಿನ ಅನಿವಾರ್ಯ ಬಲಿಷ್ಠ ರಾಷ್ಟ್ರಗಳಿಗಿದೆ ಎಂಬುದು ತಿಳಿಯುತ್ತದೆ. ರಷ್ಯಾ, ಅಮೆರಿಕಗಳೆರಡೂ ಭಾರತದ ಸ್ನೇಹಕ್ಕಾಗಿ ಪೈಪೋಟಿ ನಡೆಸುತ್ತಾ, ಬೇಕಾದ್ದನ್ನು ಕೊಡುವ ಮಾತನಾಡುವುದು ನೋಡಿದರೆ, ಅಂತರರಾಷ್ಟ್ರೀಯ ಸಂಬಂಧಗಳು ಲಾಭಕ್ಕಾಗಿ ರಚಿತಗೊಂಡಿರುತ್ತವೆ ಎನ್ನುವ ಮಾತು ನಿಜವೆನಿಸುತ್ತದೆ.

ಪುನೀತ್ ಕುಮಾರ್, ಸುಳ್ಯ

ಜನಬದುಕು ಮುಜುಗರಕ್ಕೆ ಒಳಗಾಗದಿರಲಿ

ನೂರಾರು ವರ್ಷಗಳ ಕಾಲ ನಮ್ಮ ಸಮುದಾಯಗಳು ಆಹಾರ ಪದ್ಧತಿಯ ಕುರಿತು ಕಟ್ಟಿಕೊಂಡ ಅನುಭಾವಿಕ ತಾತ್ವಿಕತೆಯನ್ನು ಬೀದಿಯಲ್ಲಿ 'ಮಾಂಸ ಮಾರುವಲ್ಲಿಗೆ' ಇಳಿಸಲಾಯಿತು! ಮನುಷ್ಯ ಮೂಲತಃ ಮಾಂಸಾಹಾರಿ. ನಾಗರಿಕತೆ ಆರಂಭವಾಗಿದ್ದೇ 'ಬೇಟೆ ಮತ್ತು ಸಂಗ್ರಹಕಾರರ' ಘಟ್ಟದಿಂದ. ನಂತರ ಸಂಸ್ಕೃತಿಗಳ ನಡುವಿನ ವೈವಿಧ್ಯಗಳ ಉಗಮದ ಕಾರಣಕ್ಕೆ ಕೆಲವು ಸಮುದಾಯಗಳು ಸಸ್ಯಾಹಾರಕ್ಕೆ ಸೀಮಿತಗೊಂಡವು. ಆದರೆ ಎಂದಿಗೂ ಮನುಷ್ಯ ತಾನು ತಿನ್ನುವ ಆಹಾರವನ್ನು 'ಬೀದಿ ರಾಜಕೀಯ'ದ ಭಾಗ ಮಾಡಿಕೊಂಡಿರಲಿಲ್ಲ.

ನಾವು ಚಿಕ್ಕವರಿದ್ದಾಗ ಮನೆಯಲ್ಲಿ ಮಾಂಸಾಹಾರ ಮಾಡಿದ್ದರೆ ಪಕ್ಕದ ಮನೆಯ ಸಸ್ಯಾಹಾರಿಗಳು ಏನು ಅಡುಗೆ ಎಂದು ಕೇಳಿದಾಗ, ಆಲೂಗಡ್ಡೆ ಸಾರು ಅಂತ ಹೇಳು ಎಂದು ಹೇಳಿಕೊಡುತ್ತಿದ್ದರು. ಇದರ ಹಿಂದೆ, ಎದುರಿಗಿರುವ ವ್ಯಕ್ತಿಯ ಆಹಾರ ಪದ್ಧತಿಯನ್ನು ಗೌರವಿಸುವ ಸೂಕ್ಷ್ಮತೆ ಇತ್ತು. ಆಹಾರದ ಕುರಿತ ಶ್ರೇಷ್ಠ, ಕನಿಷ್ಠ ನಿರೂಪಣೆಗಳ ಆಚೆಗೆ ಸಮುದಾಯವೇ ಕಟ್ಟಿಕೊಂಡ ಸೂಕ್ಷ್ಮತೆಯೊಂದು ನಮ್ಮ ನೆರೆಹೊರೆಯಲ್ಲಿ ಅಸ್ತಿತ್ವದಲ್ಲಿತ್ತು. ಆದರೆ ಇಂದು ಕೆಲವು ಗುಂಪುಗಳ 'ಜನಾಂಗೀಯ ನಂಜಿಗೆ' ದೃಶ್ಯ ಮಾಧ್ಯಮಗಳ ಪರದೆ ಪೂರ ಮಾಂಸವೇ ತುಂಬಿಕೊಂಡಿದೆ! 'ರಾಜಕೀಯ ಹಿಂದುತ್ವ'ದ ಮಿತಿಯನ್ನು ಇನ್ನಾದರೂ ಜನರು ಗುರುತಿಸಿಕೊಳ್ಳದಿದ್ದರೆ ಇವರು ಜಾಗತಿಕ ಮಟ್ಟದಲ್ಲಿ ನಮ್ಮ ದೇಶದ ಜನಬದುಕು, ಪರಂಪರೆಯನ್ನು ಮುಜುಗರಕ್ಕೆ ಒಡ್ಡುತ್ತಾರೆ ಅಷ್ಟೆ.

ಕಿರಣ್ ಎಂ. ಗಾಜನೂರು, ಕಲಬುರಗಿ

ಬೇವು– ಬೆಲ್ಲದಂತಾದ ಬಜೆಟ್ ಅಧಿವೇಶನ!

ಇತ್ತೀಚೆಗೆ ಜರುಗಿದ ರಾಜ್ಯ ವಿಧಾನಮಂಡಲದ ಬಜೆಟ್ ಅಧಿವೇಶನದಲ್ಲಿ ಅನೇಕ ವಿಷಯಗಳು ಚರ್ಚೆಗೆ ಬಂದವು. ಅವುಗಳಲ್ಲಿ ಕೆಲವು ಅರ್ಥಪೂರ್ಣವಾಗಿದ್ದವು. ಆದರೆ ವಿಧಾನಪರಿಷತ್‌ನಲ್ಲಿ ಪ್ರಮುಖವಾಗಿ ಬೆಂಗಳೂರಿಗೆ ಸಂಬಂಧಿಸಿದಂತೆ ಅನೇಕ ವರ್ಷಗಳಿಂದ ಚರ್ಚೆ ಆಗುತ್ತಿರುವ ವಿಷಯಗಳೇ ಮತ್ತೆ ಚರ್ಚೆ ಆದದ್ದು ಸೋಜಿಗದಂತೆ ಕಾಣಿಸಿತು. ಅದೇ ಬೆಂಗಳೂರು ರಸ್ತೆ, ಮೇಲುಸೇತುವೆಗಳು, ಅನಧಿಕೃತ ಬಡಾವಣೆಗಳು... ಹೀಗೆ ಪಟ್ಟಿ ಮುಂದುವರಿಯುತ್ತದೆ. ಇನ್ನು ಶಿಕ್ಷಕರ ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರುವ ಸದಸ್ಯರು, ಶಿಕ್ಷಕರ ಸಾರ್ವಕಾಲಿಕ ಮತ್ತು ಎಂದೆಂದಿಗೂ ಬಗೆಹರಿಯದ ಅದೇ ಸಮಸ್ಯೆಗಳಲ್ಲಿ ತಲ್ಲೀನರಾದರು. ಮಸೂದೆಗಳ ಬಗೆಗಿನ ಚರ್ಚೆಯೂ ಇದಕ್ಕೆ ಹೊರತಾಗಿರಲಿಲ್ಲ! ಅಲ್ಲಿಗೆ ಸದನದ ಕಲಾಪ ಮುಕ್ತಾಯ. ಪೂರ್ವ ತಯಾರಿಯೊಂದಿಗೆ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವವರ ಸಂಖ್ಯೆ ದಿನೇ ದಿನೇ ಕಡಿಮೆ ಆಗುತ್ತಿದೆ ಎಂಬ ಮಾತಿನಲ್ಲಿ ಹುರುಳಿಲ್ಲದೇ ಇಲ್ಲ. ಇನ್ನು ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ಹೊಸದಾಗಿ ಆಯ್ಕೆಯಾಗಿರುವ ಕೆಲ ಸದಸ್ಯರು ಅಪ್ಪಿತಪ್ಪಿಯೂ ತುಟಿಪಿಟಿಕ್ ಎನ್ನಲಿಲ್ಲ. ಸಭಾಪತಿ ಚರ್ಚೆಗೆ ಆಹ್ವಾನಿಸಿದರೂ ತಮ್ಮ ಆಸನ ಬಿಟ್ಟು ಏಳಲಿಲ್ಲ.

ಕೆಲವರು ತಾವು ಪ್ರತಿನಿಧಿಸುವ ಕ್ಷೇತ್ರಕ್ಕೂ ತಮಗೂ ಸಂಬಂಧವೇ ಇಲ್ಲ ಎಂಬಂತೆ ವರ್ತಿಸುವುದು, ಸದನಕ್ಕೆ ಮುಖ್ಯಮಂತ್ರಿ ಆಗಮಿಸಿದಾಗ ಖಾಸಗಿ ಬೇಡಿಕೆಗಳ ಪಟ್ಟಿಯೊಂದಿಗೆ ಅವರ ಕುರ್ಚಿಯ ಬಳಿ ಸಾಲಾಗಿ ನಿಲ್ಲುವುದು, ಶೂನ್ಯ ವೇಳೆಯಲ್ಲಿ ಇರುವ ಅವಕಾಶ ಬಳಸಿಕೊಳ್ಳದೆ ಪಕ್ಕದ ಆಸನದ ಸದಸ್ಯರೊಂದಿಗೆ ಹರಟೆ ಹೊಡೆಯುವುದು, ಸದನ ಸಮಾವೇಶಗೊಂಡಾಗ ಇರಬೇಕಾದ ಶಿಸ್ತು ಪಾಲಿಸದಿರುವುದು, ಆದರೆ ಇದಕ್ಕೆ ತದ್ವಿರುದ್ಧ ಎನ್ನುವಂತೆ ಕೆಲ ಸದಸ್ಯರು ಪೂರ್ವ ತಯಾರಿ ಮಾಡಿಕೊಂಡು ಸದನದಲ್ಲಿ ಚರ್ಚೆಗೆ ಸಿದ್ಧರಾಗಿ ಬಂದಾಗ, ಅವರಿಗೆ ಚರ್ಚೆಗೆ ಅವಕಾಶವೇ ಸಿಗದೆ ನಿರಾಸೆ ಹೊಂದುವುದು ಸಹಜ ಎನ್ನುವಂತಾಗಿದೆ. ಇಂತಹ ಪರಿಸ್ಥಿತಿಗೆ ಹೊರತಾಗದ ಈ ಬಾರಿಯ ಅಧಿವೇಶನವೂ ಅತ್ತ ಪೂರ್ಣ ಸಿಹಿಯೂ ಅಲ್ಲದ ಇತ್ತ ಪೂರ್ಣ ಕಹಿಯೂ ಅಲ್ಲದ ಯುಗಾದಿ ಹಬ್ಬದ ಬೇವು ಬೆಲ್ಲದಂತೆ ಮುಕ್ತಾಯಗೊಂಡಿತು!

ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಫ್ತಿಗಿಂತ ಆಮದು ಭಾರಿ ಏರಿಕೆ
ವ್ಯಾಪಾರ ಕೊರತೆ ಹೊರೆ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ದೇಶದ ವಾರ್ಷಿಕ ರಫ್ತು ವಹಿವಾಟಿನಲ್ಲಿ ಹೊಸ ಮೈಲುಗಲ್ಲು ಸಾಧಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 23ರಂದು ಟ್ವೀಟ್ ಮಾಡಿದ್ದರು. 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ರಫ್ತು ವಹಿವಾಟಿನ ಮೊತ್ತವು 40,000 ಕೋಟಿ ಅಮೆರಿಕನ್ ಡಾಲರ್‌ನಷ್ಟಾಗಿದೆ (ಅಂದಾಜು ₹30.38 ಲಕ್ಷ ಕೋಟಿ) ಎಂದು ಮೋದಿ ಘೋಷಿಸಿದ್ದರು. ಈ ಅವಧಿಯಲ್ಲಿ ದೇಶದ ಆಮದು ಮೊತ್ತವು ಈವರೆಗಿನ ಗರಿಷ್ಠ ಮೊತ್ತವನ್ನು ತಲುಪಿದೆ. ವ್ಯಾಪಾರ ಕೊರತೆ ಈವರೆಗಿನ ಎರಡನೇ ಅತಿಗರಿಷ್ಠ ಮಟ್ಟವನ್ನು ತಲುಪಿದೆ. 2020-21ನೇ ಸಾಲಿಗೆ ಹೋಲಿಸಿದರೆ ವ್ಯಾಪಾರ ಕೊರತೆಯ ಮೊತ್ತವು ಶೇ 50ಕ್ಕೂ ಹೆಚ್ಚು ಪ್ರಮಾಣದಷ್ಟು ಏರಿಕೆಯಾಗಿದೆ.

ಮೋದಿ ಅವರು ಈ ಮಾಹಿತಿಯನ್ನು ಘೋಷಿಸುವಾಗ, ರಫ್ತಿಗೆ ಸಂಬಂಧಿಸಿದ ದತ್ತಾಂಶವನ್ನು ಮಾತ್ರ ಹೇಳಿದ್ದಾರೆ. ಆಮದು ಮತ್ತು ವ್ಯಾಪಾರ ಕೊರತೆಯೂ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿರುವುದರ ಮಾಹಿತಿಯನ್ನು ಅವರು ಬಹಿರಂಗಪಡಿಸಿಲ್ಲ. 2021-22ರಲ್ಲಿ ದೇಶದ ಆಮದು ವಹಿವಾಟಿನ ಮೊತ್ತವೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಒಟ್ಟು ಆಮದು ಮೊತ್ತವು ಸಾರ್ವತ್ರಿಕ ದಾಖಲೆಯನ್ನು ಮುಟ್ಟಿದೆ. ಇದರ ಜತೆಯಲ್ಲಿ ಆಮದು ಮತ್ತು ರಫ್ತು ಮೊತ್ತದ ನಡುವಣ ವ್ಯತ್ಯಾಸ (ವ್ಯಾಪಾರ ಕೊರತೆ) ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿದೆ.

‘ರಫ್ತು ವಹಿವಾಟಿನಲ್ಲಿ ಆಗಿರುವ ಏರಿಕೆಯು, ದೇಶದ ಆರ್ಥಿಕ ಪ್ರಾಬಲ್ಯವನ್ನು ಸೂಚಿಸುತ್ತದೆ’ ಎಂದು ಮೋದಿ ಅವರು ಟ್ವೀಟ್ ಮಾಡಿದ್ದರು. ಆದರೆ, ದತ್ತಾಂಶಗಳ ಪ್ರಕಾರ ದೇಶದ ಜಾಗತಿಕ ವಾಣಿಜ್ಯ ವಹಿವಾಟು ಉತ್ತಮ ಸ್ಥಿತಿಯಲ್ಲಿ ಇಲ್ಲ.

ದೇಶವೊಂದರ ಜಾಗತಿಕ ವಾಣಿಜ್ಯ ವಹಿವಾಟು ಉತ್ತಮ ಸ್ಥಿತಿಯಲ್ಲಿ ಇದೆ ಎಂಬುದನ್ನು ಆಮದು ಮತ್ತು ರಫ್ತು ನಡುವಣ ವ್ಯತ್ಯಾಸವನ್ನು ಪರಿಗಣಿಸಿ ನಿರ್ಧರಿಸಲಾಗುತ್ತದೆ. ರಫ್ತಿನ ಮೊತ್ತಕ್ಕಿಂತ ಆಮದು ಮೊತ್ತವು ಅಧಿಕವಾಗಿ ಇದ್ದರೆ, ಅದು ಉತ್ತಮ ಸ್ಥಿತಿ ಅಲ್ಲ ಎನ್ನಲಾಗುತ್ತದೆ. ರಫ್ತಿಗಿಂತ ಆಮದು ಮೊತ್ತವು ಕಡಿಮೆ ಇದ್ದರೆ, ಅದನ್ನು ಉತ್ತಮ ಸ್ಥಿತಿ ಎನ್ನಲಾಗುತ್ತದೆ. ಆದರೆ, 2021-22ನೇ ಸಾಲಿನ ಮೊದಲ 10 ತಿಂಗಳಲ್ಲಿ ದೇಶವು ರಫ್ತು ಮಾಡಿದ ಸರಕು ಮತ್ತು ಸೇವೆಗಳ ಮೊತ್ತಕ್ಕಿಂತ ಹೆಚ್ಚುವರಿಯಾಗಿ ₹11.52 ಲಕ್ಷ ಕೋಟಿಯಷ್ಟು ಸರಕು ಮತ್ತು ಸೇವೆಯನ್ನು ಆಮದು ಮಾಡಿಕೊಂಡಿದೆ. ಇದು ದೇಶದ ಈವರೆಗಿನ ಎರಡನೇ ಅತ್ಯಂತ ಗರಿಷ್ಠ ಮೊತ್ತದ ವ್ಯಾಪಾರ ಕೊರತೆಯಾಗಿದೆ.

ರಫ್ತು-ಆಮದು: ಅಂತರ ಹೆಚ್ಚಳ



• ಕೇಂದ್ರದಲ್ಲಿ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ವರ್ಷದಲ್ಲಿ ದೇಶದ ಒಟ್ಟು ರಫ್ತಿನ ಮೊತ್ತವು ₹18.96 ಲಕ್ಷ ಕೋಟಿಯಷ್ಟಿತ್ತು. ನಂತರದ ವರ್ಷಗಳಲ್ಲಿ ಇದು ಭಾರಿ ಪ್ರಮಾಣದಲ್ಲಿ ಏರಿಳಿತ ಕಂಡಿದೆ. 2021-22ನೇ ಆರ್ಥಿಕ ವರ್ಷದ ಮೊದಲ ಹತ್ತು ತಿಂಗಳ ಅಂತ್ಯಕ್ಕೆ ಇದು ₹25.28 ಲಕ್ಷ ಕೋಟಿಗೆ ಏರಿಕೆಯಾಗಿದೆ

• 2014-15ನೇ ಸಾಲಿನಲ್ಲಿ ದೇಶದ ಒಟ್ಟು ಆಮದಿನ ಮೊತ್ತವು ₹27.37 ಲಕ್ಷ ಕೋಟಿಯಷ್ಟು ಇತ್ತು. ನಂತರದ ವರ್ಷಗಳಲ್ಲಿ ಇದು ಏರಿಳಿತ ಕಂಡಿದೆ. 2021-22ನೇ ಸಾಲಿನ ಆರ್ಥಿಕ ವರ್ಷದ ಮೊದಲ ಹತ್ತು ತಿಂಗಳ ಅಂತ್ಯಕ್ಕೆ ಇದು ₹36.80 ಲಕ್ಷ ಕೋಟಿಗೆ ಏರಿಕೆಯಾಗಿದೆ

• 2014-15ನೇ ಸಾಲಿಗೆ ಹೋಲಿಸಿದರೆ, 2021-22ನೇ ಸಾಲಿನ ಮೊದಲ 10 ತಿಂಗಳ ಅಂತ್ಯದ ವೇಳೆಗೆ ವ್ಯಾಪಾರ ಕೊರತೆಯು ಶೇ 37.14ರಷ್ಟು ಏರಿಕೆಯಾಗಿದೆ. ಆದರೆ, 2020-21ನೇ ಸಾಲಿಗೆ ಹೋಲಿಸಿದರೆ, 2021-22ನೇ ಸಾಲಿನ ಮೊದಲ 10 ತಿಂಗಳ ಅಂತ್ಯದ ವೇಳೆಗೆ ವ್ಯಾಪಾರ ಕೊರತೆಯ ಮೊತ್ತವು ಶೇ 52.38ರಷ್ಟು ಏರಿಕೆಯಾಗಿದೆ. ಇದು ಈವರೆಗಿನ ಏರಿಕೆಯ ಗರಿಷ್ಠ ಪ್ರಮಾಣವಾಗಿದೆ

ಸಮತೋಲನವಿಲ್ಲದ ಬೆಳವಣಿಗೆ

ದೇಶದ ಜಾಗತಿಕ ವಾಣಿಜ್ಯ ವಹಿವಾಟಿನ ಬೆಳವಣಿಗೆಯಲ್ಲಿ ಯಾವುದೇ ಸ್ಥಿರತೆ ಇಲ್ಲ. ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ವಾಣಿಜ್ಯ ವಹಿವಾಟಿನ ಬೆಳವಣಿಗೆಯು ಡೋಲಾಯಮಾನವಾಗಿದೆ. ಕೆಲವು ವರ್ಷಗಳಲ್ಲಿ ರಫ್ತು ಮತ್ತು ಆಮದು ಎರಡೂ ಋಣಾತ್ಮಕ ಬೆಳವಣಿಗೆ ದಾಖಲಿಸಿವೆ. ಕೆಲವು ವರ್ಷದಲ್ಲಿ ಭಾರಿ ಪ್ರಮಾಣದ ಏರಿಕೆ ದಾಖಲಿಸಿವೆ. ಆದರೆ ಕೋವಿಡ್ ಕರಿಛಾಯೆಯಿಂದ ಹೊರಬಂದ ನಂತರದ ಆರ್ಥಿಕ ವರ್ಷವಾದ 2021-22ರಲ್ಲಿ ಭಾರಿ ಪ್ರಮಾಣದ ಏರಿಕೆ ದಾಖಲಾಗಿದೆ. ಆದರೆ ರಫ್ತಿನ ಏರಿಕೆ ಪ್ರಮಾಣ ಮತ್ತು ಆಮದಿನ ಏರಿಕೆ ಪ್ರಮಾಣದಲ್ಲಿ ಸಮತೋಲನವಿಲ್ಲ. ರಫ್ತು ಶೇ 48ರಷ್ಟು ಏರಿಕೆಯಾಗಿದ್ದರೆ, ಆಮದು ಶೇ 64ಕ್ಕಿಂತಲೂ ಹೆಚ್ಚಿನ ಪ್ರಮಾಣದ ಏರಿಕೆ ದಾಖಲಿಸಿದೆ



ಆಮದು: ಪ್ರಮುಖ ಸರಕುಗಳು

(2021 ಏಪ್ರಿಲ್‌ನಿಂದ 2022 ಜನವರಿವರೆಗೆ)
(₹ಕೋಟಿಗಳಲ್ಲಿ)



ರಫ್ತು: ಪ್ರಮುಖ ಸರಕುಗಳು

(2021 ಏಪ್ರಿಲ್‌ನಿಂದ 2022 ಜನವರಿವರೆಗೆ)
(₹ಕೋಟಿಗಳಲ್ಲಿ)



• ದೇಶವು ಅತಿಹೆಚ್ಚು ಆಮದು ಮಾಡಿಕೊಳ್ಳುವ ಸರಕುಗಳಲ್ಲಿ ಮೊದಲ ಸ್ಥಾನ ಕಚ್ಚಾತೈಲಕ್ಕೆ ಇದೆ. ಕಚ್ಚಾತೈಲದ ಆಮದಿನ ಪ್ರಮಾಣವು ಒಟ್ಟು ಆಮದಿನ ಶೇ 20ರ ಆಸುಪಾಸಿನಲ್ಲಿ ಇದೆ. ದೇಶದ ಆಮದು ಮೊತ್ತ ಹೆಚ್ಚಾಗಲು ಕಚ್ಚಾತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಆಮದಿನಲ್ಲಿ ಆಗಿರುವ ಏರಿಕೆಯೇ ಪ್ರಮುಖ ಕಾರಣ. ಕಚ್ಚಾತೈಲದ ನಂತರದ ಸ್ಥಾನ ಚಿನ್ನಕ್ಕೆ ಇದೆ

• ದೇಶವು ರಫ್ತು ಮಾಡುವ ಸರಕುಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳದ್ದು ಸಿಂಹಪಾಲು. ನಂತರದ ಸ್ಥಾನಗಳಲ್ಲಿ ಚಿನ್ನ, ಕಬ್ಬಿಣದ ಅದಿರು ಮತ್ತು ಔಷಧಗಳಿಗೆ ಇದೆ

ಆಧಾರ: ವಾಣಿಜ್ಯ ಸಚಿವಾಲಯ, ಪ್ರಧಾನಿ ನರೇಂದ್ರ ಮೋದಿ ಟ್ವೀಟ್

ಪ್ರಜಾವಾಣಿ ಗ್ರಾಫಿಕ್ಸ್

ಆಮದು: ಪ್ರಮುಖ 5 ದೇಶಗಳು

(2021 ಏಪ್ರಿಲ್‌ನಿಂದ 2022 ಜನವರಿವರೆಗೆ)
(₹ಕೋಟಿಗಳಲ್ಲಿ)



ರಫ್ತು: ಪ್ರಮುಖ 5 ದೇಶಗಳು

(2021 ಏಪ್ರಿಲ್‌ನಿಂದ 2022 ಜನವರಿವರೆಗೆ)
(₹ಕೋಟಿಗಳಲ್ಲಿ)



• ಭಾರತದ ಒಟ್ಟು ಆಮದಿನ ಪೂರೈಕೆದಾರರಲ್ಲಿ ಚೀನಾಕ್ಕೆ ಮೊದಲ ಸ್ಥಾನವಿದೆ. ಕಚ್ಚಾತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ವಸ್ತುಗಳು, ಆಟೊಮೊಬೈಲ್ ಬಿಡಿಭಾಗಗಳು, ಬಟ್ಟೆ ಮತ್ತು ನೂಲು, ಪ್ಲಾಸ್ಟಿಕ್ ಉತ್ಪನ್ನಗಳು, ರಸಗೊಬ್ಬರಕ್ಕಾಗಿ ಭಾರತವು ಚೀನಾವನ್ನು ಅವಲಂಬಿಸಿದೆ

• ಭಾರತದಿಂದ ಹೆಚ್ಚು ರಫ್ತಾಗುವ ದೇಶಗಳಲ್ಲಿ ಅಮೆರಿಕವು ಮೊದಲ ಸಾಲಿನಲ್ಲಿದೆ. ಅಮೆರಿಕಕ್ಕೆ ಪ್ರತಿ ಆರ್ಥಿಕ ವರ್ಷದಲ್ಲಿ ಆಗುವ ರಫ್ತಿನಲ್ಲಿ ಸೇವೆಗಳದ್ದು ಸಿಂಹಪಾಲು, ನಂತರದ್ದು ಔಷಧಗಳದ್ದು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 85

ಬ್ರಹ್ಮ ವಿಷ್ಣು ವಾಗ್ಯುದ್ಧ

ಬ್ರಹ್ಮ ತನ್ನ ಬಳಿ ಬಂದ ನಾರದನಿಗೆ ಶಿವತತ್ವವನ್ನು ಬೋಧಿಸುತ್ತಾನೆ. ಈ ಸಂದರ್ಭದಲ್ಲಿ ತನ್ನ ತಂದೆ ವಿಷ್ಣು ಎಂಬುದನ್ನು ತಿಳಿಯದೆ, ಆತನೊಂದಿಗೆ ವಾಗ್ಯುದ್ಧ ನಡೆಸಿದ ಘಟನೆಯನ್ನು ತಿಳಿಸುತ್ತಾನೆ.

‘ನಾನು ಆ ಸುಂದರವಾದ ರೂಪವನ್ನು ಕಂಡೊಡನೆ ಬಹಳ ಆಶ್ಚರ್ಯಪಟ್ಟೆ. ನೀಲವಾದ ಕಾಂತಿಯುಳ್ಳ, ಚಿನ್ನದಂತೆ ಹೊಳೆಯುತ್ತಿದ್ದ, ಸರ್ವಾತ್ಮಕನೂ ನಾಲ್ಕು ತೋಳುಗಳುಳ್ಳ ಸತ್ತಾಗಿಯೂ-ಅಸತ್ತಾಗಿಯೂ ರೂಪವುಳ್ಳಂಥ ಮಹಾಬಾಹುವಾದ ಶ್ರೀಮನ್ನಾರಾಯಣನನ್ನು ಕಂಡು ನನಗೆ ಸಂತೋಷವಾಯಿತು. ಲೀಲಾಮಯನೂ ಪ್ರಭುವೂ ಆದ ಆ ಶಿವನ ಮಾಯೆಯಿಂದ ಮೋಹಿತನಾಗಿದ್ದರಿಂದ, ನನ್ನ ತಂದೆ ಯಾರೆಂದು ತಿಳಿಯದೆ ಆ ಪುರಾಣಪುರುಷನಾದ ಶ್ರೀಹರಿಯನ್ನು ‘ನೀನಾರು ಹೇಳು’ ಎಂದು ಕೈಯಿಂದ ತಟ್ಟಿ ಎಬ್ಬಿಸಿದೆ. ನನ್ನ ತಿವಿತದಿಂದ ಎಚ್ಚೆತ್ತ ವಿಷ್ಣು, ಹಾಸಿಗೆಯ ಮೇಲೆದ್ದು ಕ್ಷಣಕಾಲ ಕುಳಿತುಕೊಂಡ. ಸೌಮ್ಯವಾದ ಕಾಂತಿಯಿಂದ ಬೆಳಗುತ್ತಿದ್ದ ಆ ಶ್ರೀಹರಿಯು ಅಲ್ಲಿ ನಿಂತಿದ್ದ ನನ್ನ ಕಂಡು ಒಂದು ಬಾರಿ ನಸುನಕ್ಕ. ’ಓ ವತ್ಸ, ಪಿತಾಮಹ! ನಿನಗೆ ಶುಭಾಗಮನ. ಭಯಪಡಬೇಡ, ನಿನ್ನ ಇಷ್ಟಾರ್ಥಗಳೆಲ್ಲವನ್ನೂ ಕೊಡುವೆ, ಸಂದೇಹಪಡಬೇಡ’ ಎಂದ.

ಅವನ ಆ ಮಾತನ್ನು ಕೇಳಿ ದೇವತೆಗಳಿಗೆಲ್ಲಾ ಶ್ರೇಷ್ಠನಾದ ನಾನು, ರಜೋಗುಣದ ಅಧಿಕ್ಯದಿಂದ ಆತನಲ್ಲಿ ದ್ವೇಷವುಳ್ಳವನಾಗಿದ್ದೆ. ಹೀಗಾಗಿ ನಾನು ಅಹಂಕಾರದಿಂದ ನಗುತ್ತಾ ಆ ಜನಾರ್ದನನಿಗೆ ‘ಇದೇನು? ಎಲ್ಲರನ್ನೂ ಧ್ವಂಸಮಾಡಿಬಿಡುವ ನನ್ನನ್ನು, ಗುರುವು ಶಿಷ್ಯನನ್ನು ಕರೆವಂತೆ, ವತ್ಸ, ವತ್ಸ, ಎಂದು ಕರೆಯುತ್ತೀಯೆ? ನಿನಗೆ ತಿಳಿಯದೇನು? ಈ ಜಗತ್ತುಗಳನ್ನೆಲ್ಲಾ ನಾನೇ ಸೃಷ್ಟಿಸುವೆನು. ಸಾಕ್ಷಾತ್ ಪ್ರಕೃತಿಯನ್ನೂ ಹೀಗೆ ಹೀಗೆ ಮಾಡೆಂದು ನಿಯಮಿಸುವೆನು. ನನ್ನನ್ನು ಪುರಾಣಪುರುಷನೆಂದೂ ಜನ್ಮರಹಿತನೆಂದೂ, ಸರ್ವವ್ಯಾಪಿಯೆಂದೂ ವಿಷ್ಣುಸಂಭವನೆಂತಲೂ ಕರೆಯುತ್ತಾರೆ ನೀನರಿಯೆಯಾ? ಕೇವಲ ಮೋಹಕ್ಕೆ ಸಿಲುಕಿದವನಾಗಿ, ಸರ್ವಪ್ರಪಂಚ ಸ್ವರೂಪನಾಗಿ, ಎಲ್ಲದಕ್ಕೂ ನಿರ್ಮಾತೃವಾಗಿ, ಕಮಲದಂತೆ ಕಣ್ಣುಳ್ಳವನೂ ಆದ ನನ್ನನ್ನು ಏನೆಂದು ಮಾತನಾಡಿಸುವೆ? ವೇದವೂ ನಿಯಮದಿಂದ ನನ್ನನ್ನು ಸ್ವಯಂಭು ಅನ್ನುತ್ತೆ. ಅಂದರೆ, ತಾನಾಗಿಯೇ ಬೇರೊಂದು ಕಾರಣವಿಲ್ಲದೆ ಹುಟ್ಟಿದವನು ಅಂತ ಅರ್ಥ. ಅಜ, ವಿಭು, ಪಿತಾಮಹ, ಸ್ವರಾಟ್, ಪರಮೇಷ್ಠೀ ಎಂಬುದಾಗಿ ಹೊಗಳುತ್ತದೆ’ ಎಂದೆ.

ನನ್ನ ಮಾತನ್ನು ಕೇಳಿ ಶ್ರೀಹರಿಯು ಕುಪಿತನಾದ. ‘ಓ ಚತುರ್ಮುಖಿ ಬ್ರಹ್ಮ, ನೀನು ಈ ಜಗತ್ತನ್ನು ಸೃಷ್ಟಿಸಲೂ ರಕ್ಷಿಸಲೂ ನಾಶರಹಿತವಾದ ನನ್ನ ಅಂಗದಿಂದ ಹುಟ್ಟಿದೆಯಲ್ಲವೆ? ಜಗತ್ತಿಗೆಲ್ಲಾ ಪ್ರಭುವೂ ನಿರಾಯಮನೂ ಆದ ನಾರಾಯಣನಾದ ನನ್ನನ್ನು ಮರೆತೆಯೇನು? ನಾನು ಪುರುಷನೂ ಪರಮಾತ್ಮನೂ ಎಲ್ಲರಿಗಿಂತಲೂ ಮೊದಲು ಆಹ್ವಾನಿಸಲ್ಪಡುವವನೂ ಸ್ತುತಿಗೆ ಅರ್ಹನಲ್ಲವೆ? ವಿಷ್ಣುವೂ ಅಚ್ಯುತನೂ ಈಶಾನನೂ ಈ ಜಗತ್ತು ಹುಟ್ಟಲು ಕಾರಣಭೂತನೂ ಮಹಾಬಾಹುವೂ ಸರ್ವವ್ಯಾಪಿಯೂ ಈಶ್ವರನೂ ನಾರಾಯಣನಾದ ನಾನಲ್ಲದೆ ಮತ್ತಾರು ಇರುವರು? ನೀನು ನನ್ನ ನಾಭಿಯಿಂದ ಹೊರಹೊರಟ ಕಮಲದಿಂದ ಹುಟ್ಟಿದವನು. ಇಲ್ಲಿ ನಿನ್ನ ತಪ್ಪೇನೂ ಇಲ್ಲ, ಇದೆಲ್ಲವೂ ನನ್ನ ಮಾಯೆಯ ಫಲ. ನಾನೇ ಎಲ್ಲ ದೇವತೆಗಳಿಗೂ ಒಡೆಯ. ಕರ್ತೃವೂ ಹರ್ತೃವೂ ಭರ್ತೃವೂ ನಾನೇ. ನನಗೆ ಸರಿಸಮನಾದ ವಿಭುವು ಯಾರೂ ಇಲ್ಲ. ನಾನೇ ಪರಬ್ರಹ್ಮ, ಆ ಪರತತ್ವವೂ ನಾನೇ, ಪರಂಜ್ಯೋತಿಯೂ ಪರಮಾತ್ಮನೂ ನಾನೇ. ಈ ಪ್ರಪಂಚದಲ್ಲಿರುವ ಸ್ಥಾವರ ಮತ್ತು ಜಂಗಮಾತ್ಮಕವಾದ ವಸ್ತುವಾವುದುಂಟೋ ಅದೆಲ್ಲವೂ ನಾನೇ ಎಂಬುದಾಗಿ ತಿಳಿ.

‘ಮೊದಲು ನಾನು ಅವ್ಯಕ್ತವನ್ನೂ, ಇಪ್ಪತ್ತನಾಲ್ಕು ತತ್ವಗಳನ್ನೂ ಸೃಷ್ಟಿಸಿದೆ. ಅವುಗಳಲ್ಲಿ, ಕೋಪ, ಹೆದರಿಕೆ ಮೊದಲಾದವುಗಳಿಗೆ ಕಾರಣಗಳಾದ ಅಣುಗಳು ಯಾವಾಗಲೂ ನೆಲಸಿರುವುವು. ಅವುಗಳ ಪ್ರಭಾವದಿಂದಲೇ ನೀನು ಮತ್ತಿತರ ಅಂಗಗಳೂ ಹುಟ್ಟಿದುವು. ನಾನೇ ಬುದ್ಧಿಯನ್ನೂ, ಮೂರು ವಿಧವಾದ ಅಹಂಕಾರವನ್ನೂ ಸೃಷ್ಟಿಸಿದೆ. ಅಹಂಕಾರದಿಂದ ಐದು ತನ್ಮಾತ್ರಗಳೂ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೂ, ಆಕಾಶಾದಿ ಪಂಚಭೂತಗಳೂ, ಇತರ ಪಾಂಚಭೌತಿಕವಸ್ತುಗಳೂ ಸೃಷ್ಟಿಸಲ್ಪಟ್ಟುವು. ಇಂಥ ನನ್ನನ್ನು ಚೆನ್ನಾಗಿ ತಿಳಿದುಕೊಂಡು, ನನಗೆ ಶರಣಾಗತನಾಗು. ನಿನ್ನನ್ನು ಕಾಪಾಡುತ್ತೇನೆ’ ಎಂದ ವಿಷ್ಣು. •

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಏಪ್ರಿಲ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 21 ನೇ ದಿನ ತಿಥಿ: (ಚೈತ್ರ ಶುದ್ಧ) ತೃತೀಯ ಗಂ. 13-56 ನಕ್ಷತ್ರ: ಭರಣಿ ಗಂ. 14-28 ಯೋಗ: ವಿಷ್ಕಂಭ ಗಂ. 07-42, ಕರಣ: ಗರಜೆ ಗಂ. 13-56. ರಾಹುಕಾಲ : ಬೆಳಿಗ್ಗೆ 07:30 - 09:00 ಸೂರ್ಯೋದಯ : 06-28 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 02 ರಂಜಾನ್ ದಿನ ವಿಶೇಷ: ಗೌರಿತೃತೀಯ (ಗಂಗೋರ್), ಆಂದೋಲನ ತೃತೀಯ, ಸರ್‌ಹುಲ್ (ಬಿಹಾರ್) ಅದೃಷ್ಟ ಸಂಖ್ಯೆ: 1, 7

ಮೇಷ: ಉದ್ಯೋಗರಂಗದಲ್ಲಿ ಕೆಲವು ಅನಿರೀಕ್ಷಿತ ಘಟನೆಗಳು ನಿಮ್ಮಿಂದ ನಡೆದು, ನಿಮ್ಮನ್ನು ವಿಶೇಷ ವ್ಯಕ್ತಿಯಾಗಿ ಗುರುತಿಸುವಂತಾಗಲಿದೆ. ವಿಲಾಸೀ ಜೀವನದ ಶೈಲಿಯನ್ನು ಅನುಭವಿಸುವ ಆಸೆ ಈಡೇರುವುದು.

ವೃಷಭ: ಕೆಲ ನಿರ್ಧಾರಗಳನ್ನು ಬದಲಾಯಿಸಿಕೊಳ್ಳುವುದರಿಂದ ನಿಮ್ಮೆಲ್ಲ ಕೆಲಸ-ಕಾರ್ಯಗಳು ಸುಲಲಿತವಾಗಿ ನೆರವೇರುವುದು. ಕಾಫೀ ಬೆಳೆಗಾರರಿಗೆ ಸಂತೋಷದ ವಾತಾವರಣ ಇರುತ್ತದೆ. ಖರ್ಚು ವೆಚ್ಚಗಳಲ್ಲಿ ಹಿಡಿತವಿರಲಿ.

ಮಿಥುನ: ಮಾನಸಿಕ ಅಸ್ಥಿರತೆಯಿಂದ ಕೆಲಸ ಕಾರ್ಯಗಳಲ್ಲಿದ್ದ ಉದಾಸೀನತೆ ಇಂದು ದೂರಾಗಲಿದೆ. ಆರ್ಥಿಕ ವಿಚಾರದಲ್ಲಿ ತಕ್ಕ ಮಟ್ಟಿನ ಸುಧಾರಣೆ. ಧೈರ್ಯದಿಂದ ಕಾರ್ಯ ಪ್ರವೃತ್ತರಾದಲ್ಲಿ ಇಷ್ಟಾರ್ಥ ಸಿದ್ಧಿಸಲಿದೆ.

ಕರ್ಕಾಟಕ: ನಿಮ್ಮ ಆಲೋಚನೆಯ ಹೊಸ ಕೆಲಸ ಕಾರ್ಯಗಳು ಸ್ವಲ್ಪ ತಡವಾಗಿ ಪ್ರಾರಂಭವಾದರೂ, ದಿನದ ಸ್ವಲ್ಪ ಸಮಯ ಕಳೆದ ಹಾಗೇ ಎಲ್ಲವೂ ನಿಮ್ಮ ಆಸೆಗೆ ತಕ್ಕಂತೆ ನಡೆಯಲಿದೆ. ಮನೆಯಲ್ಲಿನ ಶುಭ ಕಾರ್ಯಗಳ ಚಿಂತನೆಗೆ ಸಕಾಲ.

ಸಿಂಹ: ಮನಸ್ಸಿದ್ದರೆ ಮಾರ್ಗ ಎಂಬ ಮಾತು ಇಂದು ನಿಮಗೆ ಅನ್ವಯಿಸುತ್ತದೆ. ಹಲವು ದಿನಗಳಿಂದ ಅನುಭವಿಸುತ್ತಿರುವ ಅನಾರೋಗ್ಯ ಸಮಸ್ಯೆ ಉಪಶಮನವಾಗುವುದು. ವೈವಾಹಿಕ ಜೀವನಕ್ಕೆ ಸಮಯ ಕೂಡಿಬರಲಿದೆ.

ಕನ್ಯಾ: ಮನೆ ಬದಲಾವಣೆಯ ಯೋಜನೆಯಲ್ಲಿರುವವರಿಗೆ ಉತ್ತಮ ಸ್ಥಳ, ದರದಲ್ಲಿ ಮನೆ ದೊರಕಲಿದೆ. ಕರ್ತವ್ಯದ ಕಡೆಗೆ ಅಧಿಕ ಗಮನ ನೀಡಿ. ವಿದ್ಯಾರ್ಥಿಗಳಿಗೆ ಶಾರದಾ ಪರಮೇಶ್ವರಿಯ ಅನುಗ್ರಹ ಸಿಗಲಿದೆ.

ತುಲಾ: ಬೌದ್ಧಿಕ ಚಟುವಟಿಕೆಗಳ ಬೆಳವಣಿಗೆಗೆ ಬೇಕಾದ ಪ್ರತಿಭಾನ್ವಿತರ ಸಮಾಗಮನ ಸಿಗಲಿದೆ, ಉಪಯೋಗಿಸಿಕೊಳ್ಳುವುದು ನಿಮ್ಮ ಸ್ವಂತಿಕೆಯ ವಿಚಾರವಾಗಿರುತ್ತದೆ. ದೇವತಾ ಕಾರ್ಯಗಳಿಗಾಗಿ ದೂರ ಸಂಚಾರ ಒದಗಿ ಬರಲಿದೆ.

ವೃಶ್ಚಿಕ: ಕೆಲಸ ಕಾರ್ಯಗಳು ವಿಳಂಬ ನೀತಿಯನ್ನು ತೊರೆದು ಸರಾಗವಾಗಿ ನಡೆದು ಆರ್ಥಿಕವಾಗಿ ಮುನ್ನಡೆ. ಮೇಲಧಿಕಾರಿಗಳು ನಿರ್ಧಾರಗಳನ್ನು ಕೈಗೊಳ್ಳಲು ನಿಮ್ಮ ಇಚ್ಛೆಗೆ ಬಿಡುವರು. ಸ್ನೇಹಿತರಿಂದ ಸಮಸ್ಯೆ ಪರಿಹಾರ.

ಧನು: ಸಹೋದ್ಯೋಗಿಗಳ ಅನಗತ್ಯ ಮಾತಿನಿಂದಾಗಿ ಭಿನ್ನಾಭಿಪ್ರಾಯಗಳು ಸೃಷ್ಟಿಯಾಗುತ್ತದೆ. ನಿಮ್ಮ ಉದಾರ ಮನೋಭಾವ ನಿಮಗೆ ಅನುಕೂಲ ಒದಗಿಸಲಿದೆ. ಕದಡಿದ ಮನಸ್ಸಿಗೆ ಸಂಜೆಯ ಸಂತಸ ಉಂಟಾಗುವುದು.

ಮಕರ: ಮನರಂಜನೆಗಾಗಿ ಹೆಚ್ಚಾಗಿ ಖರ್ಚು ಮಾಡುವ ಸಾಧ್ಯತೆ ಇದೆ, ಹಣದ ಹರಿವು ತೃಪ್ತಿಕರವಾಗಿರುವುದರಿಂದ ಯಾವುದೇ ರೀತಿಯ ತೊಂದರೆ ಇರಲಾರದು. ಸೃಜನಶೀಲತೆ ತೋರುವುದರಿಂದ ಗೌರವ ಹೆಚ್ಚಲಿದೆ.

ಕುಂಭ: ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮ. ಒತ್ತಡ ನಿವಾರಿಸಿಕೊಳ್ಳಲು ವಿಶ್ರಾಂತಿ ಪಡೆಯಿರಿ. ದೇವತಾ ಕಾರ್ಯದ ಸುಸಂದರ್ಭದಲ್ಲಿ ಕುಟುಂಬ ಸಂಬಂಧಗಳು ಗಟ್ಟಿಯಾಗುವುದು.

ಮೀನ: ಆತ್ಮವಿಶ್ವಾಸದಿಂದ ಎಲ್ಲವನ್ನೂ ಸಾಧಿಸಲಿದ್ದೀರಿ. ಅವಿವಾಹಿತರು ಅಸ್ಪಷ್ಟ ನಿಲುವನ್ನು ಹೋಗಲಾಡಿಸಿದಲ್ಲಿ ಕಂಕಣಬಲದ ಸಾಧ್ಯತೆ. ಹಣದ ವಿಚಾರದಲ್ಲಿ ಎಚ್ಚರಿಕೆಯಿಂದಿದ್ದರೆ ಎಲ್ಲವನ್ನೂ ಸುಲಭವಾಗಿ ನಿಭಾಯಿಸಬಹುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿಧಿಯೊಡನೆ ಹೋರಾಟ

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು
ಬಿದಿಯ ಬಾಯಿಗೆ ಕವಳವಾಗದುಳಿಯುವನೆ? ||
ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು, ನೀ - |
ನೆದುರು ನಿಲೆ ಬಿದಿಯೊಲಿವ – ಮಂಕುತಿಮ್ಮ
|| 598 ||

ಪದ-ಅರ್ಥ: ಕದನವೆಂದಂಜಿ = ಕದನವೆಂದು- + ಅಂಜಿ, ಬಿದಿ = ವಿಧಿ ಕವಳವಾಗದುಳಿಯುವನೆ- = ಕವಳವಾಗದೆ(ಆಹಾರವಾಗದೆ) + ಉಳಿಯುವನೆ, ಎದೆಯನುಕ್ಕಾಗಿಸುತ = ಎದೆಯನು + ಉಕ್ಕಾಗಿಸು-ತ(ಗಟ್ಟಿ ಮಾಡುತ್ತ), ಮತಿಗದೆಯ = ಬುದ್ಧಿಯೆಂಬ ಗದೆಯನ್ನು, ಪಿಡಿದು = ಹಿಡಿದು, ನೀನೆದುರು = ನೀನು + ಎದುರು, ನಿಲೆ = ನಿಲ್ಲೆ, ಬಿದಿಯೊಲಿವ = - ಬಿದಿ(ವಿಧಿ) + ಒಲಿವ.

ವಾಚ್ಯಾರ್ಥ: ಬದುಕು ಒಂದು ಕದನ ಎಂದುಕೊಂಡು ಅಂಜಿ ಬಿಟ್ಟು ಓಡುವವನು ವಿಧಿಯ ಬಾಯಿಗೆ ಆಹಾರವಾಗದೆ ಉಳಿಯುತ್ತಾನೆಯೆ? ಎದೆಯನ್ನು ಗಟ್ಟಿಮಾಡಿಕೊಂಡು, ಬುದ್ಧಿಯೆಂಬ ಗದೆಯನ್ನು ಹಿಡಿದು ಎದುರು ನಿಂತರೆ ವಿಧಿ ಕೂಡ ಒಲಿಯುತ್ತಾನೆ.

ವಿವರಣೆ: ಬದುಕು ಒಂದು ರಣರಂಗ. ರಣಾಂಗಣದಲ್ಲಿ ಬಂದ ಮೇಲೆ ಯುದ್ಧ ಮಾಡದೆ ಹಿಂತಿರುಗಿ ಓಡಿದರೆ ಹೇಡಿ ಎನ್ನಿಸುವುದಿಲ್ಲವೆ? ಹಾಗೆ ಹೇಡಿಯಾಗುವುದಕ್ಕಿಂತ ಹೋರಾಡುವುದು ಲೇಸು. ರಣರಂಗದಿಂದಲೇನೋ ಓಡಿಹೋಗಬಹುದು, ಆದರೆ ಬದುಕಿನ ರಣರಂಗದಿಂದ ಓಡಿಹೋಗುವುದು ಎಲ್ಲಿಗೆ? ಒಂದು ಸಂದರ್ಭದಿಂದ ತಪ್ಪಿಸಿಕೊಳ್ಳಬಹುದು, ಜೀವನದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ವಿಧಿ ಅಲ್ಲಿಯೂ ಆತನನ್ನು ಕಬಳಿಸಿಬಿಡುತ್ತದೆ.

ಹಾಗಾದರೆ ವಿಧಿಯಿಂದ ತಪ್ಪಿಸಿಕೊಳ್ಳುವುದು ಹೇಗೆ? ಕಗ್ಗ ಅದಕ್ಕೊಂದು ಸಲಹೆ ನೀಡುತ್ತದೆ. ಎದೆಯನ್ನು ಗಟ್ಟಿಮಾಡಿಕೊ, ನಿನ್ನ ಬುದ್ಧಿಯೆಂಬ ಗದೆಯನ್ನು ಹಿಡಿದು ವಿಧಿಯ ಎದುರು ಹೋರಾಡು. ಆಗ ವಿಧಿಯೇ ನಿನ್ನ ಮೆಚ್ಚಿ ಒಲಿಯುತ್ತದೆ. ಹಾಗೆ ಹೋರಾಡಿದವರನ್ನು ಮೆಚ್ಚುವುದು ಮಾತ್ರವಲ್ಲ, ಅವರನ್ನು ಅಮರರನ್ನಾಗಿಸುತ್ತದೆ. ಅಂತಹ ನೂರಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ತಾನು ಬದುಕುವುದಿಲ್ಲವೆಂದು ತಿಳಿದಿದ್ದರೂ, ಅನೇಕ ಅತಿರಥ, ಮಹಾರಥರು ಅನ್ಯಾಯದಿಂದ ಯುದ್ಧ ಮಾಡುತ್ತಿದ್ದಾರೆಂದು ತಿಳಿದೂ ತನ್ನ ಬಾಹುಬಲವನ್ನು ಮೆರೆದ ಅಭಿಮನ್ಯು ಎಲ್ಲರ, ವಿಧಿಯ ಮೆಚ್ಚಿಗೆಗೂ ಪಾತ್ರನಾಗಿ ಮಹಾಭಾರತದ ಮರೆಯಬಾರದ ಪಾತ್ರವಾಗಿ ಉಳಿಯುತ್ತಾನೆ. ಹರಿಶ್ಚಂದ್ರನೂ ವಿಧಿಯೊಡನೆ ಹೋರಾಡಿದವನೆ. ವಿಧಿ ಅವನನ್ನು ಅರೆದುಬಿಟ್ಟರೂ ಸತ್ಯದ ವ್ರತವನ್ನು ಬಿಡದ ಹರಿಶ್ಚಂದ್ರ ಶಾಶ್ವತನಾದ. ತಾವು ಬದುಕಿ ಉಳಿಯುವ ಸಾಧ್ಯತೆ ಇಲ್ಲವೆಂದು ತಿಳಿದಿದ್ದರೂ ಒಂದಿನಿತೂ ಹೆದರದೆ ಎದೆಯನ್ನು ಉಕ್ಕು ಮಾಡಿಕೊಂಡು ಹೋರಾಡಿ, ತಮ್ಮ ಅಸುವನ್ನು ಹೀರಲು ಬಂದ ನೇಣಿನ ಹಗ್ಗಕ್ಕೇ ಮುತ್ತುಕೊಟ್ಟು, ಜೀವವನ್ನು ನಾಡಿಗರ್ಪಿಸಿ ಅಮರರಾದವರು ಭಗತಸಿಂಗ್, ಸುಖದೇವ, ರಾಜಗುರು, ಚಂದ್ರಶೇಖರ ಆಝಾದ್, ಬಟುಕೇಶ್ವರದತ್. ಇಂಥ ಸಾವಿರಾರು ದೇಶಪ್ರೇಮಿಗಳು. ಇವರೆಲ್ಲ ವಿಧಿಯನ್ನು ಎದುರಿಸಿ ನಿಂತು ಹೋರಾಡಿದರೂ ವಿಧಿಯಿಂದಲೇ ಮೆಚ್ಚಿಗೆ ಪಡೆದು ಜನಮಾನಸದಲ್ಲಿ ಉಳಿದವರು.

ಇಂದಿಗೂ ಅಂತಹ ಹೋರಾಟಗಾರರು ನಮ್ಮ ನಡುವೆಯೇ ಇದ್ದಾರೆ. ಅವರು ತಮ್ಮ ವೈಯಕ್ತಿಕ ಬದುಕಿನ ಸುಖ-ಸಂತೋಷಗಳನ್ನು ತೊರೆದು ಪ್ರಪಂಚದ ಒಳಿತಿಗೆ ಹೋರಾಡುತ್ತ ವಿಧಿಯನ್ನು ಎದುರಿಸಿದವರು. ಇಂಥ ಅನೇಕರ ಬಾಳುವೆಗಳು ಮತ್ತಿತರರ, ಬದುಕಿಗೆ ಮಾರ್ಗದರ್ಶಿಯಾಗಲು ಕಾರಣವೆಂದರೆ ಅವರು ತಮ್ಮಲ್ಲಿ ಇರುವ ಅದ್ಭುತವಾದ-ಆತ್ಮಶಕ್ತಿಯನ್ನು ನಂಬಿಕೊಂಡದ್ದು. ❖

ಪದಬಂಧ 4917

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಿಡಿಯಲ್ಲಿರುವ ವಯ್ಯಾರಿ (5)
4.ಬಲವಿರುವ ಬಯಕೆ! (3)
5.ನಿಯಮಿತವಾಗಿ ಕಾಣುವ ಈಕೆ ಸ್ತ್ರೀ! (3)
6.ಆನೆಯ ಮರಿ (3)
8.ಮಾವನ ಮರ್ಯಾದೆ! (2)
9.ಅರಸುತಲಿದ್ದ ಮಗ ಕಾಣುತ್ತಿಹನೇ? (2)
10.ಕತ್ತಿ ಇತ್ಯಾದಿಗಳನ್ನು ಇಡುವ ಕೋಶ (3)
14.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
15.ಕಣ್ಣಿಗೆ ಕಾಣದಿರುವುದು ಪಕ್ಷದಲ್ಲಿದೆ (3)
16.ವ್ಯಾಕರಣದಲ್ಲಿ ಒಂದು ವಸ್ತುವನ್ನು ಕುರಿತು ಹೇಳುವುದು (5)

ಮೇಲಿಂದ ಕೆಳಕ್ಕೆ
1.ಮಿತದಲ್ಲಿರುವ ಸ್ಪಂದನ (3)
2.ಚಪ್ಪಾಳೆಯನ್ನು ಹೀಗೆನ್ನಿ (5)
3.ಕಾಡಿ ತಂದ ಅಡ್ಡೆಯಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)
4.ಆತಂಕದಿಂದಿರುವ ಖೂನಿಗಾರ! (3)
7.ಇದು ಮನೋಹರವಾದುದು (3)
8.ಕೋಮಲತೆ ಅಥವಾ ಮೃದುತ್ವ (3)
9.ತಿರುಗಿ ನಿಂತು ಗುಂಪುಗಳಾಗಿ ವಿಂಗಡಿಸು (5)
11.ದವಸ ಧಾನ್ಯಗಳು ಸಮೃದ್ಧಿಯಾಗಿರುವ ಕಾಲ (3)
12.ಒಗ್ಗಟ್ಟು ಇಲ್ಲಿ ಉಲ್ಟಾಪಲ್ಟಾ ಆಗಿದೆಯಲ್ಲಾ! (3)
13.ರಾಜಿಗೊಂದು ಪರ್ಯಾಯ ಪದ (3)



4916ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಿವೇಶನ 3.ಕಲಗಚ್ಚು
5.ವಾಚಕ 6.ಪತಿ
8.ವರಾತ 10.ಕೆಲಸ
13.ಹರ 15.ಕಾನನ
16.ಕರವಾಲ 17.ಅಭಿರುಚಿ

ಮೇಲಿಂದ ಕೆಳಕ್ಕೆ:
1.ನಿಕ್ಷೇಪ 2.ನವಾಬ
3.ಕಕವ 7.ತಿಳಿವಳಿಕೆ
9.ತಲೆಬರಹ 11.ಸಕಾಲ
12.ಫ್ಯನಲಅ 14.ರತ್ತಾಚಿ

ಸುಡೊಕು 5303

7	9	2		3			6	8
4					7	3		9
		3		9		1		7
		4					8	
	2							3
8							4	
	4			2		8		
			9					5
2		8		7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5302 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಲಖಿಂಪುರ: ಜಾಮೀನು ರದ್ದು ಕೋರಿದ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರಿಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ನಾಲ್ವರು ರೈತರು ಸೇರಿ ಎಂಟು ಮಂದಿ ಪ್ರತಿಭಟನಕಾರರ ಮೇಲೆ ವಾಹನ ಹರಿಸಿ ಬಲಿತೆಗೆದುಕೊಂಡ ಆರೋಪ ಆಶಿಶ್ ಮಿಶ್ರಾ ಮೇಲಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1st YEAR REMEMBRANCE

DOB : 8.5.1938
DOD : 4.4.2021
Sri A. ASWATHA RAMAIAH
Deputy Commissioner of Police (Retd.)
Not a day goes by that we don't think of you. We are lucky to have been your child. Because of you, we are whom we are today. We miss you so much, Dad.
Deeply mourned by : Smt. and Sri V.A. Kariyappa
Dr. Shashi and Dr. C. Chandrashekaraiah
Smt. Roopa and Sri V. Venu | Dr. Manju and Dr. M. Jayranganath
Smt. Chaya and Sri Vinay Shankarkumar

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಆರ್. ಶ್ರೀನಿವಾಸಮೂರ್ತಿ
(B. R. M. ENGINEERING WORKS)
ಜನನ: 02/02/1952 - ಮರಣ: 04/04/2021
ಇಂತಿ ದುಃಖತಪ್ತರು:
ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು

NAME CHANGE ANNOUNCEMENT
Log on to :
dhclassifieds.com

ವಾಯು ಪ್ರಾಬಲ್ಯಕ್ಕೆ ರಷ್ಯಾ ಯತ್ನ: ಒಡೆಸಾದ ತೈಲ ಸಂಸ್ಕರಣ ಘಟಕದ ಮೇಲೆ ಕ್ಷಿಪಣಿ ದಾಳಿ

ಉಕ್ರೇನ್ ಮೇಲೆ ಬಾಂಬ್, ಕ್ಷಿಪಣಿ ಸುರಿಮಳೆ

ಬುಕಾ(ಉಕ್ರೇನ್), ಮಾಸ್ಕೊ- (ಎಎಫ್‌ಪಿ): ಉಕ್ರೇನ್ ಮೇಲೆ ಪೂರ್ಣ ಪ್ರಮಾಣದ ವಿಶೇಷ ಸೇನಾ ಕಾರ್ಯಾಚರಣೆ ಕೈಗೊಂಡ ರಷ್ಯಾ ಮೊದಲ ಹಂತದ ಯುದ್ಧ ಪೂರ್ಣಗೊಳಿಸಿ, ಶಾಂತಿಮಾತುಕತೆಗಳ ನಡುವೆಯೂ ಎರಡನೇ ಹಂತದ ಕಾರ್ಯಾಚರಣೆಗೆ ಕಾಲಿಟ್ಟು ವಾರ ಕಳೆದಿದೆ.

ಮೊದಲ ಹಂತದಲ್ಲಿ ಉಕ್ರೇನಿನ ಸೇನಾ ನೆಲೆ, ವಾಯುನೆಲೆ, ಇಂಧನ ಸಂಗ್ರಹಾಗಾರಗಳನ್ನೇ ಪ್ರಮುಖ ಗುರಿಯಾಗಿಸಿ ರಷ್ಯಾ ಪಡೆಗಳು ದಾಳಿ ನಡೆಸಿದ್ದವು. ಆದರೆ, ಉಕ್ರೇನಿನ ವಾಯುಪ್ರದೇಶದ ಮೇಲೆ ಪಾರಮ್ಯ ಸಾಧಿಸಲು ರಷ್ಯಾ ಪಡೆಗಳಿಗೆ ಆಗಿರಲಿಲ್ಲ. ಆರಂಭದಲ್ಲಿ ಆದ ಹಿನ್ನಡೆ ಸರಿದೂಗಿಸಲೆಂಬಂತೆ ಯುದ್ಧತಂತ್ರವನ್ನು ಪುಟಿನ್ ಪಡೆ ಬದಲಿಸಿಕೊಂಡಂತಿದೆ. ಉಕ್ರೇನಿನ ಪೂರ್ವ ಮತ್ತು ಕೇಂದ್ರ ಭಾಗದ ನಗರಗಳ ಮೇಲೆ ನಿರಂತರ ವೈಮಾನಿಕ ದಾಳಿಯನ್ನು ನಡೆಸುತ್ತಿದೆ.

ಉಕ್ರೇನಿನ ಪ್ರಮುಖ ಕಾರ್ಯತಂತ್ರದ ಭಾಗವಾಗಿರುವ ಬಂದರು ನಗರ ಒಡೆಸಾದ ಮೇಲೆ ರಷ್ಯಾ ಭಾನುವಾರ ನಸುಕಿನಲ್ಲಿ ಕ್ಷಿಪಣಿ ದಾಳಿ ನಡೆಸಿದೆ. ಹೆಚ್ಚು ನಿಖರವಾದ ಸಮುದ್ರ ಮತ್ತು ವಾಯು ಆಧರಿತ ಕ್ಷಿಪಣಿಗಳು ಒಡೆಸಾ ನಗರದ ಬಳಿ ಇರುವ ತೈಲ ಸಂಸ್ಕರಣಾಗಾರ ಮತ್ತು ಇಂಧನ ಹಾಗೂ ಲೂಬ್ರಿಕೆಂಟ್‌ಗಳ ಮೂರು ಸಂಗ್ರಹಾಗಾರಗಳನ್ನು ನಾಶಪಡಿಸಿವೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ರಷ್ಯಾದ ವಾಯು ಪಡೆಗಳು 'ಕಳೆದ 24 ತಾಸುಗಳಲ್ಲಿ ಉಕ್ರೇನ್ ಸೇನೆಯ ಎರಡು ಫಿರಂಗಿ ಘಟಕಗಳು (ಆರ್ಟಿಲರಿ ಕ್ಲಸ್ಟರ್) ಮತ್ತು ಎರಡು ಬಹು ಉಡಾವಣಾ ರಾಕೆಟ್ ವ್ಯವಸ್ಥೆಗಳು ಸೇರಿ ಒಟ್ಟು 51 ಸೇನಾ ನೆಲೆಗಳನ್ನು ನಾಶಪಡಿಸಿವೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ, ಮೇಜರ್ ಜನರಲ್ ಐಗೋರ್ ಕೊನಶೆಂಕವ್ ಭಾನುವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಈ ನಡುವೆ ಕೀವ್ ಮತ್ತು ಹೋಸ್ಟೊಮೆಲ್ ಪ್ರದೇಶಗಳ ನಿಯಂತ್ರಣವನ್ನು ಮರಳಿ ಪಡೆಯುವಲ್ಲಿ ಉಕ್ರೇನ್ ಪಡೆಗಳು ಯಶಸ್ವಿಯಾಗಿವೆ. ಆದರೆ, ಹೋಸ್ಟೊಮೆಲ್ ವಿಮಾನ ನಿಲ್ದಾಣದಲ್ಲಿದ್ದ ಜಗತ್ತಿನ ಅತಿ ದೊಡ್ಡ ಸರಕು ಸಾಗಣೆ ವಿಮಾನ ಆಂಟೊನೊವ್ ಎಎನ್-225 ಮ್ರಿಯಾ ವನ್ನು ರಷ್ಯಾ ಪಡೆಗಳು ನಾಶಪಡಿಸಿವೆ ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ಮೊದಲ ಬಾರಿಗೆ ಅಧಿಕೃತವಾಗಿ ಹೇಳಿದೆ.

'ರಷ್ಯಾದ ಆಕ್ರಮಣಕಾರರು ಮ್ರಿಯಾ ನಾಶಪಡಿಸಿದ್ದಾರೆ. ಆದರೆ, ನಮ್ಮ ಕನಸುಗಳನ್ನು ಅವರಿಂದ ಭಗ್ನಗೊಳಿಸಲು ಸಾಧ್ಯವಿಲ್ಲ' ಎಂದು ಅದು ಹೇಳಿದೆ.

ಬಂದರು ನಗರ ಒಡೆಸಾದ ಮೇಲೆ ರಷ್ಯಾ ಭಾನುವಾರ ಉಡಾಯಿಸಿದ ಕ್ಷಿಪಣಿಗಳಲ್ಲಿ ಕೆಲವನ್ನು ಉಕ್ರೇನಿನ ವಾಯು ರಕ್ಷಣಾ ವ್ಯವಸ್ಥೆ ಹೊಡೆದುರುಳಿಸಿದೆ. ಕಳೆದ 24 ತಾಸುಗಳಲ್ಲಿ ರಷ್ಯಾದ ನಾಲ್ಕು ಕ್ಷಿಪಣಿಗಳು, ಬಾಂಬ್‌ಗಳನ್ನು ಒಳಗೊಂಡಿದ್ದ 2 ಸುಖೋಯ್-35 ಯುದ್ಧ ವಿಮಾನಗಳು, ಒಂದು ಹೆಲಿಕಾಪ್ಟರ್, ಮಾನವ ರಹಿತ ಎರಡು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ಟ್ವಿಟರ್‌ನಲ್ಲಿ ಹೇಳಿದೆ.

ಉಕ್ರೇನಿನ ರಾಜಧಾನಿ ಕೀವ್ ಹೊರ ವಲಯದ ಉಪನಗರ ಬುಕಾದಲ್ಲಿ ಭಾನುವಾರ ರಷ್ಯಾದ ಯುದ್ಧ ಟ್ಯಾಂಕರ್‌ಗಳು ನಾಶವಾಗಿವೆ – ಎಪಿ/ಪಿಟಿಐ ಚಿತ್ರ

'ಲಿಖಿತ ಒಪ್ಪಂದವಾದರೆ ಪುಟಿನ್– ಝೆಲೆನ್‌ಸ್ಕಿ ಭೇಟಿ'

ಉಭಯ ದೇಶಗಳ ನಡುವೆ ನಿರ್ದಿಷ್ಟ ಲಿಖಿತ ಒಪ್ಪಂದ ಏರ್ಪಟ್ಟರೆ ಮಾತ್ರ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಮುಖಾಮುಖಿ ಭೇಟಿ ನಡೆಯಬಹುದು ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರ ಪೆಸ್ಕೊವ್ ಭಾನುವಾರ ತಿಳಿಸಿದರು.

ಉನ್ನತಮಟ್ಟದ ಸಭೆಯ ಮುಂದಿಡಲು ರಷ್ಯಾ ಮತ್ತು ಉಕ್ರೇನ್ ನಡುವಿನ ಒಪ್ಪಂದದ ಕರಡು ಈವರೆಗೆ ಸಿದ್ಧವಾಗಿಲ್ಲ. ಆದರೆ, ಉಕ್ರೇನ್ ತಟಸ್ಥ ಮತ್ತು ಪರಮಾಣು ರಹಿತ ರಾಷ್ಟ್ರವಾಗಿ ಉಳಿಯಬೇಕೆಂಬ ನಮ್ಮ ಬೇಡಿಕೆಗೆ ಅದು ಒಪ್ಪಿಕೊಳ್ಳುವ ಹಂತದಲ್ಲಿರುವುದು ಕಾಣಿಸುತ್ತಿದೆ ಎಂದು ರಷ್ಯಾ ನಿಯೋಗದ ಮುಖ್ಯಸ್ಥ ವ್ಲಾಡಿಮಿರ್ ಮೆಡಿನ್‌ಸ್ಕಿ ಹೇಳಿದ್ದಾರೆ.

ನೇಪಾಳ–ಭಾರತ ನಡುವೆ ರೈಲು ಸೇವೆಗೆ ಚಾಲನೆ

ನವದೆಹಲಿ (ಪಿಟಿಐ): ನೇಪಾಳ ಮತ್ತು ಭಾರತದ ನಡುವಿನ ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸುವುದರ ಭಾಗವಾಗಿ ಪ್ರಥಮ ಬ್ರಾಡ್‌ಗೇಜ್ ಪ್ಯಾಸೆಂಜರ್ ರೈಲು ಸೇವೆಗೆ ಶನಿವಾರ ಚಾಲನೆ ನೀಡಲಾಯಿತು.

ಬಿಹಾರದ ಜಯನಗರ್ ಮತ್ತು ನೇಪಾಳದ ಕುರ್ತಾ ವಲಯದ ನಡುವೆ ಸಂಪರ್ಕ ಕಲ್ಪಿಸುವ ಈ ರೈಲು ಸೇವೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಚಾಲನೆ ನೀಡಿದರು.

ಉಭಯ ಪ್ರಧಾನಿಗಳು ಇದೇ ಸಂದರ್ಭದಲ್ಲಿ ವಾಣಿಜ್ಯ, ಹೂಡಿಕೆ, ಸಂಪರ್ಕ ಕ್ಷೇತ್ರದಲ್ಲಿ ಸಹಕಾರ ಮತ್ತು ಬಾಂಧವ್ಯ ವೃದ್ಧಿ ಕುರಿತು ಚರ್ಚಿಸಿದರು. ಜುಲೈ 2021ರಲ್ಲಿ ಪ್ರಧಾನಿಯಾದ ಬಳಿಕ ಇದು ದೇವುಬಾ ಅವರ ಮೊದಲ ವಿದೇಶ ಭೇಟಿ ಇದಾಗಿದೆ.

ಭಾರತ ಸರ್ಕಾರವು ರೈಲು ಸಂಪರ್ಕ ಯೋಜನೆಗಾಗಿ ₹ 548 ಕೋಟಿ ಅನುದಾನ ಒದಗಿಸಿದೆ. ಉಭಯ ಪ್ರಧಾನಿಗಳು ರೈಲ್ವೆ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರ ನೀಡುವ ಕುರಿತ ಒಡಂಬಡಿಕೆಗೂ ಇದೇ ಸಂದರ್ಭದಲ್ಲಿ ಸಹಿ ಹಾಕಿದರು.

ಜಯನಗರ –ಕುರ್ತಾ ಸೆಕ್ಷನ್ ರೈಲು ಸೇವೆಯು ಜಯನಗರ – ಬಿಜಲ್ಪುರ–ಬರ್ದಿಬಾಸ್ ನಡುವಣ ರೈಲು ಸೇವೆಯ ಭಾಗವಾಗಿದೆ. ಇದರ ಅಂತರ 35 ಕಿ.ಮೀ ಆಗಿದ್ದು, ಈ ಪೈಕಿ 3 ಕಿ.ಮೀ. ಬಿಹಾರದ ವ್ಯಾಪ್ತಿಯಲ್ಲಿದೆ.

ಸೀತೆಯ ಜನ್ಮಸ್ಥಳ ಎನ್ನಲಾದ, ಹಿಂದೂಗಳ ಧಾರ್ಮಿಕ ಸ್ಥಳವೂ ಆಗಿರುವ ಜನಕ್‌ಪುರ ಧಾಮ್, ನೇಪಾಳ ಮತ್ತು ಭಾರತ ನಡುವಣ ರೈಲು ಸಂಪರ್ಕದ ಪ್ರಮುಖ ಆಕರ್ಷಣೆಯಾಗಲಿದೆ.

ಭಾರತ ಪ್ರವಾಸ ಕೈಗೊಂಡಿರುವ ನೇಪಾಳ ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಅವರು ಭಾನುವಾರ ವಾರಾಣಸಿಗೆ ಭೇಟಿ ನೀಡಿದ್ದು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬರಮಾಡಿಕೊಂಡರು –ಪಿಟಿಐ ಚಿತ್ರ

ಕಾಶಿ ವಿಶ್ವನಾಥ ದೇಗುಲಕ್ಕೆ ದೇವುಬಾ ಭೇಟಿ

ವಾರಾಣಸಿ (ಪಿಟಿಐ): ಭಾರತ ಪ್ರವಾಸದಲ್ಲಿರುವ ನೇಪಾಳ ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಭಾನುವಾರ ಇಲ್ಲಿನ ಹೆಸರಾಂತ ಕಾಲ ಭೈರವ ಮತ್ತು ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

ಪತ್ನಿ ಅರ್ಜು ರಾಣಾ ದೇವುಬಾ ಜೊತೆಗೂಡಿ ಬಂದ ನೇಪಾಳ ಪ್ರಧಾನಿಯವರನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬರಮಾಡಿಕೊಂಡರು.

ರುದ್ರಾಭಿಷೇಕ ಸೇವೆ ನಡೆಸಿದ ದೇವುಬಾ ದಂಪತಿ, ಕಾಶಿ ವಿಶ್ವನಾಥ ಧಾಮ್ ಕುರಿತ ಕಿರುಚಿತ್ರವನ್ನು ವೀಕ್ಷಿಸಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

39ನೇ ದಿನದ ಬೆಳವಣಿಗೆಗಳು

- ರಷ್ಯಾ ಮುಗ್ಧ ನಾಗರಿಕರ ಮೇಲೆ ದಾಳಿ ನಡೆಸುತ್ತಿರುವುದನ್ನು ಯುದ್ಧ ಅಪರಾಧಗಳೆಂದು ಪರಿಗಣಿಸಿ ಅಂತರರಾಷ್ಟ್ರೀಯ ನ್ಯಾಯಾಲಯ ತನಿಖೆ ನಡೆಸಬೇಕು ಎಂದು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಒತ್ತಾಯಿಸಿದ್ದಾರೆ
- ಬುಕಾ ಹತ್ಯಾಕಾಂಡದ ಚಿತ್ರಗಳನ್ನು ನೋಡಿ ಆಘಾತಕ್ಕೆ ಒಳಗಾಗಿದ್ದೇನೆ. ರಷ್ಯಾದ ಮೇಲೆ ಮತ್ತಷ್ಟು ನಿರ್ಬಂಧಗಳನ್ನು ಹೇರುತ್ತೇವೆ. ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ರಷ್ಯಾವನ್ನು ವಿಚಾರಣೆಗೆ ಗುರಿಪಡಿಸಲು ನೆರವು ನೀಡುತ್ತೇವೆ- ಐರೋಪ್ಯ ಪರಿಷತ್ ಅಧ್ಯಕ್ಷ ಚಾರ್ಲ್ಸ್ ಮೈಕೆಲ್
- ಉಕ್ರೇನಿನಲ್ಲಿ ನಡೆಯುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆ ವಿರೋಧಿಸಿ ರಷ್ಯಾದಲ್ಲಿ ಪ್ರತಿಭಟನೆ ನಡೆಸಿದ 211 ಮಂದಿಯನ್ನು ರಷ್ಯಾ ಪೊಲೀಸರು ಬಂಧಿಸಿದ್ದಾರೆ
- ಉಕ್ರೇನ್ ಸಂಘರ್ಷದಲ್ಲಿ ಭಾರತದ ನಿಲುವು ಸ್ಥಿರತೆ ಮತ್ತು ದೃಢತೆಯಿಂದ ಕೂಡಿದೆ- ತುರ್ಕ್‌ಮೇನಿಸ್ತಾನದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್
- ರಷ್ಯಾದ ಆಕ್ರಮಣ ಪ್ರಾರಂಭವಾದಾಗಿನಿಂದ ಈವರೆಗೆ ಸುಮಾರು 42 ಲಕ್ಷ ಉಕ್ರೇನಿಗರು ದೇಶ ತೊರೆದಿದ್ದಾರೆ. ಕಳೆದ 24 ಗಂಟೆಗಳಲ್ಲಿ ಸುಮಾರು 40,000 ನಿರಾಶ್ರಿತರು ನೆರೆಹೊರೆಯ ದೇಶಗಳಿಗೆ ವಲಸೆ ಹೋಗಿದ್ದಾರೆ- ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ
- ಉಕ್ರೇನಿನ ಉತ್ತರ ಭಾಗದ ನಗರಗಳನ್ನು ಹಿಮ್ಮೆಟ್ಟುವಾಗ ರಷ್ಯಾ ಸೈನಿಕರು ನೆಲ ಬಾಂಬ್‌ಗಳನ್ನು ಹುದುಗಿಸಿ ಹೋಗಿದ್ದಾರೆ. ಕೀವ್ ಹೊರ ವಲಯದ ನಗರಗಳಲ್ಲಿ ಒಂದೇ ದಿನ 600ಕ್ಕೂ ಹೆಚ್ಚು ಸ್ಫೋಟಕಗಳನ್ನು ಉಕ್ರೇನ್ ಸೇನೆ ಪತ್ತೆ ಹಚ್ಚಿ ನಿಷ್ಕ್ರಿಯಗೊಳಿಸಿದೆ- ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆರೋಪ
- ರಷ್ಯಾದ ಮೇಲೆ ಹೇರಿರುವ ಪಶ್ಚಿಮದ ರಾಷ್ಟ್ರಗಳ ನಿರ್ಬಂಧದ ಪರಿಣಾಮ ಲಾಟ್ವಿಯ ರಷ್ಯಾದಿಂದ ನೈಸರ್ಗಿಕ ಅನಿಲ ಆಮದು ಮಾಡಿಕೊಳ್ಳುವುದನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸ್ಥಗಿತಗೊಳಿಸಿದೆ
- ಸೇನಾ ಕಾರ್ಯಾಚರಣೆ ಆರಂಭವಾದ ತಕ್ಷಣ ಪಾಶ್ಚಾತ್ಯ ರಾಷ್ಟ್ರಗಳು ನಿರ್ಬಂಧ ಹೇರುವ ಮುನ್ಸೂಚನೆಯಿಂದ ಅಗತ್ಯ ಔಷಧಗಳನ್ನು ಸಂಗ್ರಹಿಸಿಟ್ಟುಕೊಳ್ಳುವಂತೆ ಮುನ್ನೆಚ್ಚರಿಕೆಯ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಪರಿಣಾಮ ಜನರು ಮುಗಿಬಿದ್ದು ಔಷಧ ಖರೀದಿಸಿಟ್ಟುಕೊಂಡಿದ್ದರಿಂದ ರಷ್ಯಾದಲ್ಲಿ ಈಗ ಔಷಧ ಕೊರತೆ ಉದ್ಭವಿಸಿದೆ
- ಯುದ್ಧಪೀಡಿತ ಮರಿಯುಪೊಲ್ ನಗರದ ಅಪಾಯಕಾರಿ ಸ್ಥಳಗಳಿಂದ ಭಾನುವಾರ ಒಂದೇ ದಿನ 765 ನಾಗರಿಕರನ್ನು ರೆಡ್ ಕ್ರಾಸ್ ನೆರವಿನಲ್ಲಿ ಖಾಸಗಿ ವಾಹನಗಳಲ್ಲಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು
- ಐರೋಪ್ಯ ಒಕ್ಕೂಟ, ಅಮೆರಿಕ, ಕೆನಡಾ ಬಾಹ್ಯಾಕಾಶ ಸಂಸ್ಥೆಗಳಿಗೆ ನಿರ್ಬಂಧಗಳನ್ನು ತೆರವುಗೊಳಿಸಲು ನೀಡಿದ್ದ ಗಡುವು ಮುಗಿದಿರುವುದರಿಂದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಅತಂತ್ರ ಸ್ಥಿತಿಗೆ ತಲುಪಿದೆ- ರಷ್ಯಾ ಬಾಹ್ಯಾಕಾಶ ಯೋಜನೆಯ ಮುಖ್ಯಸ್ಥರ ಹೇಳಿಕೆ

ಆಂಧ್ರಪ್ರದೇಶ: 13 ಹೊಸ ಜಿಲ್ಲೆಗಳ ಸೇರ್ಪಡೆ

ಅಮರಾವತಿ (ಪಿಟಿಐ): ಅಸ್ತಿತ್ವದಲ್ಲಿರುವ 13 ಜಿಲ್ಲೆಗಳಲ್ಲಿ 26 ಜಿಲ್ಲೆಗಳನ್ನು ರೂಪಿಸಿ ಆಂಧ್ರಪ್ರದೇಶ ಸರ್ಕಾರವು ಗೆಜೆಟ್ ಅಧಿಸೂಚನೆಯೊಂದನ್ನು ಹೊರಡಿಸಿದೆ.

ನೂತನ 13 ಜಿಲ್ಲೆಗಳು ಸೋಮವಾರದಿಂದ ಅಸ್ತಿತ್ವಕ್ಕೆ ಬರಲಿವೆ ಎಂದು ಶನಿವಾರ ರಾತ್ರಿ ಹೊರಡಿಸಿದ ಗೆಜೆಟ್ ಅಧಿಸೂಚನೆ ತಿಳಿಸಿದೆ.

ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ ವೈ.ಎಸ್. ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು ಐಎಎಸ್, ಐಪಿಎಸ್ ಅಧಿಕಾರಿಗಳನ್ನು ನೂತನ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಾಗಿ ನೇಮಕ ಮಾಡಿದೆ.

ಹೊಸ ಜಿಲ್ಲೆಗಳನ್ನು ರಚಿಸುವ ಸಂಬಂಧ ಕಳೆದ ಜನವರಿಯಲ್ಲಿ ರಾಜ್ಯ ಸರ್ಕಾರವು ಕರಡು ಅಧಿಸೂಚನೆಯೊಂದನ್ನು ಹೊರಡಿಸಿ ಸಲಹೆಗಳನ್ನು ಆಹ್ವಾನಿಸಿತ್ತು.

ರಾಜ್ಯವು ಹೊಂದಿರುವ 25 ಲೋಕಸಭಾ ಕ್ಷೇತ್ರಗಳನ್ನೂ ಜಿಲ್ಲೆಗಳಾಗಿ ರೂಪಿಸಲಾಗಿದೆ. ಪೂರ್ವ ಗೋದಾವರಿ ಮತ್ತು ವಿಶಾಖಪಟ್ಟಣ ಜಿಲ್ಲೆಗಳಲ್ಲಿನ ಬುಡಕಟ್ಟು ಪ್ರದೇಶಗಳನ್ನು ಪ್ರತ್ಯೇಕಿಸಿ 26ನೇ ಜಿಲ್ಲೆಯನ್ನು ರೂಪಿಸಲಾಗಿದೆ.

ಉತ್ತರ ಪ್ರದೇಶ: ಪ್ರಶ್ನೆ ಪತ್ರಿಕೆ ಸೋರಿಕೆ–ಮತ್ತೆ 11 ಮಂದಿ ಬಂಧನ

ಬಲಿಯಾ (ಪಿಟಿಐ): ಉತ್ತರ ಪ್ರದೇಶದ 12ನೇ ತರಗತಿಯ ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿ ಪ್ರಕರಣದ ಸೂತ್ರಧಾರ ಸೇರಿ 11 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

ಇವರ ಬಂಧನದೊಂದಿಗೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರಾದವರ ಸಂಖ್ಯೆ 46ಕ್ಕೆ ಏರಿಕೆಯಾಗಿದೆ. ಪತ್ರಿಕೆ ಸೋರಿಕೆಯಾದ್ದರಿಂದ ಬಲಿಯಾ ಸೇರಿ ರಾಜ್ಯದ 24 ಜಿಲ್ಲೆಗಳಲ್ಲಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ. ಬಂಧಿತರಲ್ಲಿ ಬಲಿಯಾ ಜಿಲ್ಲಾ ಶಿಕ್ಷಣ ನಿರೀಕ್ಷಕರೂ ಸಹ ಸೇರಿದ್ದಾರೆ.

ಎಕ್ಸ್.ಇ ಅತಿ ವೇಗದ ಕೋವಿಡ್ ವೈರಸ್: ಡಬ್ಲ್ಯುಎಚ್‌ಒ ಕಳವಳ

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ಇಂಗ್ಲೆಂಡ್‌ನಲ್ಲಿ ಮೊದಲ ಬಾರಿಗೆ ಪತ್ತೆಯಾದ ಓಮೈಕ್ರಾನ್‌ನ ಉಪತಳಿ ಎಕ್ಸ್.ಇ ಈಗಾಗಲೇ ಕಾಣಿಸಿರುವ ತಳಿಗಳಿಗಿಂತ ಹೆಚ್ಚು ವೇಗವಾಗಿ ಹಬ್ಬುವ ಸಾಧ್ಯತೆಯಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆ ನೀಡಿದೆ.

ಕೋವಿಡ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಸೃಷ್ಟಿಸಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಎಕ್ಸ್.ಇ ಎಂದು ಗುರುತಿಸಲಾದ 'ಬಿಎ.1-ಬಿಎ.2' ಹೊಸ ತಳಿಯು ಜನವರಿ 19ರಂದು ಮೊದಲ ಬಾರಿಗೆ ಬ್ರಿಟನ್‌ನಲ್ಲಿ ಕಂಡುಬಂದಿದೆ. ಬಿಎ.2 ಗೆ ಹೋಲಿಸಿದರೆ ಎಕ್ಸ್.ಇ ಶೇ 10ರಷ್ಟು ಹೆಚ್ಚು ಹರಡುವ ಸಾಮರ್ಥ್ಯವನ್ನು ಹೊಂದಿದೆ. ಈ ಸಂಶೋಧನೆಗೆ ಹೆಚ್ಚಿನ ದೃಢೀಕರಣದ ಅಗತ್ಯವಿದೆ ಎಂದು ಅದು ತಿಳಿಸಿದೆ.

1,096 ಪ್ರಕರಣ, 81 ಮಂದಿ ಸಾವು

ನವದೆಹಲಿ: ದೇಶದಲ್ಲಿ ಹೊಸದಾಗಿ 1,096 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, 81 ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 13,013ಕ್ಕೆ ಇಳಿಕೆಯಾಗಿದೆ.

ಬುಕಾ: 300 ನಾಗರಿಕರ ಹತ್ಯೆ

ಒಂದನೇ ಪುಟದಿಂದ

ಬುಕಾದ ಒಂದೇ ಬೀದಿಯಲ್ಲಿ ಕನಿಷ್ಠ 20 ನಾಗರಿಕರ ಶವಗಳು ಬಿದ್ದಿರುವುದನ್ನು 'ಎಎಫ್‌ಪಿ' ಸುದ್ದಿ ಸಂಸ್ಥೆಯ ಪ್ರತಿನಿಧಿ ಕಣ್ಣಾರೆ ಕಂಡಿದ್ದಾಗಿ ವರದಿಯಾಗಿದೆ.

ರಷ್ಯಾದ ಸೈನಿಕರು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ ಅವರನ್ನು ಕೊಂದಿದ್ದಾರೆ. ಕೀವ್ ಹೊರವಲಯದಿಂದ 20 ಕಿ.ಮೀ. ದೂರದ ಹೆದ್ದಾರಿಯಲ್ಲಿ ಐವರು ಮಹಿಳೆಯರ ಶವಗಳು ಒಂದೇ ಕಡೆ ಬೆತ್ತಲೆಯ ಸ್ಥಿತಿಯಲ್ಲಿದ್ದು, ಶವಗಳಿಗೆ ಕಂಬಳಿ ಮುಚ್ಚಿ ಟೈರುಗಳಿಂದ ಸುಡಲು ಯತ್ನಿಸಿರುವ ಅನಾಗರಿಕ ಕೃತ್ಯಗಳು ನಡೆದಿವೆ. ಇರ್ಪಿನ್, ಬುಕಾ, ಹೋಸ್ಟೊಮೆಲ್‌ನಲ್ಲಿ ನೂರಾರು ಸಂಖ್ಯೆಯಲ್ಲಿ ನಿರಾಯುಧ ನಾಗರಿಕರನ್ನು ಹತ್ಯೆ ಮಾಡಿದ್ದಾರೆ. ರಸ್ತೆ ಬದಿಯಲ್ಲಿ ಬಿದ್ದಿರುವ ಹೆಣಗಳ ರಾಶಿ 'ಹಾರರ್ ಸಿನಿಮಾ' ನೋಡಿದಂತೆ ಭಾಸವಾಗುತ್ತಿದೆ ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರ ಒಲೆಕ್ಸಿ ಅರಿಸ್ಟೊವಿಕ್ ಹೇಳಿದ್ದಾರೆ.

ರಷ್ಯಾ ಪಡೆಗಳ ಆಕ್ರಮಣದ ಸ್ಥಳದಿಂದ ತಪ್ಪಿಸಿಕೊಳ್ಳಲು ಕಾರಿನಲ್ಲಿ ಹೋಗುತ್ತಿದ್ದ ಇಡೀ ಕುಟುಂಬಗಳನ್ನೇ ಗುಂಡಿಟ್ಟು ಸಾಯಿಸಿರುವ ಹೃದಯ ವಿದ್ರಾವಕ ಕೃತ್ಯಗಳೂ ನಡೆದಿವೆ. ಮಕ್ಕಳು, ಮಹಿಳೆಯರು, ಅಜ್ಜಿಯರ ಶವಗಳು ತುಂಬಿರುವ ಕಾರುಗಳು ಇನ್ನೂ ರಸ್ತೆಯಲ್ಲಿ ಅಲ್ಲಲ್ಲಿ ನಿಂತಿವೆ. ಸ್ವಯಂಸೇವಕರು ಇಲ್ಲದೇ, ಶವಗಳನ್ನು ಇನ್ನೂ ತೆರವುಗೊಳಿಸಲು ಸಾಧ್ಯವಾಗಿಲ್ಲ. ಉಕ್ರೇನ್ ನಿಯಂತ್ರಿತ ಪ್ರದೇಶ ತಲುಪಲು ಬುಕಾಂಕಾ ನದಿ ದಾಟಲು ಪ್ರಯತ್ನಿಸಿದ ನಾಗರಿಕರು ರಷ್ಯಾ ಪಡೆಗಳ ಗುಂಡಿಗೆ ಬಲಿಯಾಗಿದ್ದಾರೆ ಎಂದು ಮೇಯರ್ ಅನಟೊಲಿ ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Finance
ಕಂಪನಿಯು ಎಲ್ಲಾ ರೀತಿಯ ವೈಯಕ್ತಿಕ, ಆಸ್ತಿ, ಪ್ರಾಜೆಕ್ಟ್ ಸಾಲ ಮತ್ತು ವ್ಯಾಪಾರವನ್ನು ಒದಗಿಸುತ್ತದೆ. ROI 4% (ಪ್ರತಿ ವಾರ್ಷಿಕ) ಅಗತ್ಯವಿರುವ DSA ಮತ್ತು ಏಜೆಂಟ್, 55000/ ಸಂಬಳ ಮತ್ತು 4% ಕಮಿಷನ್: 7404326304

ಭವಿಷ್ಯ
Astrology
★॥ಶ್ರೀದುರ್ಗಾಪರಮೇಶ್ವರಿ॥★ ಆರಾಧನೆಯಿಂದ ಗಂಡಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಪ್ರೀತಿಯಲ್ಲಿಮೋಸ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಶ್ರೀರಾಘವೇಂದ್ರಗುರೂಜಿ. 8050061378

ಶ್ರೀ ಜೈ ಶಂಕರಿ ಜ್ಯೋತಿಷ್ಯ ಕೇಂದ್ರ: ವಿದ್ಯೆ, ಉದ್ಯೋಗ, ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಕೇವಲ ಮೂರು ದಿನಗಳಲ್ಲಿ ಶಾಶ್ವತವಾದ ಪರಿಹಾರ. Ph:9980057857 (ಫೋನಿನ ಮೂಲಕ ಪರಿಹಾರ ಮಾಡಿಕೊಡುತ್ತಾರೆ)

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

★ದೈವಜ್ಞ ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE · JOB · NOTICE · NAME CHANGE · ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಸ್ತ್ರೀ-ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರ ಪರಿಹಾರ.9148890039

ಉದ್ಯೋಗಾವಕಾಶ
Engg/ Production Technical
AUTO GARAGE required Sr.Auto mechanics (engine Repair) Sr.Auto Electricians, Denter painter, contact urgently : 9108773845

Marketing & Sales
SKY SCOPE housing ltd Vp with min 2 yrs exp req Branch manager ,Sales manager Interested candidates share resume at - mrchandrasshp@gmail.com Contact-7411124596

Part-Time Jobs
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ASTRO YATRA
ನಿಮ್ಮ ಜನ್ಮಕುಂಡಲಿಯೇ ಜೀವನಾಧಾರ PART II

ಅನೇಕರು ಒಂದಿಷ್ಟು ಹಣ ಕೊಟ್ಟು ಜನ್ಮಕುಂಡಲಿ ಬರೆಸಿ ಮನೆಯಲ್ಲಿ ಭದ್ರವಾಗಿ ಇಟ್ಟಿರುತ್ತಾರೆ. ಅದರಲ್ಲಿ ಅವನ/ಅವಳ ಭವಿಷ್ಯವ ಅಡಕವಾಗಿದ್ದರು ಆದರ ಯಾವ ವಿಚಾರವೂ ಬರಸಿಕೊಂಡವರಿಗೆ ತಿಳಿದಿರುವುದಿಲ್ಲ. ಬರೆದುಕೊಟ್ಟ ಶಾಸ್ತ್ರಜ್ಞರು ಸರಿಯಾಗಿ ಹೇಳಿರುವುದಿಲ್ಲ. 12 ಜನ್ಮರಾಶಿಗಳಲ್ಲಿ ಒಂಬತ್ತು ಗ್ರಹಗಳು ಒಂದು ಜನ್ಮ ಲಗ್ನವಿರುತ್ತದೆ. ಈ ಎಲ್ಲ ಗ್ರಹಗಳು ಅವರ ಜನನ ರೀತಿ ಬೇರೆಬೇರೆ ಮನೆಯಲ್ಲಿದ್ದು ಕೆಲವು ಖಾಲೀ ಮನೆಗಳು ಇರುತ್ತವೆ. ಆ ಗ್ರಹಗಳಿಂದರೆ ಯಾರು? ಎಲ್ಲರೂ ಕುಟುಂಬದವರೆ, ವಿವರ ಓದಿ ತಿಳಿಯಿರಿ. 1)ಸೂರ್ಯ ಎಂದರೆ ತಂದೆ 2)ಚಂದ್ರ ಎಂದರೆ ತಾಯಿ 3)ಮಂಗಳ(ಕುಜ) ಎಂದರೆ ಸಹೋದರ/ಸಹೋದರಿ 4)ಬುಧ ಎಂದರೆ ಬುದ್ಧಿ, ದೇಹ ಶಕ್ತಿ, ಜ್ಞಾನಪಕ ಶಕ್ತಿ ಕೊಡುವನು 5)ಗುರು ಎಂದರೆ ಅದೃಷ್ಟ ಅಭಿವೃದ್ಧಿ ಶುಭ ಕಾರ್ಯಕ್ಕೆ ಮೂಲ 6)ಶುಕ್ರ ಎಂದರೆ ಪತಿ-ಪತ್ನಿ, ವಾಹನ 7)ಶನಿ ಎಂದರೆ ನಿಮ್ಮ ನಿಮ್ಮ ಆಯುಷ್ಯ8)ರಾಹು+ 9)ಕೇತು ಎಂದರೆ ತಾತ, ಅಜ್ಜ ಇರುವ 12 ರಾಶಿಯಲ್ಲಿ ರಾಹು-ಕೇತುಗಳಿಗೆ ಯಾವ ಜನ್ಮರಾಶಿಯ ಮೇಲೆ ಅಧಿಕಾರವಿಲ್ಲ. ಸೂರ್ಯ ಸಿಂಹರಾಶಿ ಅಧಿಪತಿ, ಚಂದ್ರ-ಕಟಕ ರಾಶಿಗೆ ಅಧಿಪತಿ, ಮಂಗಳ-ಮೇಷ ಮತ್ತು ವೃಶ್ಚಿಕ ರಾಶಿಯ ಅಧಿಪತಿ, ಬುಧನು ಮಿಥನ ಮತ್ತು ಕನ್ಯಾ ರಾಶಿಯ ಅಧಿಪತಿ, ಗುರುವು-ಧನಸ್ಸು ಮತ್ತು ಮೀನ ರಾಶಿಯ ಅಧಿಪತಿ, ಶುಕ್ರನು-ವೃಷಭ ಮತ್ತು ತುಲಾ ರಾಶಿಯ ಅಧಿಪತಿ, ಶನಿಯು ಮಕರ ಮತ್ತು ಕುಂಭ ರಾಶಿಯ ಅಧಿಪತಿ, ಆದರೆ ಗ್ರಹಗಳಲ್ಲೂ ಮಿತ್ರಗ್ರಹ, ಶತೃಗ್ರಹ, ಸಮಗ್ರಹ ಇದ್ದಾರೆ. ಸೂರ್ಯನ ಮಗನೇ ಶನಿ ಒಂದುವೇಳೆ ಯಾವುದಾದರೂ ಜನ್ಮಕುಂಡಲಿಯಲ್ಲಿ ಸಿಂಹರಾಶಿಯಲ್ಲಿ ಶನಿ ಇದ್ದು ಅಥವಾ ಮಕರರಾಶಿಯಲ್ಲಿ ಸೂರ್ಯನಿಂದರೆ ಜಾತಕದ ತಂದೆ ಮಕ್ಕಳು ವೈರಿಯಾಗುತ್ತಾರೆ. ಅಥವಾ ಪತಿ ಸಿಂಹರಾಶಿಯಾಗಿದ್ದು ಪತ್ನಿ ಕುಂಬರಾಶಿಯಾಗಿದ್ದರೆ ಪತಿ-ಪತ್ನಿಯರಲ್ಲಿ ಜಗಳವೋ ಜಗಳ ಮತ್ತೆ ಮಂಗಳಗ್ರಹ ಕಟಕ ರಾಶಿಯಲ್ಲಿದ್ದರೆ ಈ ರಾಶಿಯವರಿಗೆ ತೊಂದರೆ ರೋಗಿಷ್ಟರಾಗಿತ್ತಾರೆ. ಗುರುವು ಶನಿಯ ವೈರಿ ಆಗ ಮೀನರಾಶಿಯವರಿಗೆ ತೊಂದರೆ ಇರುತ್ತದೆ. ಇನ್ನೂ ಹೆಚ್ಚಿನ ವಿಚಾರಗಳಿಗೆ ಕೂಡಲೇ ಸಂಪರ್ಕಿಸಿ ವಿವರ ತಿಳಿಯಿರಿ.
Contact: RAMASWAMY ASTROLEGER
1176/1, 36th Main Road, Poornapragna Nagara, Uttarahalli, Bangalore-560061
M: 94482 43757, 94816 43757

ಪ್ರವಾಸ
Travel
ದೆಹಲಿ, ಯಮುನೋತ್ರಿ, ಗಂಗೋತ್ರಿ,ಕೇದಾರ್‌ನಾಥ್, ಬದರಿನಾಥ್ 04.05.2022, 22.05.2022, 04.06.2022 ರಿಂದ 18/14 ದಿನಗಳು. ದೆಹಲಿ,ಆಗ್ರಾ,ಮಥುರಾ ಕಾಶಿ, ಗಯಾ, ಬದರಿನಾಥ,ಕೇದಾರ್‌ನಾಥ್ 01.05.2022 ರಿಂದ 18/13ದಿನಗಳು ಸ್ವಯಂಭೂ,ಹಿಮಲಿಂಗ, ಅಮರನಾಥ್, ವೈಷ್ಣೋದೇವಿ ಕಾಶ್ಮೀರ್22.06.2022, 30.06.2022 ರಿಂದ13/17 ದಿನಗಳು ಸಂಪರ್ಕಿಸಿ: 080-26508925, 9980993631. ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

ಅಂಡಮಾನ್ ಹವಳದ್ವೀಪ 5ದಿನಗಳು ವಿಮಾನದಲ್ಲಿ ಏಪ್ರಿಲ್, ಮೇ, ಜೂನ್ನಲ್ಲಿ Royal Package. 10/07/2022 13/17 ದಿನಗಳು ದೆಹಲಿ, ಅಮೃತಸರ, ವೈಶ್ಣವದೇವಿ, ಅಮರನಾಥ್ ಕಾಶ್ಮೀರ, ಇತ್ಯಾದಿ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

19.4.2022 ಕಾಶಿ, ಗಯ, ದೆಹಲಿ 13ದಿನಗಳು. 24.5.2022 ಡಾರ್ಜಿಲಿಂಗ್, ಗ್ಯಾಂಗ್ಟಾಕ್, ಕಲ್ಕತ್ತಾ, ಭುವನೇಶ್ವರ 12ದಿನಗಳು. 20.6.2022 ಚಾರ್ ಧಾಮ್ ಯಾತ್ರೆ. ನಂದಿನಿ ಟೂರಿಸ್ಟ್.9916574089.

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

★ಊಟ, ವಸತಿಯೊಂದಿಗೆ★ ವಿಮಾನದಲ್ಲಿ ಪ್ರವಾಸ 15.05.2022 12ದಿನಗಳು ಸಿಮ್ಲಾ,ಕುಲುಮನಾಲಿ, ಅಮೃತಸರ್,ವಾಘಗಡಿ, ವೈಷ್ಣೋದೇವಿ,ಶೀವಕೋರಿ,. 09.06.2022 13/7 ದಿನಗಳು ಕಾಶಿ,ಗಯಾ,ಅಲಹಬಾದ್, ಅಯೋಧ್ಯೆ,ನೈಮಿಷ್ಯಾರಣ್ಯ, ಹರಿದ್ವಾರ,ಋಷಿಕೇಶ ಪ್ರವಾಸ.ಆರ್. ಗಾಂಧಿ ಟೂರ್ಸ್.9902433500/ 9945445809

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 02/05/22 ದೆಹಲಿ, ವೈಷ್ಣೋದೇವಿ.14/04/22 ಶಿರಡಿ, ಪಂಡರಾಪುರ.14/04/22 ಪೂರಿ ಜಗನ್ನಾಥ್. 14/04/22 ರಾಮೇಶ್ವರಂ, ಕನ್ಯಾಕುಮಾರಿ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಾರದ ಷೇರುಪೇಟೆ ವಹಿವಾಟು: ತಜ್ಞರ ನಿರೀಕ್ಷೆ

ಆರ್‌ಬಿಐ ಹಣಕಾಸು ನೀತಿ ಮೇಲೆ ಮಾರುಕಟ್ಟೆ ಗಮನ



ನವದೆಹಲಿ (ಪಿಟಿಐ): ದೇಶದ ಆರ್ಥಿಕತೆಗೆ ಸಂಬಂಧಿಸಿದ ಅಂಕಿ–ಅಂಶಗಳು, ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಮತ್ತು ರಷ್ಯಾ–ಉಕ್ರೇನ್ ಸಂಘರ್ಷಕ್ಕೆ ಸಂಬಂಧಿಸಿದ ಬೆಳವಣಿಗೆಗಳು ಈ ವಾರದಲ್ಲಿ ಷೇರು ಮಾರುಕಟ್ಟೆಯ ವಹಿವಾಟಿನ ಮೇಲೆ ಪ್ರಭಾವ ಬೀರಲಿವೆ ಎಂದು ತಜ್ಞರು ಹೇಳಿದ್ದಾರೆ.

ಇವಿಷ್ಟೇ ಅಲ್ಲದೆ, ವಿದೇಶಿ ಸಾಂಸ್ಥಿಕ ಹೂಡಿಕೆ ಹಾಗೂ ಕಚ್ಚಾ ತೈಲ ಬೆಲೆಯ ಏರಿಳಿತಗಳು ಕೂಡ ಪರಿಣಾಮ ಬೀರಲಿವೆ. ‘ಆರ್‌ಬಿಐನ ಹಣಕಾಸು ನೀತಿ ಸಮಿತಿಯ ತೀರ್ಮಾನ ಏಪ್ರಿಲ್ 8ರಂದು ಹೊರಬೀಳಲಿದೆ. ಸೋಮವಾರ ಹಾಗೂ ಬುಧವಾರ ಕ್ರಮವಾಗಿ ತಯಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳು ಪ್ರಕಟವಾಗಲಿವೆ. ಷೇರು ಮಾರುಕಟ್ಟೆಯ ಗಮನವು ಇವುಗಳ ಮೇಲೆ ಇರಲಿದೆ’ ಎಂದು ಸ್ವಸ್ತಿಕಾ ಇನ್‌ವೆಸ್ಟ್‌ಮಾರ್ಟ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಸಂತೋಷ್ ಮೀನಾ ಹೇಳಿದ್ದಾರೆ.

ಉಕ್ರೇನ್ ಮತ್ತು ರಷ್ಯಾ ನಡುವಿನ ಸಂಘರ್ಷ ತಿಳಿಯಾಗುವ ಸೂಚನೆಗಳು ಬಂದರೆ ಮಾರುಕಟ್ಟೆಗಳಲ್ಲಿ ಚೇತರಿಕೆ ಕಾಣಿಸಿಕೊಳ್ಳಲಿದೆ ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ತಿಳಿಸಿದ್ದಾರೆ. ಮಾರ್ಚ್ ತ್ರೈಮಾಸಿಕದ ಫಲಿತಾಂಶಗಳನ್ನು ಕಂಪನಿಗಳು ಪ್ರಕಟಿಸುವ ಪ್ರಕ್ರಿಯೆ ಶುರುವಾಗಲಿರುವ ಕಾರಣ, ನಿರ್ದಿಷ್ಟ ಷೇರುಗಳಲ್ಲಿ ಹೆಚ್ಚಿನ ಚಲನೆ ಕಂಡುಬರಬಹುದು ಎಂದು ಅವರು ಹೇಳಿದ್ದಾರೆ.

ಹಿಂದಿನ ವಾರದ ಅವಧಿಯಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,914 ಅಂಶ ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 517 ಅಂಶ ಏರಿಕೆ ದಾಖಲಿಸಿದೆ. ಹೊಸ ಆರ್ಥಿಕ ವರ್ಷದ ಮೊದಲ ದಿನ (ಶುಕ್ರವಾರ) ಷೇರು ಮಾರುಕಟ್ಟೆಗಳು ಏರಿಕೆ ದಾಖಲಿಸಿವೆ.

2021–22ನೇ ಹಣಕಾಸು ವರ್ಷದಲ್ಲಿ ಸೆನ್ಸೆಕ್ಸ್ 9,059 ಅಂಶ (ಶೇ 18.29ರಷ್ಟು) ಏರಿಕೆ ದಾಖಲಿಸಿದೆ. ನಿಫ್ಟಿ 2,774 ಅಂಶ (ಶೇ 18.88ರಷ್ಟು) ಏರಿಕೆ ಕಂಡಿದೆ.

ಮುಂಬರುವ ದಿನಗಳಲ್ಲಿ ಮಾರುಕಟ್ಟೆಯ ಗಮನವು ಪ್ರಮುಖವಾಗಿ ರಷ್ಯಾ–ಉಕ್ರೇನ್ ಯುದ್ಧ, ಕಚ್ಚಾ ತೈಲ ಬೆಲೆಯಲ್ಲಿನ ಚಲನೆ ಹಾಗೂ ಆರ್‌ಬಿಐ ಹಣಕಾಸು ನೀತಿ ನಿರ್ಧಾರದ ಮೇಲೆ ಇರಲಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

11 ದಿನಗಳಲ್ಲಿ ಪೆಟ್ರೋಲ್ ಬೆಲೆ ₹ 8.33 ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶನಿವಾರ ಮತ್ತು ಭಾನುವಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ.

ಎರಡು ದಿನಗಳ ಏರಿಕೆಯಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 1.63ರಷ್ಟು ಹಾಗೂ ಡೀಸೆಲ್ ದರ ₹ 1.51ರಷ್ಟು ಏರಿಕೆ ಆಗಿದೆ. ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಭಾನುವಾರ ಪೆಟ್ರೋಲ್ ದರ ಲೀಟರಿಗೆ ₹ 108.97 ಮತ್ತು ಡೀಸೆಲ್ ದರ 92.82ಕ್ಕೆ ತಲುಪಿದೆ.

ಮಾರ್ಚ್ 22ರಿಂದ ಏಪ್ರಿಲ್ 3ರವರೆಗೆ ಬೆಂಗಳೂರಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 8.33ರಷ್ಟು ಮತ್ತು ಡೀಸೆಲ್ ದರ ₹ 7.81ರಷ್ಟು ಹೆಚ್ಚಳ ಆಗಿದೆ.

ಸ್ಥಳೀಯ ಮಾರಾಟ ತೆರಿಗೆ ಮತ್ತು ಸಾಗಣೆ ವೆಚ್ಚಕ್ಕೆ ಅನುಗುಣವಾಗಿ ಮಾರಾಟ ದರವು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಆಗುತ್ತದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 103.41 ಮತ್ತು ಡೀಸೆಲ್ ದರ ಲೀಟರಿಗೆ ₹ 94.67ಕ್ಕೆ ಏರಿಕೆ ಆಗಿದೆ.

ತಿರುವನಂತಪುರ, ಹೈದರಾಬಾದ್, ಮುಂಬೈ, ಭುವನೇಶ್ವರ, ರಾಯಪುರದಲ್ಲಿ ಡೀಸೆಲ್ ದರ ಲೀಟರಿಗೆ ₹ 100ರ ಗಡಿ ದಾಟಿದೆ. ರಾಜಸ್ಥಾನ, ಮಧ್ಯಪ್ರದೇಶ, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಕೆಲವು ನಗರಗಳಲ್ಲಿ ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿದೆ.

ಆಂಧ್ರ ಪ್ರದೇಶದ ಚಿತ್ತೂರಿನಲ್ಲಿ ಡೀಸೆಲ್ ದರ ಲೀಟರಿಗೆ ₹ 105.52 ರಷ್ಟು ಮತ್ತು ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಪೆಟ್ರೋಲ್ ದರ ₹ 120.65ರಷ್ಟು ಗರಿಷ್ಠ ಮಟ್ಟದಲ್ಲಿದೆ.

ಯಾವುದೇ ಪ್ರತಿಕ್ರಿಯೆ ನೀಡದ ಕಂಪನಿ

ಇನ್ಫೊಸಿಸ್ ಸೇವಾ ಕೇಂದ್ರ ರಷ್ಯಾದಿಂದ ಸ್ಥಳಾಂತರ?

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯು ರಷ್ಯಾದಿಂದ ನೀಡುವ ತನ್ನ ಸೇವೆಗಳನ್ನು ಬೇರೆ ದೇಶಗಳಲ್ಲಿ ಇರುವ ಸೇವಾ ಕೇಂದ್ರಗಳಿಗೆ ಸ್ಥಳಾಂತರಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬ್ರಿಟನ್ನಿನ ಹಣಕಾಸು ಸಚಿವ ರಿಷಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ ಅವರು ಇನ್ಫೊಸಿಸ್‌ನಲ್ಲಿ ಷೇರು ಹೊಂದಿದ್ದಾರೆ. ಈ ವಿಚಾರವಾಗಿ ಸುನಕ್ ಅವರು ಈಚೆಗೆ ತೀವ್ರ ಟೀಕೆಗೆ ಗುರಿಯಾಗಿದ್ದಾರೆ. ಮಾಧ್ಯಮಗಳಿಂದ ಕೆಲವು ಕಠಿಣ ಪ್ರಶ್ನೆಗಳನ್ನು ಅವರು ಎದುರಿಸಿದ್ದಾರೆ. ಈ ಬೆಳವಣಿಗೆಯ ನಡುವೆ ಕಂಪನಿ ಈ ನಿರ್ಧಾರ ತೆಗೆದುಕೊಂಡಿದೆ ಎಂದು ತಿಳಿಸಿವೆ.

ಕಂಪನಿಯು ತನ್ನ ಸೇವೆಗಳನ್ನು ರಷ್ಯಾದಿಂದ ಇತರ ಜಾಗತಿಕ ಕೇಂದ್ರಗಳಿಗೆ ಸ್ಥಳಾಂತರಿಸುತ್ತಿದೆ ಎಂದಷ್ಟೇ ಮೂಲಗಳು ಹೇಳಿವೆ. ಈ ಕುರಿತಾಗಿ ಹೆಚ್ಚಿನ ವಿವರ ನೀಡಿಲ್ಲ.

ಕಂಪನಿಯು ರಷ್ಯಾದಲ್ಲಿ 100ಕ್ಕೂ ಕಡಿಮೆ ಉದ್ಯೋಗಿಗಳನ್ನು ಹೊಂದಿದೆ. ಅಲ್ಲಿನ ಸ್ಥಳೀಯ ಸಿಬ್ಬಂದಿಯ ಸ್ಥಿತಿಗತಿ ಮತ್ತು ಅವರನ್ನು ಕೂಡ ಸ್ಥಳಾಂತರಿಸಲಾಗುತ್ತದೆಯೇ ಎಂಬುದನ್ನು ಖಚಿಪಡಿಸಿಕೊಳ್ಳಲು ಆಗಿಲ್ಲ.

ಈ ಬೆಳವಣಿಗೆಯ ಕುರಿತು ಸುದ್ದಿಸಂಸ್ಥೆ ಕಳುಹಿಸಿದ ಇ–ಮೇಲ್‌ಗೆ ‘ಯಾವುದೇ ಪ್ರತಿಕ್ರಿಯೆ ಇಲ್ಲ’ ಎಂದು ಇನ್ಫೊಸಿಸ್ ಹೇಳಿದೆ.

ರಷ್ಯಾದ ವ್ಯವಹಾರಗಳು ಮತ್ತು ವ್ಯಕ್ತಿಗಳ ಮೇಲೆ ಬ್ರಿಟನ್ ವ್ಯಾಪಕ ನಿರ್ಬಂಧಗಳನ್ನು ವಿಧಿಸಿದೆ. ಉಕ್ರೇನ್ ಸಂಘರ್ಷದ ಹಿನ್ನೆಲೆಯಲ್ಲಿ ರಷ್ಯಾದಲ್ಲಿ ಯಾವುದೇ ಹೂಡಿಕೆ ಮಾಡುವ ಮುನ್ನ ಎಚ್ಚರಿಕೆಯಿಂದ ಯೋಚಿಸುವಂತೆ ಸುನಕ್ ಅವರು ಬ್ರಿಟನ್‌ನ ಕಂಪನಿಗಳಿಗೆ ಸೂಚನೆಯನ್ನೂ ನೀಡಿದ್ದಾರೆ.

ಸುನಕ್ ಅವರು ಇನ್ಫೊಸಿಸ್‌ನ ಸಹಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಅವರ ಅಳಿಯ. ರಷ್ಯಾದ ಮೇಲೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಿರುವುದನ್ನು ಉಲ್ಲೇಖಿಸಿ, ಸುನಕ್ ಅವರಲ್ಲಿ, ‘ನಿಮ್ಮ ಸಲಹೆಗಳು ಕುಟುಂಬಕ್ಕೆ ಅನ್ವಯ ಆಗುವುದಿಲ್ಲವೇ’ ಎಂದು ಸಂದರ್ಶನವೊಂದರಲ್ಲಿ ಪ್ರಶ್ನಿಸಲಾಗಿತ್ತು. ಕಂಪನಿಗಳು ಕೈಗೊಳ್ಳುವ ತೀರ್ಮಾನಕ್ಕೂ ತಮಗೂ ಸಂಬಂಧವಿಲ್ಲ ಎಂದು ಅವರು ಪ್ರತಿಕ್ರಿಯೆ ನೀಡಿದ್ದರು.

ಕಂಪನಿಯು ರಷ್ಯಾದ ಮೂಲದ ಉದ್ಯೋಗಿಗಳ ಸಣ್ಣ ತಂಡವನ್ನು ಹೊಂದಿದೆ. ಅದು ಕೆಲವು ಜಾಗತಿಕ ಗ್ರಾಹಕರಿಗೆ ಸ್ಥಳೀಯವಾಗಿ ಸೇವೆ ಸಲ್ಲಿಸುತ್ತದೆ.

ರಷ್ಯಾದ ಉದ್ದಿಮೆಗಳ ಜೊತೆ ಸಕ್ರಿಯ ವಾಣಿಜ್ಯ ಸಂಬಂಧ ಇಲ್ಲ ಎಂದು ಇನ್ಫೊಸಿಸ್ ವಿವರಣೆ ನೀಡಿತ್ತು. ರಷ್ಯಾ–ಉಕ್ರೇನ್ ಯುದ್ಧದ ಸಂತ್ರಸ್ತರಿಗಾಗಿ ₹ 7.62 ಕೋಟಿ ಮೀಸಲಿಡುತ್ತಿರುವುದಾಗಿ ಕಂಪನಿ ತಿಳಿಸಿತ್ತು.

ಮುಖ್ಯಾಂಶಗಳು

- ಇನ್ಫೊಸಿಸ್‌ನಲ್ಲಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಷೇರು ಪಾಲು
- ರಷ್ಯಾದಲ್ಲಿ 100ಕ್ಕೂ ಕಡಿಮೆ ಉದ್ಯೋಗಿಗಳು
- ರಷ್ಯಾ ಉದ್ದಿಮೆಗಳ ಜೊತೆ ಸಕ್ರಿಯ ವಾಣಿಜ್ಯ ಸಂಬಂಧ ಇಲ್ಲ: ಇನ್ಫೊಸಿಸ್

ಶಿರಸಿಯ ಹನುಮಂತಿಯಲ್ಲಿ ನಿರ್ಮಾಣಗೊಂಡಿರುವ ಹಾಲು ಪ್ಯಾಕಿಂಗ್ ಘಟಕ

ಪಿಪಿಪಿ ಮಾದರಿ: ಶಿರಸಿಯಲ್ಲಿ ಹಾಲು ಪ್ಯಾಕಿಂಗ್ ಘಟಕ

ಪ್ರಜಾವಾಣಿ ವಾರ್ತೆ

ಶಿರಸಿ: ತಾಲ್ಲೂಕಿನ ಹನುಮಂತಿಯಲ್ಲಿ ರಾಜ್ಯದ ಮೊದಲ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಅಡಿಯಲ್ಲಿ ಹಾಲು ಪ್ಯಾಕಿಂಗ್ ಘಟಕ ಸ್ಥಾಪಿಸಲಾಗಿದ್ದು, ಮಂಗಳವಾರದಿಂದ ಇದು ಕಾರ್ಯಾರಂಭ ಮಾಡಲಿದೆ.

ಧಾರವಾಡ ಹಾಲು ಒಕ್ಕೂಟ (ಧಾಮುಲ್) ಮತ್ತು ಶಿರಸಿ ಡೈರಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಒಪ್ಪಂದ ಮಾಡಿಕೊಂಡು ಈ ಘಟಕ ಸ್ಥಾಪಿಸಿವೆ. ಅಂದಾಜು ₹ 18 ಕೋಟಿ ವೆಚ್ಚದಲ್ಲಿ ಘಟಕ ನಿರ್ಮಿಸಲಾಗಿದೆ.

‘ಪ್ರತಿನಿತ್ಯ 50 ಸಾವಿರ ಲೀಟರ್ ಹಾಲು ಪ್ಯಾಕಿಂಗ್ ಮಾಡುವ ಸಾಮರ್ಥ್ಯವನ್ನು ಘಟಕ ಹೊಂದಿದೆ. ಇದನ್ನು 1 ಲಕ್ಷ ಲೀಟರ್‌ಗೆ ಏರಿಕೆ ಮಾಡಲು ಅವಕಾಶ ಇದೆ. ಕಟ್ಟಡ ನಿರ್ಮಾಣ, ಯಂತ್ರಗಳ ಅಳವಡಿಕೆ, ನಿರ್ವಹಣೆಯನ್ನು ಶಿರಸಿ ಡೈರಿ ಕಂಪನಿ ನೋಡಿಕೊಳ್ಳಲಿದೆ. ಹಾಲು ಸಂಸ್ಕರಣೆ ಮಾಡಿ, ಪ್ಯಾಕಿಂಗ್ ಮಾಡಲು ಸಂಸ್ಥೆಗೆ ಪ್ರತಿ ಲೀಟರ್‌ಗೆ ₹ 4.09 ಪಾವತಿಸಲಾಗುತ್ತದೆ’ ಎಂದು ಧಾಮುಲ್ ಅಧ್ಯಕ್ಷ ಶಂಕರ ಮುಗದ ತಿಳಿಸಿದ್ದಾರೆ.

ಹಣಕಾಸು ಸಾಕ್ಷರತೆ

ಅಂಕಣವು ಕಾರಣಾಂತರಗಳಿಂದಾಗಿ ಇಂದು ಪ್ರಕಟವಾಗುತ್ತಿಲ್ಲ –ಸಂ

ನೇಪಾಳದಲ್ಲಿ ರೂಪೆ ಕಾರ್ಡ್ ಸೇವೆ

ನವದೆಹಲಿ (ಪಿಟಿಐ): ರೂಪೆ ಕಾರ್ಡ್ ಹೊಂದಿರುವವರು ಇನ್ನು ಮುಂದೆ ನೇಪಾಳದಲ್ಲಿ ಪಾವತಿ ವಹಿವಾಟು ನಡೆಸಬಹುದು. ಪ್ರಧಾನಿ ನರೇಂದ್ರ ಮೋದಿ ಮತ್ತು ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು ನೇಪಾಳದಲ್ಲಿ ರೂಪೆ ವಹಿವಾಟು ಆರಂಭಕ್ಕೆ ಭಾನುವಾರ ಚಾಲನೆ ನೀಡಿದ್ದಾರೆ.

ಭೂತಾನ್, ಸಿಂಗಪುರ ಮತ್ತು ಸಂಯುಕ್ತ ಅರಬ್ ಸಂಸ್ಥಾನಗಳಲ್ಲಿ (ಯುಎಇ) ರೂಪೆ ಕಾರ್ಡ್‌ಗೆ ಈಗಾಗಲೇ ಮಾನ್ಯತೆ ಇದೆ. ಈಗ ಈ ಸಾಲಿಗೆ ನೇಪಾಳ ಕೂಡ ಸೇರಿಕೊಂಡಿದೆ. ‘ನೇಪಾಳದಲ್ಲಿ ರೂಪೆ ಕಾರ್ಡ್ ವಹಿವಾಟು ಶುರುವಾಗುತ್ತಿರುವುದು ಭಾರತ ಮತ್ತು ನೇಪಾಳದ ಹಣಕಾಸಿನ ಸಂಬಂಧಕ್ಕೆ ಹೊಸ ಅಧ್ಯಾಯ ಸೇರ್ಪಡೆ ಆದಂತಾಗಿದೆ’ ಎಂದು ಮೋದಿ ಅವರು ಹೇಳಿದ್ದಾರೆ.

ಸ್ಮಾಲ್‌ಕ್ಯಾಪ್: ಶೇ 36.64 ಗಳಿಕೆ

ನವದೆಹಲಿ (ಪಿಟಿಐ): ಷೇರುಪೇಟೆಗಳಲ್ಲಿ ಸಣ್ಣ ಕಂಪನಿಗಳ (ಸ್ಮಾಲ್‌ಕ್ಯಾಪ್) ಷೇರುಗಳು 2021–22ನೇ ಹಣಕಾಸು ವರ್ಷದಲ್ಲಿ ಶೇಕಡ 36.64ರವರೆಗೆ ಗಳಿಕೆ ತಂದುಕೊಟ್ಟಿವೆ. ಪ್ರಸಕ್ತ ಹಣಕಾಸು ವರ್ಷದಲ್ಲಿಯೂ ಇದೇ ರೀತಿಯ ಗಳಿಕೆ ತಂದುಕೊಡಲಿವೆ ಎನ್ನುವುದು ತಜ್ಞರ ನಿರೀಕ್ಷೆಯಾಗಿದೆ.

ಹಿಂದಿನ ಹಣಕಾಸು ವರ್ಷದ ಕೊನೆಯ ಭಾಗದಲ್ಲಿ ಮಾರುಕಟ್ಟೆಯು ಜಾಗತಿಕ ಬಿಕ್ಕಟ್ಟು, ಹಣದುಬ್ಬರ ಮತ್ತು ವಿದೇಶಿ ಬಂಡವಾಳ ಹೊರಹರಿವಿನಂತಹ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಹಿಂದಿನ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಮಾರುಕಟ್ಟೆ ಸ್ಥಿತಿ ಉತ್ತಮವಾಗಿತ್ತು. ದ್ವಿತೀಯಾರ್ಧದಲ್ಲಿ ಏರಿಳಿತಗಳ ಸ್ಥಿತಿಗೆ ಹೊರಳಿತು ಎಂದು ವಿಶ್ಲೇಷಕರು ಹೇಳಿದ್ದಾರೆ.

‘ಮಾರುಕಟ್ಟೆಯು ಎಲ್ಲಾ ರೀತಿಯ ಆತಂಕಗಳನ್ನೂ ಮೀರಿ ಬೆಳೆಯುತ್ತಿದ್ದು, ತನ್ನ ಸ್ಥಿತಿಸ್ಥಾಪಕತ್ವ ಗುಣವನ್ನು ತೋರಿಸುತ್ತಿದೆ. ಬಲಿಷ್ಠವಾದ ಗೂಳಿಯ ಓಟ ಮಾರುಕಟ್ಟೆಯಲ್ಲಿದೆ. ಹೀಗಿದ್ದರೂ, ಕುಸಿತವು ಷೇರುಪೇಟೆಯ ಪ್ರಯಾಣದ ಒಂದು ಭಾಗವೇ ಆಗಿದೆ’ ಎಂದು ಟ್ರೇಡಿಂಗೊ ಕಂಪನಿಯ ಸ್ಥಾಪಕ ಪಾರ್ಥ ನ್ಯಾತಿ ಅವರು ಹೇಳಿದ್ದಾರೆ.

ಗಳಿಕೆ (2021-22)

7,566.32 ಅಂಶ
ಸ್ಮಾಲ್‌ಕ್ಯಾಪ್ ಇಂಡೆಕ್ಸ್

3,926.66 ಅಂಶ
ಮಿಡ್‌ಕ್ಯಾಪ್ ಇಂಡೆಕ್ಸ್

9,059.36
ಬಿಎಸ್‌ಇ ಸೆನ್ಸೆಕ್ಸ್

6 ಲಕ್ಷ ಸಿಎನ್‌ಜಿ ಕಾರು ಮಾರಾಟ: ಮಾರುತಿ

ನವದೆಹಲಿ (ಪಿಟಿಐ): ಬಿಡಿಭಾಗಗಳ ಪೂರೈಕೆ ಸ್ಥಿತಿ ಅವಲಂಬಿಸಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಗರಿಷ್ಠ 6 ಲಕ್ಷ ಸಿಎನ್‌ಜಿ ವಾಹನಗಳನ್ನು ಮಾರಾಟ ಮಾಡುವ ಗುರಿ ಹೊಂದಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ 2.3 ಲಕ್ಷ ಸಿಎನ್‌ಜಿ ವಾಹನ ಮಾರಾಟ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಾದರಿಗಳಲ್ಲಿ ಸಿಎನ್‌ಜಿ ಅಳವಡಿಸುವ ಯೋಜನೆಯನ್ನು ಕಂಪನಿ ಹೊಂದಿದೆ.

ದಾಖಲೆ ಮಟ್ಟಕ್ಕೆ ರಫ್ತು ವಹಿವಾಟು

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು 2021–22ನೇ ಹಣಕಾಸು ವರ್ಷದಲ್ಲಿ ದಾಖಲೆಯ ₹ 31.76 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ. ಕೇಂದ್ರ ಸರ್ಕಾರವು ಭಾನುವಾರ ಬಿಡುಗಡೆ ಮಾಡಿರುವ ಮಾಹಿತಿಯಲ್ಲಿ ಈ ಅಂಶ ಇದೆ.

2020–21ನೇ ಹಣಕಾಸು ವರ್ಷದಲ್ಲಿ ₹ 22.19 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿತ್ತು. ಪೆಟ್ರೋಲಿಯಂ ಉತ್ಪನ್ನಗಳು, ಎಂಜಿನಿಯರಿಂಗ್ ಸರಕುಗಳು, ರತ್ನ ಮತ್ತು ಚಿನ್ನಾಭರಣ ಹಾಗೂ ರಾಸಾಯನಿಕ ಉತ್ಪನ್ನಗಳ ರಫ್ತು ಹೆಚ್ಚಾಗಿರುವುದರಿಂದ ರಫ್ತು ವಹಿವಾಟು ದಾಖಲೆ ಮಟ್ಟವನ್ನು ತಲುಪಿದೆ.

2022ರ ಮಾರ್ಚ್‌ನಲ್ಲಿ ರಫ್ತು ವಹಿವಾಟು ಸಾರ್ವಕಾಲಿಕ ದಾಖಲೆ ಮಟ್ಟವಾದ ₹ 3.04 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ರಫ್ತುದಾರರು, ಉದ್ಯಮ ವಲಯದ ಸಂಘಗಳು ಹಾಗೂ ವಿವಿಧ ಇಲಾಖೆಗಳು ಮತ್ತು ರಾಜ್ಯ ಸರ್ಕಾರಗಳ ಸಮನ್ವಯದಿಂದಾಗಿ ರಫ್ತು ವಹಿವಾಟಿನಲ್ಲಿ ಈ ಸಾಧನೆ ಮಾಡುವಂತಾಗಿದೆ ಎಂದು ಗೋಯಲ್ ತಿಳಿಸಿದ್ದಾರೆ. 2021ರ ಮಾರ್ಚ್‌ನಲ್ಲಿ ₹ 2.58 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿತ್ತು.

ಅಮೆರಿಕ, ಯುಎಇ, ಚೀನಾ, ಬಾಂಗ್ಲಾದೇಶ ಮತ್ತು ನೆದರ್ಲೆಂಡ್ಸ್ ದೇಶಗಳು ಭಾರತದ ಪ್ರಮುಖ ಐದು ರಫ್ತು ತಾಣಗಳಾಗಿವೆ.

ಭಾರತದ ‘ಆತ್ಮನಿರ್ಭರ ಭಾರತ’ ಪ್ರಯಾಣದಲ್ಲಿ ಇದೊಂದು ಮಹತ್ವದ ಮೈಲುಗಲ್ಲು
ನರೇಂದ್ರ ಮೋದಿ, ಪ್ರಧಾನಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹400

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ	₹505-650
ದ್ವಿತಳಿ	₹285-758

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್4	₹172
ಆರ್‌ಎಸ್‌ಎಸ್5	₹166
ಗುಡ್ ಲಾಟ್	₹162

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹಲವೆಡೆ ಪ್ರತಿಭಟನೆ, ಬಂದೂಕುಧಾರಿ ಯೋಧರಿಂದ ಪ್ರತಿಭಟನಕಾರರಿಗೆ ತಡೆ

ಶ್ರೀಲಂಕಾ: ಕರ್ಫ್ಯೂ ವಿರುದ್ಧ ಆಕ್ರೋಶ

‘ಗೊಟ ಮನೆಗೆ ಮರಳು’ ಎಂಬ ಫಲಕಗಳನ್ನು ಹಿಡಿದ ಜನರು ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ವಿರುದ್ಧ ಭಾನುವಾರ ಪ್ರತಿಭಟನೆ ನಡೆಸಿದ್ದಾರೆ —ಎಎಫ್‌ಪಿ ಚಿತ್ರ

ಕೊಲಂಬೊ (ಎಎಫ್‌ಪಿ, ಪಿಟಿಐ): ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾ, ವಿರೋಧ ಪಕ್ಷಗಳ ಸಂಸದರು ಮತ್ತು ನಾಗರಿಕರ ಭಾರಿ ಪ್ರತಿಭಟನೆಗೆ ಭಾನುವಾರ ಸಾಕ್ಷಿಯಾಗಿದೆ. ಶನಿವಾರ ಸಂಜೆಯಿಂದ ಸೋಮವಾರ ಬೆಳಿಗ್ಗಿನವರೆಗೆ ಸರ್ಕಾರವು ಹೇರಿರುವ ಕರ್ಫ್ಯೂ ಮತ್ತು ಇತರ ನಿರ್ಬಂಧಗಳ ವಿರುದ್ಧ ಪ್ರತಿಭಟನೆ ಸ್ಫೋಟಿಸಿದೆ.

ಪ್ರಮುಖ ವಿರೋಧ ಪಕ್ಷ ಸಮಗಿ ಜನ ಬಲವೇಗಯದ (ಎಸ್‌ಜೆಬಿ) ಸಂಸದರು ಕರ್ಫ್ಯೂ ಉಲ್ಲಂಘಿಸಿದ್ದಾರೆ. ಅಧ್ಯಕ್ಷ ಗೊಟಬಯ ರಾಜಪಕ್ಸ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಆದರೆ, ಎಸ್‌ಜೆಬಿ ನಡೆಸಿದ ಪ್ರತಿಭಟನಾ ಜಾಥಾವನ್ನು ಸಶಸ್ತ್ರ ಪಡೆಗಳು ತಡೆದಿವೆ.

ದ್ವೀಪ ರಾಷ್ಟ್ರ ಶ್ರೀಲಂಕಾವು ಕಳೆದ ಕೆಲವು ವರ್ಷಗಳಿಂದ ತೀವ್ರವಾದ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದೆ. ಆಹಾರ, ಇಂಧನ ಮತ್ತು ಇತರ ಅಗತ್ಯ ವಸ್ತುಗಳ ಕೊರತೆ ದೇಶವನ್ನು ಕಾಡುತ್ತಿದೆ. ವಿದ್ಯುತ್ ಪೂರೈಕೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಹಣದುಬ್ಬರ ದಾಖಲೆ ಮಟ್ಟದಲ್ಲಿದೆ. ಬ್ರಿಟನ್‌ನಿಂದ 1948ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ದೇಶವು ಇದೇ ಮೊದಲ ಬಾರಿಗೆ ಇಂತಹುದೊಂದು ಸಂಕಷ್ಟಕ್ಕೆ ಒಳಗಾಗಿದೆ. ದೇಶದ ಸ್ಥಿತಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಗುಂಪೊಂದು ರಾಜಧಾನಿ ಕೊಲಂಬೊದಲ್ಲಿರುವ ಅಧ್ಯಕ್ಷರ ಅಧಿಕೃತ ನಿವಾಸಕ್ಕೆ ನುಗ್ಗಲು ಶುಕ್ರವಾರ ಯತ್ನಿಸಿತ್ತು. ಅದಾದ ಬಳಿಕ, ಅಧ್ಯಕ್ಷ ಗೊಟಬಯ ಅವರು ಕರ್ಫ್ಯೂ ಮತ್ತು ಇತರ ನಿರ್ಬಂಧಗಳನ್ನು ಹೇರಿದ್ದಾರೆ.

ಸರ್ಕಾರವು ರಾಜೀನಾಮೆ ನೀಡಬೇಕು ಎಂದು ಎಸ್‌ಜೆಬಿ ಆಗ್ರಹಿಸಿದೆ. ಆದರೆ, ಕೊಲಂಬೊದ ಇಂಡಿಪೆಂಡೆನ್ಸ್ ಸ್ಕ್ವೇರ್‌ನತ್ತ ಜಾಥಾ ನಡೆಸುತ್ತಿದ್ದ ಎಸ್‌ಜೆಬಿ ನಾಯಕರು ಮತ್ತು ಬೆಂಬಲಿಗರನ್ನು ಬಂದೂಕುಧಾರಿ ಸೈನಿಕರು ತಡೆದಿದ್ದಾರೆ. ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಅವರ ನಿವಾಸದಿಂದ ಕೆಲವು ಮೀಟರ್‌ಗಳಷ್ಟು ದೂರದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಪ್ರತಿಭಟನಕಾರರು ಮತ್ತು ಭದ್ರತಾ ಪಡೆಗಳ ನಡುವೆ ಬಿರುಸಿನ ಮಾತಿನ ಚಕಮಕಿ ನಡೆದಿದೆ. ಸುಮಾರು ಎರಡು ತಾಸು ವಾಗ್ವಾದದ ಬಳಿಕ ಪ್ರತಿಭಟನಕಾರರು ಶಾಂತಿಯುತವಾಗಿ ಹಿಂದಿರುಗಿದ್ದಾರೆ.

‘ಅಧ್ಯಕ್ಷ ರಾಜಪಕ್ಸ ಅವರ ನಿರಂಕುಶ ಆಳ್ವಿಕೆಯ ವಿರುದ್ಧ ಅಲೆ ಎದ್ದಿದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುವುದು ಒಳ್ಳೆಯದು’ ಎಂದು ಎಸ್‌ಜೆಬಿ ಸಂಸದ ಹರ್ಷ ಡಿಸಿಲ್ವಾ ರ್‍ಯಾಲಿಯೊಂದರಲ್ಲಿ ಹೇಳಿದ್ದಾರೆ.

ತುರ್ತುಸ್ಥಿತಿ ಘೋಷಣೆ ಮತ್ತು ನಗರದ ಬೀದಿಗಳಲ್ಲಿ ಭಾರಿ ಪ್ರಮಾಣದಲ್ಲಿ ಸೈನಿಕರ ನಿಯೋಜನೆಯನ್ನು ಸಂಸದ ಎರಾನ್ ವಿಕ್ರಮರತ್ನೆ ಅವರು ಖಂಡಿಸಿದ್ದಾರೆ. ‘ಸೇನೆಯು ಅಧಿಕಾರವನ್ನು ಕೈವಶ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಲಾಗದು. ನಾವು ಈಗಲೂ ಪ್ರಜಾಪ್ರಭುತ್ವ ರಾಷ್ಟ್ರ ಎಂಬುದನ್ನು ಅವರು ನೆನಪಿನಲ್ಲಿ ಇರಿಸಿಕೊಳ್ಳಬೇಕು’ ಎಂದು ವಿಕ್ರಮರತ್ನೆ ಹೇಳಿದ್ದಾರೆ.

ಫೇಸ್‌ಬುಕ್, ಯುಟ್ಯೂಬ್, ಟ್ವಿಟರ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಸೇರಿದಂತೆ ಸಾಮಾಜಿಕ ಜಾಲತಾಣದ ಹಲವು ವೇದಿಕೆಗಳನ್ನು ಸೇನೆಯ ನಿರ್ದೇಶನದ ಅನ್ವಯ ಸ್ಥಗಿತಗೊಳಿಸಲಾಗಿದೆ ಎಂದು ಈ ವೇದಿಕೆಗಳು ತಮ್ಮ ಚಂದಾದಾರರಿಗೆ ಹೇಳಿವೆ.

ಈ ಬೆಳವಣಿಗೆಯ ಬಳಿಕ, ಶ್ರೀಲಂಕಾದ ಅಂತರ್ಜಾಲ ನಿಯಂತ್ರಣ ಪ್ರಾಧಿಕಾರದ ಮುಖ್ಯಸ್ಥ ರಾಜೀನಾಮೆ ನೀಡಿದ್ದಾರೆ ಎಂದು ಮಾಧ್ಯಮ ಸಂಸ್ಥೆಗಳು ವರದಿ ಮಾಡಿವೆ.

ವಿರೋಧ ಪಕ್ಷಗಳ ಪ್ರತಿಭಟನೆ ಮತ್ತು ಪೆಟ್ರೋಲ್ ಪಂಪ್‌ಗಳಲ್ಲಿ ಇಂಧನಕ್ಕಾಗಿ ಇದ್ದ ಉದ್ದದ ಸಾಲುಗಳನ್ನು ಬಿಟ್ಟರೆ ರಾಜಧಾನಿಯು ಭಾನುವಾರ ಬಹುತೇಕ ನಿರ್ಜನವಾಗಿತ್ತು. ಸಾಮಾಜಿಕ ಜಾಲತಾಣ ವೇದಿಕೆಗಳ ಸ್ಥಗಿತಕ್ಕೆ ಮೊದಲು, ಭಾರಿ ಪ್ರತಿಭಟನೆ ನಡೆಸುವಂತೆ ಈ ವೇದಿಕೆಗಳ ಮೂಲಕ ಕರೆಕೊಡಲಾಗಿತ್ತು. ಸೋಮವಾರ ಕರ್ಫ್ಯೂ ಬಳಿಕ ಪ್ರತಿಭಟನೆ ನಡೆಸಲು ಹಲವು ಸಂಘಟನೆಗಳು ನಿರ್ಧರಿಸಿವೆ.

ಸರ್ಕಾರದಲ್ಲಿ ಬಿರುಕು?

ಆಡಳಿತ ಪಕ್ಷದ ನಾಯಕರ ನಡುವೆ ಸಹಮತ ಇಲ್ಲ ಎಂಬ ಅಂಶವು ಬೆಳಕಿಗೆ ಬಂದಿದೆ. ಅಧ್ಯಕ್ಷ ರಾಜಪಕ್ಸ ಅವರ ಅಳಿಯ ನಮಲ್ ರಾಜಪಕ್ಸ ಅವರು ಸಾಮಾಜಿಕ ಜಾಲತಾಣ ಸ್ಥಗಿತವನ್ನು ವಿರೋಧಿಸಿದ್ದಾರೆ. ಈ ನಿರ್ಬಂಧವನ್ನು ಮರುಪರಿಶೀಲನೆ ನಡೆಸುವಂತೆ ಕ್ರೀಡಾ ಸಚಿವರೂ ಆಗಿರುವ ಅವರು ಸರ್ಕಾರವನ್ನು ಕೋರಿದ್ದಾರೆ.

‘ಸಾಮಾಜಿಕ ಜಾಲತಾಣ ನಿಷೇಧವನ್ನು ನಾನು ಯಾವತ್ತೂ ಒಪ್ಪುವುದಿಲ್ಲ’ ಎಂದು ಅವರು ಹೇಳಿದ್ದಾರೆ.

‘ವಿಪಿಎನ್ ಲಭ್ಯ ಇದ್ದರೆ, ನಾನು ಮಾಡಿದಂತೆ ಸಂಪರ್ಕ ಪಡೆದುಕೊಳ್ಳಬಹುದು. ಹಾಗಾಗಿ, ನಿರ್ಬಂಧವು ಸಂಪೂರ್ಣವಾಗಿ ಅರ್ಥಹೀನ’ ಎಂದು ಅವರು ಹೇಳಿದ್ದಾರೆ.

ಸರ್ಕಾರದ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಪ್ರಕಟಿಸಿದ ವ್ಯಕ್ತಿಯೊಬ್ಬರನ್ನು ಸಾರ್ವಜನಿಕ ಅಶಾಂತಿಗೆ ಕಾರಣವಾಗಬಹುದು ಎಂಬ ಆರೋಪದಲ್ಲಿ ಶುಕ್ರವಾರ ಬಂಧಿಸಲಾಗಿತ್ತು.

ಕೋವ್ಯಾಕ್ಸಿನ್ ಖರೀದಿ ನಿಲ್ಲಿಸಿದ ಡಬ್ಲ್ಯುಎಚ್‌ಒ

ನವದೆಹಲಿ: ಭಾರತ್ ಬಯೋಟೆಕ್ ಸಂಸ್ಥೆಯ ಕೋವ್ಯಾಕ್ಸಿನ್ ಲಸಿಕೆಯನ್ನು ವಿಶ್ವಸಂಸ್ಥೆಯ ಮೂಲಕ ಖರೀದಿಸಿ ಪೂರೈಸುವುದನ್ನು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಸ್ಥಗಿತಗೊಳಿಸಿದೆ.

'ಕೋವ್ಯಾಕ್ಸಿನ್ ಲಸಿಕೆಯು ಕೋವಿಡ್ ವಿರುದ್ಧ ಪರಿಣಾಮಕಾರಿಯಾಗಿದೆ ಹಾಗೂ ಸುರಕ್ಷತೆಗೆ ಸಂಬಂಧಿಸಿದಂತೆ ಕಳವಳ ಇಲ್ಲ. ಆದರೆ, ರಫ್ತು ಮಾಡುವ ಉದ್ದೇಶದಿಂದ ನಡೆಸಲಾಗುತ್ತಿದ್ದ ಲಸಿಕೆ ತಯಾರಿಯನ್ನು ಕಂಪನಿಯು ಸ್ಥಗಿತಗೊಳಿಸಿರುವುದರಿಂದ, ಕೋವ್ಯಾಕ್ಸಿನ್ ಬಳಸಿರುವ ರಾಷ್ಟ್ರಗಳಲ್ಲಿ ಲಸಿಕೆಯ ಪೂರೈಕೆಗೆ ತೊಡಕುಂಟಾಗಲಿದೆ, ಅವುಗಳು ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕು' ಎಂದು ಡಬ್ಲ್ಯುಎಚ್‌ಒ ಹೇಳಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಹೈದರಾಬಾದ್ ಮೂಲದ ಭಾರತ್ ಬಯೋಟೆಕ್, 'ಕೋವಿಡ್–19 ಲಸಿಕೆ ಕೋವ್ಯಾಕ್ಸಿನ್‌ನ ಪರಿಣಾಮಕಾರಿತ್ವ ಮತ್ತು ಸುರಕ್ಷತೆಯ ಮೇಲೆ ಯಾವುದೇ ವ್ಯತ್ಯಾಸವಾಗದು. ಕೋವ್ಯಾಕ್ಸಿನ್ ಲಸಿಕೆ ಪಡೆದ ಲಕ್ಷಾಂತರ ಜನರಿಗೆ ವಿತರಣೆಯಾದ ಲಸಿಕೆ ಪ್ರಮಾಣಪತ್ರವು ಈಗಲೂ ಮಾನ್ಯತೆ ಹೊಂದಿದೆ' ಎಂದು ತಿಳಿಸಿದೆ.

ಬೇಡಿಕೆ ಕಡಿಮೆಯಾಗಿರುವುದರಿಂದ ಲಸಿಕೆ ತಯಾರಿಕೆಯ ವೇಗವನ್ನು ಕಡಿತಗೊಳಿಸಿರುವುದಾಗಿ ಶುಕ್ರವಾರ ಭಾರತ್ ಬಯೋಟೆಕ್ ಹೇಳಿತ್ತು.

ಇಂಗ್ಲೆಂಡ್ ವಿರುದ್ಧ ಗೋಲು ಗಳಿಸಿದ ಭಾರತದ ಆಟಗಾರರ (ನೀಲಿ ಪೋಷಾಕು) ಸಂಭ್ರಮ– ಪಿಟಿಐ ಚಿತ್ರ

ಹಾಕಿ: ಅಗ್ರಸ್ಥಾನಕ್ಕೆ ಭಾರತ

ಭುವನೇಶ್ವರ (ಪಿಟಿಐ): ಶೂಟೌಟ್‌ನಲ್ಲಿ ಇಂಗ್ಲೆಂಡ್ ತಂಡಕ್ಕೆ ಸೋಲುಣಿಸಿದ ಭಾರತ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಎರಡು ಲೆಗ್‌ಗಳ ಮೊದಲ ಪಂದ್ಯದಲ್ಲಿ ಶನಿವಾರ ಅಮಿತ್ ರೋಹಿದಾಸ್ ಬಳಗ 3–2ರಿಂದ ಗೆದ್ದಿತು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 3–3ರಿಂದ ಸಮಬಲ ಸಾಧಿಸಿದ್ದವು. ಹೀಗಾಗಿ ಶೂಟೌಟ್ ಮೊರೆ ಹೋಗಲಾಗಿತ್ತು. ಒತ್ತಡವನ್ನು ಮೀರಿನಿಂತ ಭಾರತವು ಜಯಿಸಿತು. ಇದರೊಂದಿಗೆ ಬೋನಸ್ ಸೇರಿ ಎರಡು ಪಾಯಿಂಟ್ಸ್ ಕಲೆಹಾಕಿತು. ಜರ್ಮನಿಯನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಜಿಗಿಯಿತು.

ಭಾರತದ ಬಳಿ ಸದ್ಯ 21 ಪಾಯಿಂಟ್ಸ್ ಇವೆ. ಪಂದ್ಯದ ಎಂಟನೇ ನಿಮಿಷದಲ್ಲೇ ಇಂಗ್ಲೆಂಡ್ ತಂಡಕ್ಕೆ ನಿಕೊಲಸ್ ಬಂಡುರಕ್ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಆದರೆ 14ನೇ ನಿಮಿಷದಲ್ಲಿ ಶಂಷೇರ್ ಸಿಂಗ್ ಅವರಿಂದ್ ಪಾಸ್ ಪಡೆದ ಅಭಿಷೇಕ್ ಸಿಂಗ್ ಸೊಗಸಾದ ಗೋಲು ದಾಖಲಿಸಿದರು.

ಶಂಷೇರ್ ಸಿಂಗ್ (27ನೇ ನಿಮಿಷ) ಕೈಚಳಕ ತೋರಿದಾಗ ಭಾರತಕ್ಕೆ 2–1ರ ಮುನ್ನಡೆ ದೊರೆಯಿತು. ಆದರೆ ಮರು ನಿಮಿಷದಲ್ಲೇ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದ ಬಂಡುರಕ್ ಪಂದ್ಯವನ್ನು ಸಮಬಲಕ್ಕೆ ತಂದರು. ಮೊದಲಾರ್ಧದಲ್ಲಿ ಭಾರತಕ್ಕೆ ಕೇವಲ ಒಂದು ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕರೆ, ಇಂಗ್ಲೆಂಡ್‌ಗೆ ಮೂರು ಬಾರಿ ಈ ಅವಕಾಶ ಗಿಟ್ಟಿಸಿತು. ಆದರೆ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್, ಇಂಗ್ಲೆಂಡ್ ಪ್ರಯತ್ನಗಳಿಗೆ ತಡೆಗೋಡೆಯಾದರು.

ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು 52ನೇ ನಿಮಿಷದಲ್ಲಿ ಡ್ರ್ಯಾಗ್‌ಫ್ಲಿಕ್ ಮೂಲಕ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿಸಿ ಆತಿಥೇಯ ತಂಡಕ್ಕೆ ಜಯದ ನಿರೀಕ್ಷೆ ಮೂಡಿಸಿದ್ದರು. ಆದರೆ ಪಂದ್ಯ ಮುಗಿಯಲು 14 ಸೆಕೆಂಡುಗಳಿರುವಾಗ ಎದುರಾಳಿ ತಂಡದ ಸ್ಯಾಮ್ ವಾರ್ಡ್ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ಗೋಲು ದಾಖಲಿಸಿದರು.

ಹರ್ಮನ್‌ಪ್ರೀತ್ ಹ್ಯಾಟ್ರಿಕ್: ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಭಾರತ ತಂಡವು ಇಂಗ್ಲೆಂಡ್ ಎದುರಿನ ಎರಡನೇ ಪಂದ್ಯದಲ್ಲೂ ಭಾನುವಾರ 4–3ರಿಂದ ಜಯಿಸಿತು. ಹರ್ಮನ್‌ಪ್ರೀತ್ 26, 26 ಮತ್ತು 43ನೇ ನಿಮಿಷಗಳಲ್ಲಿ ಗೋಲು ಹೊಡೆದರು.

ಇಮ್ರಾನ್ ಅವರನ್ನು ಕಳೆದ ವಾರ ಎರಡು ಬಾರಿ ಭೇಟಿಯಾಗಿದ್ದ ಸೇನಾ ಮುಖ್ಯಸ್ಥ

ರಾಜಕೀಯದಲ್ಲಿ ಪಾತ್ರವಿಲ್ಲ: ಪಾಕಿಸ್ತಾನ ಸೇನೆ

ಲಂಡನ್/ಇಸ್ಲಾಮಾಬಾದ್ (ಪಿಟಿಐ, ರಾಯಿಟರ್ಸ್): ಪಾಕಿಸ್ತಾನದ ಸದ್ಯದ ರಾಜಕಾರಣದಲ್ಲಿ ತನ್ನ ಪಾತ್ರವೇನೂ ಇಲ್ಲ ಎಂದು ಅಲ್ಲಿನ ಸೇನೆಯು ಭಾನುವಾರ ಹೇಳಿದೆ. ಪ್ರಧಾನಿ ಇಮ್ರಾನ್ ಖಾನ್ ಅವರು ಸಂಸತ್ತು ವಿಸರ್ಜನೆಗೆ ಮಾಡಿದ ಶಿಫಾರಸನ್ನು ಅಧ್ಯಕ್ಷ ಆರಿಫ್ ಅಲ್ವಿ ಅವರು ಒಪ್ಪಿಕೊಂಡ ಬಳಿಕ ಸೃಷ್ಟಿಯಾದ ರಾಜಕೀಯ ಬಿಕ್ಕಟ್ಟಿಗೆ ಸೇನೆಯು ಹೀಗೆ ಪ್ರತಿಕ್ರಿಯೆ ನೀಡಿದೆ.

‘ರಾಜಕೀಯ ಪ್ರಕ್ರಿಯೆಯಲ್ಲಿ ಸೇನೆಯು ಮಾಡುವುದಕ್ಕೆ ಏನೂ ಇಲ್ಲ’ ಎಂದು ಸೇನೆಯ ಸಾರ್ವಜನಿಕ ಸಂಪರ್ಕ ವಿಭಾಗದ ಮುಖ್ಯಸ್ಥ ಮೇಜರ್ ಜನರಲ್ ಬಾಬರ್ ಇಫ್ತಿಕಾರ್ ಹೇಳಿದ್ದಾರೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಜ. ಕಮರ್ ಜಾವೇದ್ ಬಾಜ್ವಾ ಅವರು ಇಮ್ರಾನ್ ಅವರನ್ನು ಕಳೆದ ವಾರ ಎರಡು ಬಾರಿ ಭೇಟಿಯಾಗಿದ್ದರು.

ಸೇನೆಯ ನಾಯಕತ್ವವು ಕಳೆದ ವಾರ ತಮ್ಮನ್ನು ಭೇಟಿ ಮಾಡಿ ಮೂರು ಆಯ್ಕೆಗಳನ್ನು ಮುಂದಿಟ್ಟಿತ್ತು ಎಂದು ಇಮ್ರಾನ್ ಹೇಳಿದ್ದಾರೆ. ಇಮ್ರಾನ್ ರಾಜೀನಾಮೆ, ಅವಿಶ್ವಾಸ ನಿರ್ಣಯ ಎದುರಿಸುವುದು ಮತ್ತು ಅವಧಿಗೆ ಮುನ್ನವೇ ಚುನಾವಣೆಗೆ ಹೋಗುವುದು ಎಂಬುದೇ ಈ ಮೂರು ಆಯ್ಕೆಗಳಾಗಿದ್ದವು ಎನ್ನಲಾಗಿದೆ.

‘ದೇಶದ್ರೋಹ’: ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಮತ್ತು ಸಂಚಿನಲ್ಲಿ ಭಾಗಿಯಾದ ಇತರ ಎಲ್ಲರೂ ದೇಶದ್ರೋಹ ಎಸಗಿದ್ದಾರೆ. ಅವರೆಲ್ಲರನ್ನೂ ಸಂವಿಧಾನಕ್ಕೆ ಅವಮಾನ ಮಾಡಿದ ಆರೋಪದಲ್ಲಿ ವಿಚಾರಣೆಗೆ ಒಳಪಡಿಸಬೇಕು ಎಂದು ಮಾಜಿ ಪ್ರಧಾನಿ ನವಾಜ್ ಶರೀಫ್ ಹೇಳಿದ್ದಾರೆ.

ದೇಶದ ಸಂಸತ್ತನ್ನು ವಿಸರ್ಜಿಸುವ ಇಮ್ರಾನ್ ಅವರ ಶಿಫಾರಸನ್ನು ಅಧ್ಯಕ್ಷ ಆರಿಫ್ ಅಲ್ವಿ ಅವರು ಒಪ್ಪಿಕೊಂಡ ಬಳಿಕ ನವಾಜ್ ಅವರು ಹೀಗೆ ಹೇಳಿದ್ದಾರೆ.

‘ಅಧಿಕಾರದ ಗೀಳು ಹತ್ತಿಸಿಕೊಂಡ ವ್ಯಕ್ತಿಯು ಸಂವಿಧಾನವನ್ನು ಇಂದು ತುಳಿದು ಹಾಕಿದ್ದಾರೆ’ ಎಂದು ನವಾಜ್ ಆರೋಪಿಸಿದ್ದಾರೆ. ಸದ್ಯಕ್ಕೆ ಲಂಡನ್‌ನಲ್ಲಿ ನೆಲೆಯಾಗಿರುವ ನವಾಜ್ ಅವರು ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್‌ನ (ಪಿಎಂಎಲ್–ಎನ್) ಸರ್ವೋಚ್ಚ ನಾಯಕರಾಗಿದ್ದಾರೆ.

15 ದಿನ ಅಧಿಕಾರ: ಇಮ್ರಾನ್ ಅವರು ಮುಂದಿನ 15 ದಿನ ಮಾತ್ರ ಅಧಿಕಾರದಲ್ಲಿ ಇರಲಿದ್ದಾರೆ ಎಂದು ಮಾಜಿ ಗೃಹ ಸಚಿವ ಶೇಖ್ ರಶೀದ್ ಹೇಳಿದ್ದಾರೆ.ಸಂಸತ್ತು ವಿಸರ್ಜನೆ ಮತ್ತು ಹೊಸ ಚುನಾವಣೆಗೆ ಶಿಫಾರಸು ಮಾಡಿದ ಬಳಿಕ ಇಮ್ರಾನ್ ಅವರನ್ನು ಭೇಟಿ ಮಾಡಿದ್ದಾಗಿ ರಶೀದ್ ಹೇಳಿದ್ದಾರೆ.

ಭರವಸೆ ಹುಸಿಯಾಗಿಸಿದ ಇಮ್ರಾನ್

ಪಾಕಿಸ್ತಾನದ ರಾಷ್ಟ್ರ ರಾಜಕಾರಣದಲ್ಲಿ ಪಾಕಿಸ್ತಾನ ಮುಸ್ಲಿಂ ಲೀಗ್–ಎನ್ ಮತ್ತು ಪಾಕಿಸ್ತಾನ ಪೀಪಲ್ಸ್ ಪಾರ್ಟಿ ನಡುವೆ ಹಲವು ದಶಕಗಳ ಕಾಲ ನೇರ ಪೈಪೋಟಿ ಇತ್ತು. ಆದರೆ, ಇಮ್ರಾನ್ ಖಾನ್ ಅವರು ಈ ಎರಡೂ ಪಕ್ಷಗಳ ವಿರುದ್ಧ ಮೈತ್ರಿಕೂಟವೊಂದನ್ನು ರೂಪಿಸಿದರು. ಇದರೊಂದಿಗೆ, ಈ ಪಕ್ಷಗಳ ಪಾರಮ್ಯ ಮರೆಗೆ ಸರಿಯಿತು.

ದಶಕಗಳಿಂದ ಬೇರು ಬಿಟ್ಟಿರುವ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತವನ್ನು ನಿರ್ಮೂಲನೆ ಮಾಡುವ ಭರವಸೆ ಕೊಟ್ಟು ಇಮ್ರಾನ್ ಅವರು ಆಯ್ಕೆ ಆಗಿದ್ದರು. ಆದರೆ, ಹಣದುಬ್ಬರ ವಿಪರೀತ ಏರಿಕೆ, ದುರ್ಬಲಗೊಂಡ ಪಾಕಿಸ್ತಾನ ರೂಪಾಯಿ ಮತ್ತು ಏರುತ್ತಲೇ ಹೋದ ಸಾಲದ ಕಾರಣಗಳಿಂದ ಯಾವುದೇ ಸಾಧನೆ ಮಾಡಲು ಇಮ್ರಾನ್‌ಗೆ ಸಾಧ್ಯವಾಗಲಿಲ್ಲ. ಅವರ ಬೆಂಬಲ ನೆಲೆಯೂ ವಿಸ್ತಾರವಾಗಲಿಲ್ಲ.

ಸೇನೆಯ ಬೆಂಬಲವನ್ನೂ ಇಮ್ರಾನ್ ಅವರು ಕಳೆದುಕೊಂಡಿದ್ದಾರೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಇದನ್ನು ಎರಡೂ ಕಡೆಯವರು ಅಲ್ಲಗಳೆದಿದ್ದಾರೆ. ಸೇನೆಯ ಒತ್ತಾಸೆ ಇಲ್ಲದಿದ್ದರೂ ಅದರ ಅರಿವಿಗೆ ಬಾರದೆಯೇ ಸಂಸತ್ತು ವಿಸರ್ಜನೆಯ ನಿರ್ಧಾರಕ್ಕೆ ಇಮ್ರಾನ್ ಬರುವುದು ಸಾಧ್ಯವಿರಲಿಲ್ಲ ಎಂದೂ ಹೇಳಲಾಗುತ್ತಿದೆ.

1947ರಲ್ಲಿ ದೇಶವು ಸ್ವಾತಂತ್ರ್ಯ ಪಡೆದ ಬಳಿಕ ಸೇನೆಯು ನಾಲ್ಕು ಬಾರಿ ಅಧಿಕಾರವನ್ನು ವಶಕ್ಕೆ ಪಡೆದುಕೊಂಡಿದೆ. ಹಲವು ಬಾರಿ ವಿಫಲ ಯತ್ನಗಳು ನಡೆದಿವೆ. ಮೂರು ದಶಕಕ್ಕೂ ಹೆಚ್ಚು ಕಾಲ ದೇಶವು ಸೇನೆಯ ಆಳ್ವಿಕೆಯಲ್ಲಿ ಇತ್ತು.

‘ಈಗ ಚುನಾವಣೆ ನಡೆಸುವುದೇ ಅತ್ಯುತ್ತಮ ಆಯ್ಕೆ. ದೇಶವು ಎದುರಿಸುತ್ತಿರುವ ಆರ್ಥಿಕ, ರಾಜಕೀಯ ಮತ್ತು ಬಾಹ್ಯ ಸಮಸ್ಯೆಗಳನ್ನು ಪರಿಹರಿಸಲು ಹೊಸ ಸರ್ಕಾರಕ್ಕೆ ಸಾಧ್ಯವಾಗಬಹುದು’ ಎಂದು ರಾಜಕೀಯ ವಿಶ್ಲೇಷಕ ತಲತ್ ಮಸೂದ್ ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಕರ್ನಾಟಕ ಶುಭಾರಂಭ

ಬೆಂಗಳೂರು: ಅನಿಲ್ ಕುಮಾರ್ ಬಿ.ಕೆ. ಮತ್ತು ಅರವಿಂದ್ ಎ. ಅವರ ಭರ್ಜರಿ ಆಟದ ನೆರವಿನಿಂದ ಕರ್ನಾಟಕ ಪುರುಷರ ತಂಡವು ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದೆ.

ಚೆನ್ನೈನಲ್ಲಿ ಭಾನುವಾರ ಆರಂಭವಾದ ಟೂರ್ನಿಯ ಮೊದಲ ಪಂದ್ಯದಲ್ಲಿ ಕರ್ನಾಟಕ 117–76ರಿಂದ ಸರ್ವಿಸಸ್ ತಂಡವನ್ನು ಪರಾಭವಗೊಳಿಸಿತು. ರಾಜ್ಯ ತಂಡದ ಪರ ಅನಿಲ್ ಕುಮಾರ್ 28, ಅರವಿಂದ್ 25 ಮತ್ತು ಪ್ರಿಯಾಂಶು ತೋಮರ್ 21 ಪಾಯಿಂಟ್ಸ್ ಕಲೆಹಾಕಿದರು. ಅಭಿಷೇಕ್ ಗೌಡ (19) ಮತ್ತು ಶಶಾಂಕ್ ರೈ (16) ಕೂಡ ಕಾಣಿಕೆ ನೀಡಿದರು.

ಸರ್ವಿಸಸ್ ಪರ ಗೌರವ್ ಚಾಂಡಲ್ 18, ಜೋಗಿಂದರ್ ಸಿಂಗ್ 15 ಪಾಯಿಂಟ್ಸ್ ದಾಖಲಿಸಿದರು.ಬಿ ಗುಂಪಿನ ಎರಡನೇ ಪಂದ್ಯದಲ್ಲಿ ಕರ್ನಾಟಕದ ಆಟಗಾರರು ಸೋಮವಾರ ಉತ್ತರ ಪ್ರದೇಶ ಸವಾಲು ಎದುರಿಸುವರು.

ಲಿಯಾಮ್ ಲಿವಿಂಗ್‌ಸ್ಟೋನ್ ಆಲ್‌ರೌಂಡ್ ಆಟ: ರವೀಂದ್ರ ಜಡೇಜ ಪಡೆಗೆ ಹ್ಯಾಟ್ರಿಕ್ ಸೋಲು

ಪಂಜಾಬ್ ಕಿಂಗ್ಸ್‌ಗೆ ಮಣಿದ ಸೂಪರ್ ಕಿಂಗ್ಸ್

ಮುಂಬೈ (ಪಿಟಿಐ): ಲಿಯಾಮ್ ಲಿವಿಂಗ್‌ಸ್ಟೋನ್ ಆಲ್‌ರೌಂಡ್ ಆಟದ ಬಲದಿಂದ ಪಂಜಾಬ್ ಕಿಂಗ್ಸ್ ತಂಡವು ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ 54 ರನ್‌ಗಳ ಜಯಭೇರಿ ಬಾರಿಸಿತು. ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸತತ ಮೂರನೇ ಪಂದ್ಯದಲ್ಲಿ ಸೋಲನುಭವಿಸಿತು.

ಭಾನುವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಚೆನ್ನೈ ತಂಡದ ನಾಯಕ ರವೀಂದ್ರ ಜಡೇಜ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆರಂಭದಲ್ಲಿ ಆಘಾತ ಅನುಭವಿಸಿದ ಪಂಜಾಬ್ ತಂಡಕ್ಕೆ ಮಧ್ಯಮಕ್ರಮಾಂಕದ ಬ್ಯಾಟರ್ ಲಿಯಾಮ್ (60; 32ಎಸೆತ, 4X5, 6X5) ಬಲ ತುಂಬಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 180 ರನ್ ಗಳಿಸಲು ಸಾಧ್ಯವಾಯಿತು. ಬೌಲಿಂಗ್‌ನಲ್ಲಿಯೂ ಮಿಂಚಿದ ಲಿವಿಂಗ್‌ಸ್ಟೋನ್ (25ಕ್ಕೆ2) ಪಂಜಾಬ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಗುರಿ ಬೆನ್ನಟ್ಟಿದ ಚೆನ್ನೈ ತಂಡವು 18 ಓವರ್‌ಗಳಲ್ಲಿ 126 ರನ್ ಗಳಿಸಿ ಆಲೌಟ್ ಆಯಿತು.

ಪಂಜಾಬ್ ಗಳಿಸಿದ ಹೋರಾಟದ ಮೊತ್ತದ ಗುರಿಯನ್ನು ಬೆನ್ನಟ್ಟಿದ ಜಡೇಜ ಬಳಗಕ್ಕೆ ಕಗಿಸೊ ರಬಾಡ ಮತ್ತು ಹೊಸಪ್ರತಿಭೆ ವೈಭವ್ ಅರೋರಾ ಬಲವಾದ ಪೆಟ್ಟುಕೊಟ್ಟರು. ಎರಡನೇ ಓವರ್‌ನಲ್ಲಿಯೇ ರಬಾಡ ಬೌಲಿಂಗ್‌ನಲ್ಲಿ ಋತುರಾಜ್ ಗಾಯಕವಾಡ್ ಔಟಾದರು. ಅರೋರಾ ಹಾಕಿದ ಮೂರು ಮತ್ತು ಐದನೇ ಓವರ್‌ನಲ್ಲಿ ಕ್ರಮವಾಗಿ ರಾಬಿನ್ ಉತ್ತಪ್ಪ (13) ಮತ್ತು ಮೋಯಿನ್ ಅಲಿ ಔಟಾದರು. ಅವರ ಹಾದಿಯಲ್ಲಿಯೇ ಮುನ್ನಡೆದ ಒಡೀನ್ ಸ್ಮಿತ್ ಮತ್ತು ಅರ್ಷದೀಪ್ ಸಿಂಗ್ ಕೂಡ ವಿಕೆಟ್ ಗಳಿಸಿದರು.

ಇದರಿಂದಾಗಿ ಚೆನ್ನೈ ತಂಡವು 36 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಶಿವಂ ದುಬೆ ಮತ್ತು ಮಹೇಂದ್ರಸಿಂಗ್ ಧೋನಿ ಆರನೇ ವಿಕೆಟ್‌ಗೆ 62 ರನ್ ಸೇರಿಸಿದರು. ದುಬೆ ಅರ್ಧಶತಕ ಗಳಿಸಿದರು. ಆದರೆ, 15ನೇ ಓವರ್‌ನ ಐದನೇ ಎಸೆತದಲ್ಲಿ ದುಬೆ ವಿಕೆಟ್ ಗಳಿಸಿದ ಲಿವಿಂಗ್‌ಸ್ಟೋನ್ ಪಂದ್ಯಕ್ಕೆ ಮಹತ್ವದ ತಿರುವು ನೀಡಿದರು. ನಂತರದ ಎಸೆತದಲ್ಲಿ ಡ್ವೇನ್ ಬ್ರಾವೊಗೆ ಪೆವಿಲಿಯನ್ ಹಾದಿ ತೋರಿದರು. ಏಕಾಂಗಿ ಹೋರಾಟ ಮಾಡುವ ಧೋನಿ ಯತ್ನ ಫಲಗೊಡಲಿಲ್ಲ. ರಾಹುಲ್ ಚಾಹರ್ ಸ್ಪಿನ್ ಮೋಡಿಗೆ ಧೋನಿ ಮತ್ತು ಡ್ವೇನ್ ಪ್ರಿಟೋರಿಯಸ್‌ಪೆವಿಲಿಯನ್‌ಸೇರಿದರು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ ತಂಡದ ಆರಂಭ ಚೆನ್ನಾಗಿರಲಿಲ್ಲ. ಮೊದಲ ಓವರ್‌ನಲ್ಲಿ ಮಯಂಕ್ ಅಗರವಾಲ್ ಔಟಾದರು. ಎರಡನೇ ಓವರ್‌ನಲ್ಲಿ ವಿಕೆಟ್‌ಕೀಪರ್ ಧೋನಿಯ ಚುರುಕಿನ ಆಟಕ್ಕೆ ಭನುಕಾ ರಾಜಪಕ್ಸ ಔಟಾದರು.

ಗುಡ್‌ಲೆಂಗ್ತ್ ಎಸೆತವನ್ನು ಲೆಗ್ ಸೈಡ್‌ಗೆ ಪುಷ್ ಮಾಡಿದ ಭನುಕಾ ಒಂಟಿ ರನ್ ತೆಗೆದುಕೊಳ್ಳಲು ಮುಂದಾದರು. ಆದರೆ ನಾನ್‌ಸ್ಟ್ರೈಕರ್‌ನಲ್ಲಿದ್ದ ಧವನ್ ರನ್ ಓಡಲಿಲ್ಲ. ಅದರಿಂದಾಗಿ ಅರ್ಧ ಪಿಚ್‌ನಿಂದಲೇ ಭನುಕಾ ಕ್ರೀಸ್‌ಗೆ ಮರಳುವ ಪ್ರಯತ್ನ ಮಾಡಿದರು. ಅಷ್ಟರಲ್ಲಿ ಬೌಲರ್ ಜೋರ್ಡಾನ್ ಚೆಂಡು ಪಡೆದು ಥ್ರೋ ಮಾಡಿದರು. ಆದರೆ, ಅದು ಸ್ಟಂಪ್‌ಗೆ ತಗುಲಲಿಲ್ಲ. ಚೆಂಡನ್ನು ಹಿಡಿತಕ್ಕೆ ಪಡೆದ ಧೋನಿ ಅಂಡರ್‌ಆರ್ಮ್ ಥ್ರೋ ಮೂಲಕ ಸ್ಟಂಪ್ ಎಗರಿಸಿದರು. ರಾಜಪಕ್ಸ ಔಟಾದರು. ಧವನ್ ಮತ್ತು ಲಿಯಾಮ್ 3ನೇ ವಿಕೆಟ್‌ಗೆ 95 ರನ್ ಸೇರಿಸಿದರು.

ಪಂಜಾಬ್ ಕಿಂಗ್ಸ್ ತಂಡದ ಲಿಯಾಮ್ ಲಿವಿಂಗ್‌ಸ್ಟೋನ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 8ಕ್ಕೆ 180 (20 ಓವರ್)

ಮಯಂಕ್ ಸಿ ಉತ್ತಪ್ಪ ಬಿ ಮುಕೇಶ್ 4 (2ಎ, 4X1), ಶಿಖರ್ ಸಿ ಜಡೇಜ ಬಿ ಬ್ರಾವೊ 33 (24ಎ, 4X4, 6X1), ಭನುಕಾ ರನೌಟ್ (ಜೋರ್ಡಾನ್/ಧೋನಿ) 9 (5ಎ), ಲಿವಿಂಗ್‌ಸ್ಟೋನ್ ಸಿ ರಾಯುಡು ಬಿ ಜಡೇಜ 60 (32ಎ, 4X5, 6X5), ಜಿತೇಶ್ ಸಿ ಉತ್ತಪ್ಪ ಬಿ ಪ್ರಿಟೋರಿಯಸ್ 26 (17ಎ, 6X3), ಶಾರೂಕ್ ಸಿ ಪ್ರಿಟೋರಿಯಸ್ ಬಿ ಜೋರ್ಡಾನ್ 6 (11ಎ), ಸ್ಮಿತ್ ಸಿ ಬ್ರಾವೊ ಬಿ ಜೋರ್ಡಾನ್ 3 (7ಎ), ರಬಾಡ ಔಟಾಗದೆ 12 (12ಎ, 4X1), ರಾಹುಲ್ ಚಾಹರ್ ಸಿ ಬ್ರಾವೊ ಬಿ ಪ್ರಿಟೋರಿಯಸ್ 12 (8ಎ, 4X1, 6X1), ವೈಭವ್ ಔಟಾಗದೆ 1 (2ಎ))

ಇತರೆ (ಲೆಗ್‌ಬೈ 1, ವೈಡ್ 13) 14

ವಿಕೆಟ್ ಪತನ: 1-4 (ಮಯಂಕ್ ಅಗರವಾಲ್, 0.2), 2-14 (ಭನುಕಾ ರಾಜಪಕ್ಷ, 1.2), 3-109 (ಶಿಖರ್ ಧವನ್, 9.6), 4-115 (ಲಿಯಾಮ್ ಲಿವಿಂಗ್‌ಸ್ಟೋನ್, 10.4), 5-146 (ಜಿತೇಶ್ ಶರ್ಮಾ, 14.5), 6-151 (ಶಾರೂಕ್ ಖಾನ್, 15.4), 7-161 (ಒಡೀನ್ ಸ್ಮಿತ್, 17.1), 8-176 (ರಾಹುಲ್ ಚಾಹರ್, 18.6)

ಬೌಲಿಂಗ್: ಮುಕೇಶ್ ಚೌಧರಿ 4-0-52-1, ಕ್ರಿಸ್ ಜೋರ್ಡಾನ್ 4-0-23-2, ಡ್ವೇನ್ ಬ್ರಾವೊ 3-0-32-1, ರವೀಂದ್ರ ಜಡೇಜ 4-0-34-1, ಡ್ವೇನ್ ಪ್ರಿಟೋರಿಯಸ್ 4-0-30-2, ಮೋಯಿನ್ ಅಲಿ 1-0-8-0

ಚೆನ್ನೈ ಸೂಪರ್ ಕಿಂಗ್ಸ್ 126 (18 ಓವರ್)

ಉತ್ತಪ್ಪ ಸಿ ಮಯಂಕ್ ಬಿ ವೈಭವ್ 13 (10ಎ, 4X2), ಋತುರಾಜ್ ಸಿ ಧವನ್ ಬಿ ರಬಾಡ 1 (4ಎ), ಮೋಯಿನ್ ಬಿ ವೈಭವ್ 0 (2ಎ), ರಾಯುಡು ಸಿ ಜಿತೇಶ್ ಬಿ ಸ್ಮಿತ್ 13 (21ಎ, 4X2), ಜಡೇಜ ಬಿ ಅರ್ಷದೀಪ್ 0 (3ಎ), ಶಿವಂ ಸಿ ಅರ್ಷದೀಪ್ ಬಿ ಲಿವಿಂಗ್‌ಸ್ಟೋನ್ 57 (30ಎ, 4X6, 6X3), ಮಹೇಂದ್ರಸಿಂಗ್ ಸಿ ಜಿತೇಶ್ ಬಿ ಚಾಹರ್ 23 (28ಎ, 4X1, 6X1), ಬ್ರಾವೊ ಸಿ ಮತ್ತು ಬಿ ಲಿವಿಂಗ್‌ಸ್ಟೋನ್ 0 (1ಎ), ಪ್ರಿಟೋರಿಯಸ್ ಸಿ ಅರ್ಷದೀಪ್ ಬಿ ಚಾಹರ್ 8 (4ಎ, 6X1), ಜೋರ್ಡಾನ್ ಸಿ ಲಿವಿಂಗ್‌ಸ್ಟೋನ್ ಬಿ ಚಾಹರ್ 5 (5ಎ), ಮುಕೇಶ್ ಔಟಾಗದೆ 2 (2ಎ)

ಇತರೆ (ನೋಬಾಲ್ 2 , ವೈಡ್ 2) 4

ವಿಕೆಟ್ ಪತನ: 1-10 (ಋತುರಾಜ್ ಗಾಯಕವಾಡ್, 1.6), 2-14 (ರಾಬಿನ್ ಉತ್ತಪ್ಪ, 2.2), 3-22 (ಮೋಯಿನ್ ಅಲಿ, 4.4), 4-23 (ರವೀಂದ್ರ ಜಡೇಜ, 5.3), 5-36 (ಅಂಬಟಿ ರಾಯುಡು, 7.3), 6-98 (ಶಿವಂ ದುಬೆ, 14.5), 7-98 (ಡ್ವೇನ್ ಬ್ರಾವೊ, 14.6), 8-107 (ಡ್ವೇನ್ ಪ್ರಿಟೋರಿಯಸ್, 15.5), 9-121 (ಮಹೇಂದ್ರ ಸಿಂಗ್ ಧೋನಿ, 17.1), 10-126 (ಕ್ರಿಸ್ ಜೋರ್ಡಾನ್, 17.6)

ಬೌಲಿಂಗ್: ವೈಭವ್ ಅರೋರಾ 4-0-21-2, ಕಗಿಸೊ ರಬಾಡ 3-0-28-1, ಅರ್ಷದೀಪ್ ಸಿಂಗ್ 2-0-13-1, ಒಡೀನ್ ಸ್ಮಿತ್ 2-0-14-1, ರಾಹುಲ್ ಚಾಹರ್ 4-0-25-3, ಲಿಯಾಮ್ ಲಿವಿಂಗ್‌ಸ್ಟೋನ್ 3-0-25-2

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 54 ರನ್‌ಗಳ ಜಯ

ಜಾಸ್ ಶತಕ; ರಾಯಲ್ಸ್ ಗೆಲುವು

ಜಾಸ್ ಬಟ್ಲರ್

ಮುಂಬೈ: ಈ ಬಾರಿಯ ಐಪಿಎಲ್‌ನಲ್ಲಿ ಮೊಟ್ಟಮೊದಲ ಶತಕ ದಾಖಲಿಸಿದ ಜಾಸ್ ಬಟ್ಲರ್ (100; 68ಎ, 4X11, 6X5) ಬ್ಯಾಟಿಂಗ್ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡವು 23 ರನ್‌ಗಳಿಂದ ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 8ಕ್ಕೆ 193 (ಜಾಸ್ ಬಟ್ಲರ್ 100, ಸಂಜು ಸ್ಯಾಮ್ಸನ್ 30, ಶಿಮ್ರೊನ್ ಹೆಟ್ಮೆಯರ್ 35, ಜಸ್‌ಪ್ರೀತ್ ಬೂಮ್ರಾ 17ಕ್ಕೆ3, ಟೈಮಲ್ ಮಿಲ್ಸ್ 35ಕ್ಕೆ3) ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 8ಕ್ಕೆ 170 (ಇಶಾನ್ ಕಿಶನ್ 54, ತಿಲಕ್ ವರ್ಮಾ 61, ಕೀರನ್ ಪೊಲಾರ್ಡ್ 22, ನವದೀಪ್ ಸೈನಿ 36ಕ್ಕೆ2, ಯಜುವೇಂದ್ರ ಚಾಹಲ್ 26ಕ್ಕೆ2) ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 23 ರನ್‌ಗಳ ಜಯ.

ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 6ಕ್ಕೆ171 (ಶುಭಮನ್ ಗಿಲ್ 84, ಹಾರ್ದಿಕ್ ಪಾಂಡ್ಯ 31, ಡೇವಿಡ್ ಮಿಲ್ಲರ್ ಔಟಾಗದೆ 20, ಮುಸ್ತಫಿಜುರ್ ರೆಹಮಾನ್ 23ಕ್ಕೆ3, ಖಲೀಲ್ ಅಹಮದ್ 34ಕ್ಕೆ2) ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 9ಕ್ಕೆ 157 (ರಿಷಭ್ ಪಂತ್ 43, ಲಲಿತ್ ಯಾದವ್ 25, ರೊವ್ಮನ್ ಪೊವೆಲ್ 20, ಮೊಹಮ್ಮದ್ ಶಮಿ 30ಕ್ಕೆ2, ಲಾಕಿ ಫರ್ಗ್ಯುಸನ್ 28ಕ್ಕೆ4) ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 14 ರನ್‌ಗಳ ಜಯ

ಆರೆಂಜ್ ಕ್ಯಾಪ್

(ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಇಶಾನ್‌ಕಿಶನ್	ಮುಂಬೈ	135
ಜಾಸ್‌ಬಟ್ಲರ್	ರಾಜಸ್ಥಾನ	135
ಶಿವಂ ದುಬೆ	ಚೆನ್ನೈ	109

ಪರ್ಪಲ್ ಕ್ಯಾಪ್

(ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	8
ರಾಹುಲ್‌ಚಾಹರ್	ಪಂಜಾಬ್	6
ಯಜುವೇಂದ್ರ	ರಾಜಸ್ಥಾನ	5

ಪಾಯಿಂಟ್‌ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	2	2	0	0	0	4
ಕೋಲ್ಕತ್ತ	3	2	1	0	0	4
ಗುಜರಾತ್	2	2	0	0	0	4
ಪಂಜಾಬ್	3	2	1	0	0	4
ಡೆಲ್ಲಿ	2	1	1	0	0	2
ಲಖನೌ	2	1	1	0	0	2
ಬೆಂಗಳೂರು	2	1	1	0	0	2
ಮುಂಬೈ	2	0	2	0	0	0
ಚೆನ್ನೈ	3	0	3	0	0	0
ಹೈದರಾಬಾದ್	1	0	1	0	0	0

*ಭಾನುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ರಾಹುಲ್ ಪಡೆಗೆ ಜಯದ ತವಕ

ಗೆಲುವಿನ ಖಾತೆ ತೆರೆಯುವ ಹಂಬಲದಲ್ಲಿ ಕೇನ್ ಬಳಗ

ನವಿ ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಗೆದ್ದು ಬೀಗುತ್ತಿರುವ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್‌ಜೈಂಟ್ಸ್ ತಂಡವು ಸೋಮವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕಣಕ್ಕಿಳಿಯಲಿದೆ.

ಡಾ.ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೇನ್ ವಿಲಿಯಮ್ಸನ್ ನೇತೃತ್ವದ ಸನ್‌ರೈಸರ್ಸ್ ತಂಡವು ಗೆಲುವಿನ ಖಾತೆ ತೆರೆಯುವ ತವಕದಲ್ಲಿದೆ. ಕೇನ್ ಬಳಗವು ಟೂರ್ನಿಯಲ್ಲಿ ಇದುವರೆಗೆ ಆಡಿರುವ ಏಕೈಕ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಸೋತಿತ್ತು.

ಹೈದರಾಬಾದ್ ತಂಡದ ಪ್ರಮುಖ ಶಕ್ತಿಯಾಗಿರುವ ಬೌಲರ್‌ಗಳೇ ಆ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದರು. ಅದರಿಂದಾಗಿ ರಾಜಸ್ಥಾನ ತಂಡವು 210 ರನ್‌ಗಳ ದೊಡ್ಡ ಸವಾಲನ್ನು ಕೇನ್ ಬಳಗಕ್ಕೆ ಒಡ್ಡಿತ್ತು. ಏಡನ್ ಮರ್ಕರಂ ಅರ್ಧಶತಕ ಮತ್ತು ವಾಷಿಂಗ್ಟನ್ ಸುಂದರ್ 14 ಎಸೆತಗಳಲ್ಲಿ 40 ರನ್‌ಗಳನ್ನು ಗಳಿಸಿದ್ದು ಬಿಟ್ಟರೆ ಉಳಿದ ಬ್ಯಾಟರ್‌ಗಳು ನೆಲಕಚ್ಚಿದ್ದರು. ಆದ್ದರಿಂದ ಈ ಪಂದ್ಯದಲ್ಲಿ ಎಲ್ಲ ವಿಭಾಗಗಳಲ್ಲಿಯೂ ಸುಧಾರಿತ ಪ್ರದರ್ಶನ ನೀಡುವುದು ತಂಡಕ್ಕೆ ಅನಿವಾರ್ಯವಾಗಿದೆ.

ಅದರಲ್ಲೂ ಭುವನೇಶ್ವರ್ ಕುಮಾರ್, ಟಿ. ನಟರಾಜನ್ ಮತ್ತು ಅಭಿಷೇಕ್ ಶರ್ಮಾ ತಮ್ಮ ಅನುಭವಕ್ಕೆ ತಕ್ಕಂತೆ ಆಡಿದರೆ ತಂಡಕ್ಕೆ ಹೆಚ್ಚು ಉಪಯುಕ್ತವಾಗಬಹುದು. ಅಮೋಘ ಲಯದಲ್ಲಿರುವ ಲಖನೌ ತಂಡದ ರಾಹುಲ್, ಕ್ವಿಂಟನ್ ಡಿಕಾಕ್, ಎವಿನ್ ಲೂಯಿಸ್ ಮತ್ತು ಆಯುಷ್ ಬದೋನಿ ಅವರಿಗೆ ತಡೆಯೊಡ್ಡುವ ಸವಾಲು ಬೌಲರ್‌ಗಳ ಮುಂದಿದೆ.

ಲಖನೌ ಸ್ಪಿನ್ನರ್ ರವಿ ಬಿಷ್ಣೋಯಿ, ವೇಗಿ ಆವೇಶ್ ಖಾನ್ ಅವರ ಎಸೆತಗಳನ್ನು ದಿಟ್ಟತನದಿಂದ ಎದುರಿಸಿದರೆ ಕೇನ್ ಬಳಗವು ಗೆಲುವಿನ ಹಾದಿ ತುಳಿಯಬಹುದು.

ಆಯುಷ್ ಬದೋನಿ

ಫಿಫಾ ವಿಶ್ವಕಪ್: ರೊನಾಲ್ಡೊ–ಮೆಸ್ಸಿ ಮುಖಾಮುಖಿ ಸಾಧ್ಯತೆ

ದೋಹಾ (ಎಎಫ್‌ಪಿ): ಫಿಫಾ ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಇದೇ ಮೊದಲ ಸಲ ದಿಗ್ಗಜ ಆಟಗಾರರಾದ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಲಯೊನೆಲ್ ಮೆಸ್ಸಿ ಮುಖಾಮುಖಿಯಾಗುವ ಸಾಧ್ಯತೆ ಇದೆ.

ಕತಾರ್‌ನಲ್ಲಿ ನವೆಂಬರ್ 21ರಿಂದ ಆರಂಭವಾಗಲಿರುವ ಟೂರ್ನಿಯಲ್ಲಿ ಒಂದೊಮ್ಮೆ ಪೋರ್ಚುಗಲ್ ಮತ್ತು ಅರ್ಜೆಂಟಿನಾ ತಂಡಗಳು ಫೈನಲ್‌ಗೆ ಪ್ರವೇಶಿಸಿದರೆ ರೊನಾಲ್ಡೊ ಮತ್ತು ಮೆಸ್ಸಿ ಪೈಪೋಟಿಗೆ ಇಳಿಯಬಹುದು.

37 ವರ್ಷದ ರೊನಾಲ್ಡೊ ಮತ್ತು ಮುಂಬರುವ ಜೂನ್‌ನಲ್ಲಿ 35ನೇ ವಸಂತ ಪೂರೈಸಲಿರುವ ಮೆಸ್ಸಿ ಅವರಿಬ್ಬರಿಗೂ ಇದು ಕೊನೆಯ ವಿಶ್ವಕಪ್ ಟೂರ್ನಿ ಎನ್ನಲಾಗಿದೆ. ಸಮಕಾಲೀನ ಫುಟ್‌ಬಾಲ್‌ನಲ್ಲಿ ಇವರಿಬ್ಬರೂ ಬದ್ಧ ಪ್ರತಿಸ್ಪರ್ಧಿಗಳಾಗಿದ್ದಾರೆ. ರ್‍ಯಾಂಕಿಂಗ್ ಮತ್ತು ಆದಾಯ ಗಳಿಕೆಯ ರೇಸ್‌ನಲ್ಲಿ ಇಬ್ಬರದ್ದೂ ಜಿದ್ದಾಜಿದ್ದಿ ಜೋರಾಗಿದೆ. ಆದರೆ ಇದುವರೆಗೆ ವಿಶ್ವಕಪ್ ಟೂರ್ನಿಗಳಲ್ಲಿ ಇವರಿಬ್ಬರೂ ಮುಖಾಮುಖಿಯಾಗಿಲ್ಲ. ಇಬ್ಬರಿಗೂ ಇದು ಐದನೇ ವಿಶ್ವಕಪ್ ಟೂರ್ನಿಯಾಗಿದೆ.

ಶುಕ್ರವಾರ ತಡರಾತ್ರಿ ಪ್ರಕಟವಾದ ವೇಳಾಪಟ್ಟಿಯಲ್ಲಿ ಮೆಸ್ಸಿ ಆಡುವ ಅರ್ಜೆಂಟಿನಾ ಸಿ ಮತ್ತು ರೊನಾಲ್ಡೊ ಅವರ ಪೋರ್ಚುಗಲ್ ತಂಡವು ಎಚ್ ಗುಂಪಿನಲ್ಲಿ ಸ್ಥಾನ ಪಡೆದಿವೆ. 32 ತಂಡಗಳನ್ನು ಒಟ್ಟು ಎಂಟು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಡಿಸೆಂಬರ್ 18ರಂದು ಫೈನಲ್ ನಡೆಯಲಿದೆ. ಪ್ರತಿ ಗುಂಪಿನಿಂದ ಅಗ್ರ ಎರಡು ತಂಡಗಳು ನಾಕ್‌ಔಟ್ ಹಂತಕ್ಕೆ ಅರ್ಹತೆ ಗಿಟ್ಟಿಸಲಿವೆ.

ಅರ್ಜೆಂಟಿನಾ ತಂಡವು ವಿಶ್ವಕಪ್ ಟೂರ್ನಿಯಲ್ಲಿ ಸೌದಿ ಅರೇಬಿಯಾ ಎದುರು ಮೊದಲ ಪಂದ್ಯವಾಡಲಿದೆ. ಈಚೆಗಷ್ಟೇ ಅರ್ಜೆಂಟಿನಾ ತಂಡವು ಕೊಪಾ ಅಮೆರಿಕ ಪ್ರಶಸ್ತಿ ಗೆದ್ದಿತ್ತು. ಪೋರ್ಚುಗಲ್ ತಂಡವು ಉರುಗ್ವೆ ಎದುರು ಅಭಿಯಾನ ಅರಂಭಿಸಲಿದೆ.

ಆತಿಥೇಯ ಕತಾರ್ ತಂಡವು ಎ ಗುಂಪಿನಲ್ಲಿ ಮತ್ತು ಹಾಲಿ ಚಾಂಪಿಯನ್ ಫ್ರಾನ್ಸ್ ತಂಡವು ಡಿ ಗುಂಪಿನಲ್ಲಿ ಸ್ಥಾನ ಪಡೆದಿವೆ.



ಕ್ರಿಸ್ಟಿಯಾನೊ ರೊನಾಲ್ಡೊ

ಲಯೊನೆಲ್ ಮೆಸ್ಸಿ

ಬೆಂಗಳೂರು ತಂಡಕ್ಕೆ ರಜತ್

ಮುಂಬೈ (ಪಿಟಿಐ): ಮಧ್ಯಪ್ರದೇಶ ತಂಡದ ಬ್ಯಾಟರ್ ರಜತ್ ಪಾಟೀದಾರ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಬೆಂಗಳೂರು ತಂಡದಲ್ಲಿದ್ದ ಲವನೀತ್ ಸಿಸೊಡಿಯಾ ಗಾಯಗೊಂಡಿರುವ ಕಾರಣಕ್ಕೆ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅವರ ಸ್ಥಾನಕ್ಕೆ ರಜತ್ ಸೇರ್ಪಡೆಯಾಗಿದ್ಧಾರೆ ಎಂದು ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಲಗೈ ಬ್ಯಾಟರ್ ರಜತ್ ₹ 20 ಲಕ್ಷ ಮೌಲ್ಯಕ್ಕೆ ತಂಡವನ್ನು ಸೇರಿಕೊಂಡಿದ್ದಾರೆ.

ನೆಟ್‌ಬಾಲ್: ಕರ್ನಾಟಕಕ್ಕೆ ಕಂಚು

ಬೆಂಗಳೂರು: ಕರ್ನಾಟಕ ಮಹಿಳೆಯರ ತಂಡವು ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಹರಿಯಾಣದ ಭಿವಾನಿಯಲ್ಲಿ ಭಾನುವಾರ ಕೊನೆಗೊಂಡ ಟೂರ್ನಿಯ ಸೆಮಿಫೈನಲ್‌ನಲ್ಲಿ ರಾಜ್ಯದ ಮಹಿಳೆಯರ ತಂಡವು 21-30ರಿಂದ ದೆಹಲಿ ತಂಡಕ್ಕೆ ಸೋತಿತು. ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟ 32-19ರಿಂದ ತೆಲಂಗಾಣ ಎದುರು ಗೆದ್ದಿತ್ತು.

ಮಿಯಾಮಿ ಓಪನ್: ಇಗಾ ಚಾಂಪಿಯನ್

ಇಗಾ ಸ್ವಾಟೆಕ್– ಎಎಫ್‌ಪಿ ಚಿತ್ರ

ಮಿಯಾಮಿ (ಎಪಿ): ಪೋಲೆಂಡ್‌ನ ಇಗಾ ಸ್ವಾಟೆಕ್ ಅವರು ಮಿಯಾಮಿ ಓಪನ್ ಮಹಿಳಾ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಅವರು 6-4 6-0ರಿಂದ ಜಪಾನ್‌ನ ನವೊಮಿ ಒಸಾಕ ಅವರನ್ನು ಮಣಿಸಿದರು. ಈ ಜಯದೊಂದಿಗೆ ಪೋಲೆಂಡ್ ಆಟಗಾರ್ತಿ, ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಅವರನ್ನು ಹಿಂದಿಕ್ಕಿ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನಕ್ಕೇರುವುದು ಖಚಿತವಾಗಿದೆ.

ಸೋಮವಾರ ವಿಶ್ವ ರ‍್ಯಾಂಕಿಂಗ್ ಪಟ್ಟಿ ಪ್ರಕಟವಾಗಲಿದೆ.

ಇಗಾ ಅವರಿಗೆ ಇದು ಸತತ 17ನೇ ಪಂದ್ಯದ ಗೆಲುವು.

ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಪಾಪೊವ್‌ಗೆ ಪ್ರಶಸ್ತಿ

ಬೆಂಗಳೂರಿನ ಮಿಥುನ್ ರನ್ನರ್‌ಅಪ್

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ವೀರೋಚಿತ ಹೋರಾಟ ತೋರಿದ ಭಾರತದ ಮಿಥುನ್ ಮಂಜುನಾಥ್ ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್‌ಅಪ್ ಆದರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅವರು 11-21, 19-21ರಿಂದ ಫ್ರಾನ್ಸ್‌ನ ಟೋಮಾ ಜೂನಿಯರ್ ಪಾಪೊವ್ ವಿರುದ್ಧ ಸೋಲನುಭವಿಸಿದರು.

ಶನಿವಾರ ರಾತ್ರಿ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಬೆಂಗಳೂರಿನ ಮಿಥುನ್ 21-18, 21-14ರಿಂದ ಇಂಡೊನೇಷ್ಯಾದ ಕ್ರಿಸ್ಟಿಯನ್ ಅಡಿನಾಟ ಅವರನ್ನು ಮಣಿಸಿದ್ದರು.

ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿ ಪಡೆದಿರುವ 23 ವರ್ಷದ ಮಿಥುನ್, ನಾಲ್ಕರ ಘಟ್ಟದ ಪಂದ್ಯದಲ್ಲಿ 47ನೇ ನಿಮಿಷಗಳಲ್ಲಿ ಎದುರಾಳಿಯ ಸವಾಲು ಮೀರಿದರು. ಇದು ಅವರಿಗೆ ಮೊದಲ ಸೂಪರ್ 100 ಫೈನಲ್ ಆಗಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 79ನೇ ಸ್ಥಾನದಲ್ಲಿರುವ ಮಿಥುನ್, ಸೆಮಿಫೈನಲ್ ಪಂದ್ಯದ ಮೊದಲ ಗೇಮ್‌ನ ವಿರಾಮದ ವೇಳೆಗೆ ಮೂರು ಪಾಯಿಂಟ್ಸ್ ಮುನ್ನಡೆ ಗಳಿಸಿದ್ದರು. ಆದರೆ ತಿರುಗೇಟು ನೀಡಿದ ಇಂಡೊನೇಷ್ಯಾ ಆಟಗಾರ ಸ್ಕೋರ್‌ಅನ್ನು 16-16ರಿಂದ ಸಮಬಲಕ್ಕೆ ತಂದರು. ಆದರೆ ಸತತ ಐದು ಪಾಯಿಂಟ್‌ಗಳ ಬಲದಿಂದ ಮಿಥುನ್ ಗೇಮ್ ಕೈವಶಮಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ಎರಡನೇ ಗೇಮ್‌ನ ಆರಂಭದಲ್ಲೂ ಉಭಯ ಆಟಗಾರರು ಸಮಬಲದ ಹೋರಾಟ ನಡೆಸಿದರು. ಆದರೆ ವಿರಾಮದ ವೇಳೆಗೆ ಮಿಥುನ್ 11-9ರಿಂದ ಮೇಲುಗೈ ಸಾಧಿಸಿದರು. ಅದೇ ಲಯದೊಂದಿಗೆ ಮುನ್ನುಗ್ಗಿದ ಅವರು ಗೇಮ್ ಮತ್ತು ಪಂದ್ಯ ತಮ್ಮದಾಗಿಸಿಕೊಂಡು ಬೀಗಿದರು.

ಮಿಥುನ್ ಈ ವರ್ಷದ ಸಯ್ಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಟೂರ್ನಿಯ ಸೆಮಿಫೈನಲ್ ತಲುಪಿದ್ದರು. ಒಡಿಶಾ ಸೂಪರ್ 100 ಟೂರ್ನಿಯ ಎಂಟರಘಟ್ಟ ತಲುಪಿದ್ದರು. ಕೊರೊನಾ ಸೋಂಕು ಖಚಿತಪಟ್ಟಿದ್ದರಿಂದ ಇಂಡಿಯಾ ಓಪನ್ ಟೂರ್ನಿಯಿಂದ ಹಿಂದೆ ಸರಿದಿದ್ದರು.

ಅಶ್ವಿನಿ– ಶಿಖಾಗೆ ನಿರಾಸೆ: ಮಹಿಳಾ ಡಬಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಅಶ್ವಿನಿ ಭಟ್ ಕೆ. ಮತ್ತು ಶಿಖಾ ಗೌತಮ್ ವೀರೋಚಿತ ಸೋಲು ಅನುಭವಿಸಿದರು. ಜರ್ಮನಿಯ ಸ್ಟೈನ್ ಕುಸ್ಪರ್ಟ್ ಮತ್ತು ಎಮ್ಮಾ ಮೊಸ್‌ಜಿನ್‌ಸ್ಕಿ 21-16, 18-21, 24-22ರಿಂದ ಭಾರತದ ಆಟಗಾರ್ತಿಯರಿಗೆ ಸೋಲುಣಿಸಿದರು.

ಮಿಥುನ್ ಮಂಜುನಾಥ್– ಟ್ವಿಟರ್ ಚಿತ್ರ

ಜೂನಿಯರ್ ವಿಶ್ವಕಪ್ ಹಾಕಿ: ಜರ್ಮನಿ ತಂಡಕ್ಕೆ ಆಘಾತ

ಎಂಟರಘಟ್ಟಕ್ಕೆ ಭಾರತದ ಮಹಿಳೆಯರು

ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಸಮರ್ಥವಾಗಿ ನಿಭಾಯಿಸಿದ ಲಾಲ್‌ರೆಮ್ಸಿಯಾಮಿ ಮತ್ತು ಮುಮ್ತಾಜ್ ಖಾನ್ ಅವರ ಆಟದ ಬಲದಿಂದ ಭಾರತ ತಂಡವು ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿತು.

ಭಾನುವಾರ ನಡೆದ ಟೂರ್ನಿಯ ಗುಂಪು ಹಂತದ ಎರಡನೇ ಪಂದ್ಯದಲ್ಲಿ ಭಾರತದ ಮಹಿಳೆಯರು 2-1ರಿಂದ ಜರ್ಮನಿ ತಂಡಕ್ಕೆ ಆಘಾತ ನೀಡಿದರು. ಲಾಲ್‌ರೆಮ್ಸಿಯಾಮಿ 2ನೇ ನಿಮಿಷದಲ್ಲೇ ಕೈಚಳಕ ತೋರಿದರೆ, ಮುಮ್ತಾಜ್ ಖಾನ್ 25ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಜರ್ಮನಿ ಪರ ಜುಲೆ ಬ್ಲೆಯುಲ್ (57ನೇ ನಿಮಿಷ) ಗೋಲು ಗಳಿಸಿದರು.

ಡಿ ಗುಂಪಿನ ಮೊದಲ ಹಣಾಹಣಿಯಲ್ಲಿ ಭಾರತ ಶನಿವಾರ 5-1ರಿಂದ ವೇಲ್ಸ್ ತಂಡವನ್ನು ಪರಾಭವಗೊಳಿಸಿತ್ತು.

ಇದರೊಂದಿಗೆ ಆಡಿದ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಗುಂಪಿನಲ್ಲಿ ಮೊದಲ ಸ್ಥಾನಕ್ಕೇರಿತು. ಮಂಗಳವಾರ ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಮಲೇಷ್ಯಾ ತಂಡವನ್ನು ಭಾರತ ಎದುರಿಸಲಿದೆ. ಇದೇ 8ರಿಂದ ಕ್ವಾರ್ಟರ್‌ಫೈನಲ್ ಪಂದ್ಯಗಳು ಆರಂಭವಾಗಲಿವೆ.

ಜರ್ಮನಿ ವಿರುದ್ಧದ ಪಂದ್ಯದ ಆರಂಭದಲ್ಲೇ ಭಾರತಕ್ಕೆ ಗೋಲು ಗಳಿಸುವ ಅವಕಾಶ ಲಭಿಸಿತ್ತು. ದೀಪಿಕಾ ಅವರು ಪೆನಾಲ್ಟಿ ಕಾರ್ನರ್‌ನಲ್ಲಿ ಅವಕಾಶದಲ್ಲಿ ಗೋಲು ಗಳಿಕೆಯ ಪ್ರಯತ್ನವನ್ನು ಜರ್ಮನಿ ಗೋಲ್‌ಕೀಪರ್ ತಡೆದರು. ಆದರೆ ಎರಡನೇ ನಿಮಿಷದಲ್ಲಿ ಲಭಿಸಿದ ಅವಕಾಶದಲ್ಲಿ ಲಾಲ್‌ರೆಮ್ಸಿಯಾಮಿ ತಪ್ಪು ಮಾಡಲಿಲ್ಲ.

ಇದಾದ ಬಳಿಕ ಜರ್ಮನಿ ತಂಡಕ್ಕೆ ಹಲವು ಪೆನಾಲ್ಟಿ ಅವಕಾಶಗಳು ಸಿಕ್ಕವು. ಆದರೆ ಭಾರತದ ಗೋಲಕೀಪರ್ ಬಿಚುದೇವಿ ಕರಿಬಮ್, ಅವರ ಪ್ರಯತ್ನಗಳಿಗೆ ಅಡ್ಡಗಾಲು ಹಾಕಿದರು. ಎರಡನೇ ಕ್ವಾರ್ಟರ್‌ನಲ್ಲಿ ಮುಮ್ತಾಜ್ ಮೂಲಕ ಗೋಲು ಗಳಿಸಿದ ತಂಡವು ಮುನ್ನಡೆಯನ್ನು 2-0ಗೆ ವಿಸ್ತರಿಸಿಕೊಂಡಿತು.

ಆದರೆ ಪಂದ್ಯ ಕೊನೆಗೊಳ್ಳಲು ಮೂರು ನಿಮಿಷಗಳಿರುವಾಗ ಜುಲೆ ಬ್ಲೆಯುಲ್ ರಿವರ್ಸ್ ಹಿಟ್ ಮೂಲಕ ಗೋಲು ಗಳಿಸಿದರು.

ಬಿಚುದೇವಿ ಕರಿಬಮ್– ಟ್ವಿಟರ್ ಚಿತ್ರ

ಅಥ್ಲೆಟಿಕ್ಸ್: ಕಾರ್ತಿಕ್, ಸಂಜೀವನಿಗೆ ಚಿನ್ನ

ಕೊಯಿಕ್ಕೋಡ್(ಪಿಟಿಐ): ಉತ್ತರಪ್ರದೇಶದ ಕಾರ್ತಿಕ್ ಕುಮಾರ್ ಮತ್ತು ಮಹಾರಾಷ್ಟ್ರದ ಸಂಜೀವನಿ ಜಾಧವ್ ಇಲ್ಲಿ ನಡೆಯುತ್ತಿರುವ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ 10 ಸಾವಿರ ಮೀಟರ್ ಓಟದಲ್ಲಿ ಚಿನ್ನದ ಪದಕ ಜಯಿಸಿದರು.

ಫಲಿತಾಂಶ: ಪುರುಷರು: 10000ಮೀ ಓಟ: ಕಾರ್ತಿಕ್ ಕುಮಾರ್ (ಉತ್ತರಪ್ರದೇಶ; ಕಾಲ: 29ನಿ,20.21ಸೆ;)-1, ಸಾವನ್ ಬರ್ವಾಲ್ (ಹಿಮಾಚಲಪ್ರದೇಶ)-2, ಗುಲ್ವೀರ್ ಸಿಂಗ್ (ಉತ್ತರಪ್ರದೇಶ)-3 ಮಹಿಳೆಯರು: 10000 ಮೀ ಓಟ: ಸಂಜೀವನಿ ಜಾಧವ್ (ಮಹಾರಾಷ್ಟ್ರ; 33ನಿ,13.07ಸೆ)-1, ಸೀಮಾ (ಹಿಮಾಚಲಪ್ರದೇಶ)-2, ಕವಿತಾ ಜಾಧವ (ಉತ್ತರಪ್ರದೇಶ)-3 ಪೋಲ್ ವಾಲ್ಟ್: ರೋಸಿ ಮೀನಾ ಪಾಲ್ ರಾಜ್ (ತಮಿಳುನಾಡು; 4 ಮೀ.) -1, ಬರಾನಿಕಾ ಇಳಂಗೋವನ್ (ತಮಿಳುನಾಡು)-2, ಪೂಜಾ (ಹರಿಯಾಣ)-3.

ವಿಶ್ವಕಪ್ ಜಯಿಸಿದ ಆಸ್ಟ್ರೇಲಿಯಾ ಮಹಿಳೆಯರ ಕ್ರಿಕೆಟ್ ತಂಡ –ಎಎಫ್‌ಪಿ ಚಿತ್ರ

ಮೆಗ್‌ಲ್ಯಾನಿಂಗ್ ಪಡೆಗೆ ಏಕದಿನ ಕ್ರಿಕೆಟ್ ವಿಶ್ವಕಪ್

ಆಸ್ಟ್ರೇಲಿಯಾ ಸಪ್ತ ಸಾಧನೆ

ಕ್ರೈಸ್ಟ್‌ಚರ್ಚ್ (ಪಿಟಿಐ): ಆಸ್ಟ್ರೇಲಿಯಾ ಮಹಿಳೆಯರ ಕ್ರಿಕೆಟ್ ತಂಡವು ಏಳನೇ ಬಾರಿ ಏಕದಿನ ಕ್ರಿಕೆಟ್ ವಿಶ್ವಕಪ್ ಕಿರೀಟವನ್ನು ಧರಿಸಿತು.

ಇದರೊಂದಿಗೆ ವಿಶ್ವ ಕ್ರಿಕೆಟ್‌ನಲ್ಲಿ ತನ್ನ ಪಾರಮ್ಯವನ್ನು ವಿಸ್ತರಿಸಿತು. ಭಾನುವಾರ ನಡೆದ ಫೈನಲ್‌ನಲ್ಲಿ ಅಲೀಸಾ ಹೀಲಿ ದಾಖಲಿಸಿದ ಅಮೋಘ ಶತಕದ ಬಲದಿಂದ ಇಂಗ್ಲೆಂಡ್ ವಿರುದ್ಧ 71 ರನ್‌ಗಳಿಂದ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 356 ರನ್ ಗಳಿಸಿತು. ಹೀಲಿ (170; 138ಎ) ಶತಕದಾಟದಿಂದಾಗಿ ಆಸ್ಟ್ರೇಲಿಯಾ ಬೃಹತ್ ಮೊತ್ತ ದಾಖಲಿಸಲು ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ಕಳೆದ ಬಾರಿಯ ಚಾಂಪಿಯನ್ ಇಂಗ್ಲೆಂಡ್ 43.4 ಓವರ್‌ಗಳಲ್ಲಿ 285 ರನ್ ಗಳಿಸಿ ಆಲೌಟ್ ಆಯಿತು. ನಥಾಲಿ ಶಿವರ್ (148; 121ಎ) ದಿಟ್ಟ ಆಟ ಮಾತ್ರ ಇಂಗ್ಲೆಂಡ್ ಅಭಿಮಾನಿಗಳ ಮನದಲ್ಲಿ ಉಳಿಯಿತು.

ಇಂಗ್ಲೆಂಡ್ ತಂಡಕ್ಕೆ ಆಸ್ಟ್ರೇಲಿಯಾದ ಮೆಗನ್ ಶುಟ್ (42ಕ್ಕೆ2) ಆರಂಭದಲ್ಲಿಯೇ ಆಘಾತ ನೀಡಿದರು. ಡೇನಿಯಲ್ ವಯಟ್ ಮತ್ತು ಟ್ಯಾಮಿ ಬೆಮೌಂಟ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಅವರ ಹಾದಿಯಲ್ಲಿಯೇ ಸಾಗಿದ ಲೆಗ್‌ಸ್ಪಿನ್ನರ್ ಅಲನಾ ಕಿಂಗ್ (64ಕ್ಕೆ3) ಇಂಗ್ಲೆಂಡ್ ಹಾದಿಯನ್ನು ಮತ್ತಷ್ಟು ಕಠಿಣಗೊಳಿಸಿದರು.

ಹೀಲಿ ದಾಖಲೆ: ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆಸ್ಟ್ರೇಲಿಯಾದ ಆರಂಭಿಕ ಜೋಡಿ ಹೀಲಿ ಮತ್ತು ರಚೆಲ್ ಹೇಯ್ನ್ಸ್ ಮೊದಲ ವಿಕೆಟ್ ಜೊತೆಯಾಟದಲ್ಲಿ 160 ರನ್ ಸೇರಿಸಿ ಅಮೋಘ ಆರಂಭ ನೀಡಿದರು.

ಹೀಲಿ ಏಕದಿನ ವಿಶ್ವಕಪ್ ಕ್ರಿಕೆಟ್ ಫೈನಲ್‌ನಲ್ಲಿ (ಮಹಿಳೆ ಮತ್ತು ಪುರುಷರು ಸೇರಿ) ಗರಿಷ್ಠ ವೈಯಕ್ತಿಕ ಸ್ಕೋರ್ ದಾಖಲೆಯನ್ನೂ ಬರೆದರು.

ಆ್ಯಡಂ ಗಿಲ್‌ಕ್ರಿಸ್ಟ್ (149; 2007), ನಥಾಲಿ ಶಿವರ್ (148; ಇದೇ ಪಂದ್ಯ), ರಿಕಿ ಪಾಂಟಿಂಗ್ (140; 2003) ಅವರನ್ನು ಹೀಲಿ ಹಿಂದಿಕ್ಕಿದರು.

ತಂಡವು ಗಳಿಸಿದ 356 ರನ್‌ಗಳು ಎರಡನೇ ಅತಿ ಹೆಚ್ಚು ಸ್ಕೋರ್ ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು. 2003ರಲ್ಲಿ ಭಾರತದ ಎದುರು ಆಸ್ಟ್ರೇಲಿಯಾ ಪುರುಷರ ತಂಡವು 2 ವಿಕೆಟ್‌ಗಳಿಗೆ 359 ರನ್ ಗಳಿಸಿದ್ದು ಗರಿಷ್ಠ ಸ್ಕೋರ್ ಆಗಿದೆ.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 5ಕ್ಕೆ356 (ಅಲೀಸಾ ಹೀಲಿ 170, ರಚೆಲ್ ಹೇಯ್ನ್ಸ್ 68, ಬೆಥ್ ಮೂನಿ 62, ಅನ್ಯಾ ಶ್ರಬ್‌ಸೋಲ್ 46ಕ್ಕೆ3) ಇಂಗ್ಲೆಂಡ್:43.4 ಓವರ್‌ಗಳಲ್ಲಿ 285 (ಟ್ಯಾಮಿ ಬೇಮೌಂಟ್ 27, ಹೀಥರ್ ನೈಟ್ 26, ನಥಾಲಿ ಶಿವರ್ ಔಟಾಗದೆ 148, ಅಮಿ ಜೋನ್ಸ್ 20, ಸೋಫಿಯಾ ಡಂಕ್ಲಿ 22, ಚಾರ್ಲೊಟ್ ಡೀನ್ 21, ಮೇಘನ್ ಶೂಟ್ 42ಕ್ಕೆ2, ಅಲನಾ ಕಿಂಗ್ 64ಕ್ಕೆ3, ಜೆಸ್ ಜಾನ್ಸನ್ 57ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 71 ರನ್‌ಗಳ ಜಯ. ಪಂದ್ಯ ಮತ್ತು ಟೂರ್ನಿಯ ಆಟಗಾರ್ತಿ: ಅಲೀಸಾ ಹೀಲಿ.

ಆಸ್ಟ್ರೇಲಿಯಾ ವಿಶ್ವಕಪ್ ಸಾಧನೆ

ಪ್ರಶಸ್ತಿ ಜಯ	1978, 1982, 1988, 1997, 2005, 2013, 2022
ರನ್ನರ್ಸ್ ಅಪ್	1973, 2000

ಪತ್ನಿಯ ದಾಖಲೆ ಕಣ್ತುಂಬಿಕೊಂಡ ಸ್ಟಾರ್ಕ್

ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಭಾನುವಾರ ಶತಕದ ದಾಖಲೆ ಮಾಡಿದ ತಮ್ಮ ಪತ್ನಿ ಅಲೀಸಾ ಹೀಲಿ ಅವರ ಆಟವನ್ನು ಕಣ್ತುಂಬಿಕೊಂಡರು. 2015ರಲ್ಲಿ ಆಸ್ಟ್ರೇಲಿಯಾ ಪುರುಷರ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದಿತ್ತು. ಆಗ ಟೂರ್ನಿಯ ಶ್ರೇಷ್ಠ ಆಟಗಾರ ಗೌರವಕ್ಕೆ ಪಾತ್ರರಾಗಿದ್ದ ಸ್ಟಾರ್ಕ್ ಅವರೊಂದಿಗೆ ಹೀಲಿ ಟ್ರೋಫಿ ಹಿಡಿದು ಸಂಭ್ರಮಿಸಿದ್ದರು. ಇದೀಗ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಶ್ರೇಷ್ಠ ಆಟಗಾರ್ತಿ ಗೌರವ ಗಳಿಸಿದ ವಿಕೆಟ್‌ಕೀಪರ್ ಹೀಲಿಯೊಂದಿಗೆ ಸ್ಟಾರ್ಕ್ ಸಂಭ್ರಮಿಸಿದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಗಮನ ಸೆಳೆದಿದೆ.

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.

ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.

02262676816